ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸರ್ವಾನುಮತದ ಒಪ್ಪಿಗೆ ನೀಡಲಾಯಿತು.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣಾ ನಿರ್ಣಯದ ಮೇಲಿನ ಚರ್ಚೆ.

(ಮುಖ್ಯಮಂತ್ರಿಯವರಿಂದ ಉತ್ತರ)

ಉಪಾಧ್ಯಕ್ಷರು : ಈಗ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪ ಸಭಾಧ್ಯಕ್ಷಿಣಿಯವರೇ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾ ನಿರ್ಣಯವನ್ನು ಮಾನ್ಯ ಸದಸ್ಯರಾಗಿರತಕ್ಕ ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಮಂಡಿಸಿದ್ದು, ಶ್ರೀ ಪ್ರಭಾಕರ್ ರಾಣೆಯವರು ಏನು ಅನುಮೋದನೆ ಮಾಡಿದ್ದಾರೆ. ಆ ನಿರ್ಣಯದ ಮೇಲೆ ಸುದೀರ್ಘವಾದ ಚರ್ಚೆ ಈ ಸದನದಲ್ಲಿ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯಲ್ಲಿ ವಂದನಾ ನಿರ್ಣಯವನ್ನು ಮಂಡನೆ ಮಾಡಿದವರೂ ಇಲ್ಲ, ಅನುಮೋದನೆ ಮಾಡಿದವರೂ ಇಲ್ಲ. ಭಾಷಣ ಮಾಡಿದವರು ಅಷ್ಟೇ ಇದ್ದೇವೆ; ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಇಷ್ಟು ಹೊತ್ತು ಇಲ್ಲೇ ಇದ್ದರು. ಈಗಷ್ಟೇ ಹೊರ ಹೋಗಿದ್ದಾರೆಂದು ಕಾಣುತ್ತದೆ. ಅವರು ಬರುತ್ತಾರೆ. ಶ್ರೀಯುತ ರಾಣೆಯವರು ಸದ್ಯಕ್ಕೆ ನಗರದಲ್ಲಿಲ್ಲ ಎಂದು ಕಾಣುತ್ತದೆ. ಮುಖ್ಯವಾಗಿ ತಾವು ಇದ್ದರೆ ಸಾಕು ನಮಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಂಡನೆ ಹಾಗು ಅನುಮೋದನೆ ಮಾಡಿದವರಿಗೆ ಈ ನಿರ್ಣಯವನ್ನು ಪಾಸ್ ಮಾಡಿಸಿಕೊಳ್ಳಬೇಕೆಂದು ಕಳಕಳಿ ಇರಬೇಕಲ್ಲವೇ? ಹೀಗೆ ಆಗಬಾರದು. ನೀವಿದ್ದೀರೆ ಎಂದು ಹೇಳುವುದು ಅಲ್ಲ. ಸೀರಿಯಸ್‌ನೆಸ್ ಇರಬೇಕೆಂದು ದೃಷ್ಟಿಯಿಂದ ಹೇಳುತಿದ್ದೇವೆ.

ಶ್ರೀ ಬಸವರಾಜ್ ರಾಯರೆಡ್ಡಿ : ಮಂಡನೆ ಮಾಡಿದವರ ಜೊತೆ ಆ ಕಡೆಯ ಶಾಸಕರೆಲ್ಲರೂ ಖಾಲಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಈ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಯಾಗತಕ್ಕಂಥಾದ್ದು ಏನಿದೆ, ಅದು ರಾಜ್ಯಾಂಗ ಬದ್ಧವಾಗಿರತಕ್ಕಂತಹ ಒಂದು ವಿಧ ಅಥವಾ ಅದರ ನಿಯಮಗಳಿಗನುಗುಣವಾಗಿ ಇಲ್ಲಿ ನಿರ್ಣಯವನ್ನು ಮಂಡನೆ ಮಾಡತಕ್ಕಂಥದ್ದು ನೀತಿ ನಿಯಮಗಳನ್ನು ಅನುಸರಿಸತಕ್ಕಂಥಾದ್ದು ಹಾಗೂ ಅದರ ಮೇಲೆ ಚರ್ಚೆ ಮಾಡತಕ್ಕಂಥಾದ್ದು ರಾಜ್ಯಾಂಗಬದ್ಧವಾಗಿರತಕ್ಕಂತಹ ಒಂದು ವಿಧಿಗನುಸಾರವಾಗಿ ನಾವು ಇಲ್ಲಿ ಮಾಡತಕ್ಕಂತಹ ಒಂದು ಕಾರ್ಯಕ್ರಮ. ಈ ಒಂದು ಚರ್ಚೆ ಈ ಸದನದಲ್ಲಿ ಈ ಸಾರಿ ಕೂಡ ನಡೆದಿದೆ. ಈ ಚರ್ಚೆ ನಡೆಯತಕ್ಕಂತಹ ಕಾಲದಲ್ಲಿ ಸರಕಾರ 91-92ರ ಅವಧಿಯಲ್ಲಿ ಅಂದರೆ ಏಪ್ರಿಲ್ ತಿಂಗಳಿನಿಂದ ಏನು ವಾರ್ಷಿಕ ವರ್ಷ ಪ್ರಾರಂಭವಾಗುತ್ತದೆ ಆ ಅವಧಿಯಲ್ಲಿ ಯಾವ ಕಾರ್ಯಕ್ರಮಗಳ ಬಗ್ಗೆ ನಾವು ಯಾವ ನೀತಿ ನಿರೂಪಣೆಯನ್ನು ಮಾಡಬೇಕೆಂಬ ವಿಚಾರಕ್ಕೆ ಮಾತ್ರ ಅದನ್ನು ಸೀಮಿತಗೊಳಿಸಿ ನಾವು ರಾಜ್ಯಪಾಲರ ಭಾಷಣವನ್ನು ಮಂಡನೆ ಮಾಡುತ್ತೇವೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಾವು ಹಣಕಾಸಿನ ವಿಚಾರ ಮತ್ತೊಂದಕ್ಕೆ ಹೋದಾಗ ನಾವು ಆಯವ್ಯಯ ಪತ್ರದ ಬಗ್ಗೆ ವಿಚಾರ ಮಾಡುತ್ತೇವೆ ಅದೂ ಕೂಡ ಸದನದ ಮುಂದೆ ಈಗಾಗಲೇ ಮಂಡನೆಯಾಗಿದೆ. ಕೆಲವು ವಿಚಾರಗಳು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗಿರತಕ್ಕಂತಹವು ಏನು ಇವೆ, ಅವು ಕೆಲವೊಮ್ಮೆ ಬಜೆಟ್ಟಿನಲ್ಲಿ ಕೂಡ ನಮೂದಾಗತಕ್ಕಂತಹ ಸಂದರ್ಭಗಳು ಹೆಚ್ಚು ಬರುತ್ತವೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲಾ ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ಆದರೆ ಆಯವ್ಯಯ ಪತ್ರದಲ್ಲಿ ಹೆಚ್ಚಾಗಿ ನಮ್ಮ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಹಾಗೆ ನಮ್ಮ ಕಾರ್ಯಕ್ರಮಗಳು ಯಾವ್ಯಾವ ಕ್ಷೇತ್ರಕ್ಕೆ ಯಾವ ರೀತಿ ಎನ್ನತಕ್ಕಂತಹ ವಿಚಾರದಲ್ಲಿ ನಾವು ಸ್ಪಷ್ಟವಾದಂತಹ ನಿರೂಪಣೆ ಅಲ್ಲಿ ಮಾಡುತ್ತೇವೆ. ಕೆಲವೊಮ್ಮೆ ರಾಜ್ಯಪಾಲರ ಭಾಷಣದಲ್ಲಿ ನಾವೇನು ಮಾಡುತ್ತೇವೆಂದರೆ, ಎಲ್ಲಾ ಪಾಲಿಸಿ ವಿಚಾರಗಳನ್ನು ಅಥವಾ ನೀತಿ ನಿರೂಪಣೆಗಳೆಲ್ಲವನ್ನೂ ನಾವು ಮಾಡುವುದಕ್ಕೆ ಹೋಗುವುದಿಲ್ಲ. ಕೆಲವನ್ನು ಮಾಡುತ್ತೇವೆ. ಈ ವಾರ್ಷಿಕ ಅವಧಿಯಲ್ಲಿ ಹೊಸ ವಿಚಾರವನ್ನು ನಾವು ಪ್ರಸ್ತಾಪ ಮಾಡತಕ್ಕಂಥಾದ್ದು ಕೆಲವೊಮ್ಮೆ ಉಂಟು. ಕೆಲವೊಮ್ಮೆ ಸರಕಾರ ವಿಚಾರ ಮಾಡಿ ಇಂತಹ ಕೆಲವು ವಿಚಾರಗಳನ್ನು ಹೊಸದಾಗಿ ಸೇರಿಸಿ ಅದರ ಬಗ್ಗೆ ನೀತಿ ನಿರೂಪಿಸಿ ಕಾರ್ಯಕ್ರಮ ಹಾಕತಕ್ಕಂತಹ ಪದ್ಧತಿ ಓಂದಿನಿಂದ ನಡೆದುಕೊಂಡು ಬಂದಿದೆ. ಅದೇ ರೀತಿ ನಾವೂ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ಇಲ್ಲಿ ಪ್ರಾರಂಭ ಮಾಡತಕ್ಕಂತಹ ಕಾಲದಲ್ಲಿ ವಿರೋಧಿ ಪಕ್ಷದ ನಾಯಕರು, ಉಪನಾಯಕರು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಮತ್ತು ಪಕ್ಷೇತರರಲ್ಲದೆ ಆಡಳಿತ ಪಕ್ಷಕ್ಕೆ ಸೇರಿರತಕ್ಕಂತಹ ಮಾನ್ಯ ಸದಸ್ಯರುಗಳನ್ನು ಒಳಗೊಂಡಂತೆ ಎಲ್ಲರೂ ಸಹ ಹಲವಾರು ವಿಷಯಗಳ ಮೇಲೆ ಬೆಳಕನ್ನು ಚೆಲ್ಲುವಂತಹ ವಿಧಿ ವಿಧಾನಗಳನ್ನು ಅಳವಡಿಸಿಕೊಂಡು, ಅವರ ಅಭಿಪ್ರಾಯಗಳನ್ನು ಇಲ್ಲಿ ಹೇಳಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆಂದು ನನ್ನ ಅನಿಸಿಕೆ. ನಾನು ಅವರ ಹೇಳಿಕೆಗಳನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿ ನಾನು ಈ ಮಾತನಾಡುತ್ತಿದ್ದೇನೆ. ಕೆಲವೊಮ್ಮೆ ನಾವು ಒಂದು ವಿಚಾರವನ್ನು ನಮ್ಮ ಅವಲೋಕನೆಗೆ ಅಳವಡಿಸಿದಾಗ ಹೇಳತಕ್ಕಂತಹ ಧಾಟಿ ಪ್ರಶ್ನೆ ಒಂದೇ ಅಲ್ಲ, ಟೀಕೆ ಟಿಪ್ಪಣಿಗಳೂ ಕೂಡ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಸಹಜವಾಗಿ ಬರತಕ್ಕತಹ ಸಂದರ್ಭಗಳು ಇರುತ್ತವೆ. ಟೀಕೆ ಟಿಪ್ಪಣಿಗಳನ್ನು ಕೂಡ ಸರಕಾರ ಸಹೃದಯದಿಂದ ಸ್ವೀಕಾರ ಮಾಡತಕ್ಕಂತಹ ವಿಚಾರವನ್ನು ಇಟ್ಟೇ ನಾನು ಮುಂದಕ್ಕೆ ಹೋಗುತ್ತೇನೆ. ಆಡಳಿತ ನಡೆಸತಕ್ಕಂತಹ ಕಾಲದಲ್ಲಿ ನಾವು ಕೆಲವೊಮ್ಮೆ ತಪ್ಪುಗಳನ್ನು ಮಾಡುವುದೂ ಕೂಡ ಇರುತ್ತದೆ ಎಂಬ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಆಡುತ್ತಿದ್ದೇನೆ. ಏಕೆಂದರೆ ಆಡಳಿತವನ್ನು ಮಾಡಿರತಕ್ಕಂತಹವರು ತಾವೂ ಇದ್ದೀರಿ, ನಾವು ಇದ್ದೇವೆ. ನಾವು ಬೇಕೆಂದು ತಪ್ಪು ಮಾಡಿದ್ದರೆ ಅದಕ್ಕೆ ತಲೆಬಾಗಬೇಕಾಗುತ್ತದೆ. ಕೆಲವು ಬಾರಿ ನಮಗೆ ಗೊತ್ತಿಲ್ಲದೆ ತಪ್ಪು ಮಾಡಿದರೆ ಅದು ಆಗಬಾರದು ಎನ್ನುವ ಅನಿಸಿಕೆಯ ಹಿನ್ನೆಲೆಯಲ್ಲಿ ಅದನ್ನು ಸರಿಪಡಿಸತಕ್ಕ ವಿಚಾರದ ಬಗ್ಗೆ ಕಾರ್ಯಕ್ರಮದ ಬಗ್ಗೆ ಗಮನವನ್ನು ಕೊಡಬೇಕು. ಈವೊಂದು ವಿಚಾರಧಾರೆಯ ಹಿನ್ನೆಲೆಯಲ್ಲಿ ಈ ಸಂದರ್ಭದಲ್ಲಿ ಉತ್ತರ ಕೊಡುತ್ತಿದ್ದೇನೆ. ತಮ್ಮೆಲ್ಲರ ಅನಿಸಿಕೆಗಳನ್ನು ತಮ್ಮ ಮಾತಿನ ಮುಖಾಂತರ ತಮ್ಮ ಭಾಷಣದ ಮುಖಾಂತರ ತಾವು ಏನು ಇಟ್ಟಿದ್ದೀರಿ, ಅದರ ಅರ್ಥದ ವ್ಯಾಖ್ಯೆಯ ವ್ಯಾಪ್ತಿಯಲ್ಲಿ ಮಾತ್ರ ನಾನು ಪರಿಶೀಲನೆ ಮಾಡುತ್ತಿದ್ದೇನೆ. ಮತ್ತು ಅದನ್ನು ಗ್ರಹಣ ಮಾಡಿದ್ದೇನೆ. ಈ ಸಂದರ್ಭದಲ್ಲಿ ಕೆಲವು ಎಚ್ಚರದ ಮಾತು ಕೂಡ ಬರುತ್ತವೆ. ನಾವು ಅದನ್ನು ಒಳ್ಳೆಯ ರೀತಿಯಲ್ಲಿ ತೆಗೆದುಕೊಳ್ಳತಕ್ಕ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ಅನಾವಶ್ಯಕವಾದ ಟೀಕೆ ಟಿಪ್ಪಣಿ ಆಧಾರರಹಿತವಾಗಿ ಬಂದರೆ, ಅದನ್ನು ಬೇಕೆಂದು ಮಾಡಿದರೆ, ಅಥವಾ ಗೊತ್ತಿಲ್ಲದೆ ಮಾಡಿದ್ದರೆ ಆವೊಂದು ಭಾವನೆಯನ್ನು ಇಟ್ಟುಕೊಂಡು ನಾನು ಮುಂದಕ್ಕೆ

ಹೋಗುತ್ತೇನೆ. ಅದು ಸರಿ ಎನ್ನತಕ್ಕ ಭಾವನೆ ಬಂದೇಬರುತ್ತದೆ. ಆ ಸಂದರ್ಭದಲ್ಲಿ ತಾವು ಕೂಡ ಅಷ್ಟೇ ವೈಶಾಲ್ಯತೆಯ ಸಹೃದಯತೆಯ ಭಾವನೆಯಿಂದ ಸ್ವೀಕಾರ ಮಾಡುತ್ತೀರಿ ಎಂದು ನಾನು ಭಾವಿಸುತ್ತೇನೆ. ಟೀಕೆ ಟಿಪ್ಪಣಿ ಮಾಡತಕ್ಕ ವಿಚಾರ ಅನಾವಶ್ಯಕ. ಅದಕ್ಕೆ ಕೈಹಾಕತಕ್ಕ ಅವಶ್ಯಕತೆ ನನಗೆ ಕಾಣುತ್ತಿಲ್ಲ. ಏಕೆಂದರೆ ತಾವು ಆಡಿರತಕ್ಕ ಮಾತುಗಳು ತಮ್ಮ ಭಾಷಣದ ಪಟ್ಟಿಯನ್ನು ತರಿಸಿ ಪರಿಶೋಧನೆ ಮಾಡಿದಾಗ ಎಲ್ಲೋ ಅಲ್ಲಿ ಇಲ್ಲಿ ಒಂದು ಸಂದರ್ಭಗಳನ್ನು ಬಿಟ್ಟರೆ ನನಗಂತೂ ಏನೂ ಕಂಡಿಲ್ಲ. ಅದಕ್ಕಾಗಿ ನಾನು ಆ ಕ್ಷೇತ್ರಕ್ಕೆ ಕೈಹಾಕುತ್ತಿಲ್ಲ. ಅದು ಬೇರೆ; ಆ ಭಾಷಣ ಬೇರೆ, ಭಾಷೆ ಬೇರೆ, ಆ ವಿಚಾರಧಾರೆ ಬೇರೆ ಅದಕ್ಕೆ ಉತ್ತರ ಕೊಡತಕ್ಕ ರೀತಿನೀತಿಯೂ ಬೇರೆಯಾಗುತ್ತದೆ. ಆ ರೀತಿ ಬಂದಾಗ ನಮಗೆ ಸರಿಕಂಡಂತಹ ರೀತಿಯಲ್ಲಿ ಸಕಾರಣದ ಆಧಾರದಮೇಲೆ ಅಷ್ಟೇ ಕಠಿಣವಾದ ಉತ್ತರವನ್ನು ಕೊಡಲಿಕ್ಕೆ ಆ ದಿಸೆಯಲ್ಲಿ ಕೈಹಾಕಬೇಕಾಗುತ್ತದೆ. ಆದರೆ ಅಂತಹದ್ದು ಏನೂ ನನಗೆ ಇಲ್ಲಿ ಕಂಡಿಲ್ಲ. ನಾನು ಆ ಬಗ್ಗೆ ಕೂಡ ವಿಚಾರ ದೃಷ್ಟಿಯಿಂದಲೇ ಈ ಮಾತನ್ನು ಆಡುತ್ತಿದ್ದೇನೆ. ಅದು ಏನೇ ಇರಲಿ; ಹಲವಾರು ವಿಚಾರಗಳ ಬಗ್ಗೆ ಬೆಳಕು ಚೆಲ್ಲತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ ಎನ್ನತಕ್ಕ ಮೂಲಭೂತವಾದ ಮಾತನ್ನು ಹೇಳಿದ್ದೇನೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ವಿರೋಧ ಪಕ್ಷದ ನಾಯಕರನ್ನೊಳಗೊಂಡಂತೆ ಮಾನ್ಯ ಸದಸ್ಯರುಗಳನ್ನು ಸೇರಿಸಿ ಆ ಕಡೆ ಸದಸ್ಯರು ಈ ಕಡೆ ಸದಸ್ಯರು ತಮಗೆಲ್ಲರಿಗೂ ಕೂಡ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ. ನಮ್ಮ ಗಮನವನ್ನು ಅಂದರೆ ಸರ್ಕಾರದ ಗಮನವನ್ನು ಹಲವಾರು ವಿಚಾರಗಳ ಬಗ್ಗೆ ತಾವು ಸೆಳೆದಿದ್ದಕ್ಕಾಗಿ, ಮಾನ್ಯ ಸದಸ್ಯರುಗಳು ತಮ್ಮ ಅನಿಸಿಕೆಗಳನ್ನು ಭಾಷಣದ ಮುಖಾಂತರ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗದೇ ಇರಬಹುದು. ಅದಕ್ಕೆ ಹಲವಾರು ಕಾರಣಗಳು ಇರಬಹುದು. ತಾವು ಸಂದರ್ಭದಲ್ಲಿ, ಸಭೆಯಲ್ಲಿರುವುದಕ್ಕೆ ಸಾಧ್ಯವಾಗದೇ ಇರಬಹುದು. ತಾವು ಯಾವ ಮಾತುಗಳನ್ನು ಆಡಬಹುದು ಎನ್ನತಕ್ಕ ವಿಚಾರವನ್ನು ಗಮನದಲ್ಲಿಟ್ಟು ಮುನ್ನಡೆಯೋಣ. ಇಲ್ಲಿ ಯಾವ ವಿಚಾರಗಳು ಪ್ರಸ್ತಾವಕ್ಕೆ ಒಳಪಟ್ಟಿವೆ, ಅವುಗಳಿಗೆ ಮಾತ್ರ ಉತ್ತರ ಕೊಡತಕ್ಕ ವಿಚಾರಕ್ಕೆ ಕೈಹಾಕುತ್ತೇನೆ. ಕೆಲವೊಂದು ವಿಚಾರಗಳನ್ನು ತಾವು ಪ್ರಸ್ತಾಪ ಮಾಡದಿದ್ದರೂ ನಾವು ಅದನ್ನು ಪ್ರಸ್ತಾಪ ಮಾಡತಕ್ಕದ್ದು ನಮ್ಮ ಆದ್ಯಕರ್ತವ್ಯ. ಸರ್ಕಾರದ ಕರ್ತವ್ಯ ಸಹ ಅದರಲ್ಲಿ ಅಡಗಿದೆ. ಆ ದೃಷ್ಟಿಯಿಂದಲೂ ಈ ವಿಚಾರವನ್ನು ಪೂರ್ವಪೀಠಿಕೆಯಾಗಿ ತಮ್ಮ ಮುಂದಿಟ್ಟು, ಈಗ ನಾನು ನೇರವಾಗಿ ಚರ್ಚೆಯಾಗಿರತಕ್ಕಂತಹ ವಿಷಯಗಳ ಬಗ್ಗೆ ಒಂದು ಮಾತನ್ನು ಆಡಿ ಮುಂದಿನ ವಿಚಾರಕ್ಕೆ ಕೈಹಾಕುತ್ತೇನೆ. ಸುಮಾರು ನನಗೆ ಗೊತ್ತಿರುವ ಹಾಗೆ ಒಟ್ಟು 21ಜನ ಮಾನ್ಯ ಸದಸ್ಯರುಗಳು ವಿರೋಧ ಪಕ್ಷದ ನಾಯಕರನ್ನೊಳಗೊಳಗೊಂಡಂತೆ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. 15 ಗಂಟೆ 32 ನಿಮಿಷಗಳ ಕಾಲ ಇದರಲ್ಲಿ ಕಳೆದಿದೆ. ಸುಮಾರು ಏಳು ದಿವಸ ಮಧ್ಯೆ ಒಂಪೆರಡು ದಿವಸ ಬಿಟ್ಟು ಆ ಲೆಕ್ಕ ಹೋದರೂ ಐದು ದಿವಸಗಳ ಕಾಲ ಚರ್ಚೆ ನಡೆದಿದೆ. ಅದು ಏನೇ ಇರಲಿ. ನಮ್ಮ ಪಕ್ಷ ಕಾಂಗ್ರೆಸ್(ಐ) ಪಕ್ಷದ ವತಿಯಿಂದ, ವಿರೋಧಪಕ್ಷವಾದ ಜನತಾ ದಳ, ಭೈರೇಗೌಡರ ಜನತಾಪಕ್ಷ, ಭಾರತೀಯ ಜನತಾಪಕ್ಷ, ಕಮರುಲ್ಲಾ ಇಸ್ಲಾಂರವರ ಮುಸ್ಲಿಂಲೀಗ್ ಹಾಗೂ ಪಕ್ಷೇತ್ರ ಮಾನ್ಯ ಸದಸ್ಯರುಗಳಾದ ಶಿವರಾಮೇಗೌಡರು ಬಿ.ಎ. ಪಾಟೀಲರು ವಾಟಾಳ್ ನಾಗರಾಜ್ ಅವರು ಇತ್ಯಾದಿ ಇತ್ಯಾದಿ....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶಿವರಾಮೇಗೌಡರು ಪಕ್ಷೇತರ ಸದಸ್ಯರೇ?

ಶ್ರೀ ಎಸ್. ಬಂಗಾರಪ್ಪ : ಅವರು ನಮ್ಮ ಪಕ್ಷದ ಸಹ ಸದಸ್ಯರು. ಅದನ್ನು ತಾವು ಸೇರಿಸಿಕೊಳ್ಳಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಸಹ ಸದಸ್ಯರೋ ಅಥವಾ ಕಾಂಗ್ರೆಸ್(ಐ) ಪಕ್ಷದ ಸಹಸದಸ್ಯರೋ?

ಶ್ರೀ ಎಸ್. ಬಂಗಾರಪ್ಪ : ಅವರೂ ಸಹ ಸದಸ್ಯರು. ಕಾಂಗ್ರೆಸ್(ಐ) ಪಕ್ಷದ ಸಹ ಸದಸ್ಯರು.

ಒಟ್ಟು ಇಷ್ಟು ಜನ ಮಾನ್ಯಸದಸ್ಯರು ಈ ಚರ್ಚೆ ಕಾಲದಲ್ಲಿ ಭಾಗವಹಿಸಿದ್ದಾರೆ. ಈ ಸಂದರ್ಭದಲ್ಲಿ ಬಹಳ ಸದಸ್ಯರು ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಕೆಲವು ವಿಚಾರಗಳು ಪುನರಾವರ್ತನೆಯಾಗಿವೆ. ಸಹಜವಾಗಿ ನಾನು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಾನು ಈ ಎಲ್ಲ ಮಾನ್ಯ ಸದಸ್ಯರ ಹೆಸರುಗಳನ್ನು ಪ್ರಸ್ತಾಪ ಮಾಡಿ ಉತ್ತರ ಕೊಡತಕ್ಕಂಥ ಅವಶ್ಯಕತೆ ಕೂಡ ಇದರಲ್ಲಿ ಅಡಗಿದೆ. ಆದರೆ ಕೆಲವೊಮ್ಮೆ ನಾನು ಹೇಳದೇ ಇದ್ದರೆ ಮಾನ್ಯ ಸದಸ್ಯರು ತಪ್ಪು ಗ್ರಹಿಸಬಾರದು. ಆಗ ತಮ್ಮ ವಿಚಾರ ಕೂಡ ಪ್ರಸ್ತಾಪವಾಗಿದೆ ಎಂದು ತಾವು ಗ್ರಹಿಸಬೇಕೆಂದು ಹೇಳುತ್ತೇನೆ. ಎಲ್ಲರ ಹೆಸರು ಹೇಳತಕ್ಕ ಅವಶ್ಯಕತೆ ಬರಲಾರದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಈ ಸಂದರ್ಭದಲ್ಲಿ ಆಡಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ, ಈ ನಿರ್ಣಯವನ್ನು ಮಂಡನೆ ಮಾಡಿರತಕ್ಕಂಥ ಹಿರಿಯ ಸದಸ್ಯರಾದಂಥ ಶ್ರೀಮತಿ ಚಂದ್ರಪ್ರಭ ಅರಸು ಅವರು ಹಲವಾರು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿ ಈ ನಿರ್ಣಯಕ್ಕೆ ಸದನ ಏತಕ್ಕೆ ಬೆಂಬಲ ಕೊಡಬೇಕೆಂಬ ವಿಚಾರದಲ್ಲಿ ಇಡೀ ಸದನದ ಗಮನವನ್ನು ಸೆಳೆದಿದ್ದಾರೆ. ಅದೇ ರೀತಿಯಾಗಿ ಅನುಮೋದನೆ ಮಾಡಿರತಕ್ಕಂಥ ಮಾನ್ಯ ಸದಸ್ಯರಾದ ಶ್ರೀ ಪ್ರಭಾಕರ ರಾಣೆಯವರು ಕೂಡ. ಅವರಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಕೆಲವು ವಿಚಾರಗಳ ಬಗ್ಗೆ ಸರ್ಕಾರ ಒಳ್ಳೆಯ ಕಾರ್ಯಕ್ರಮ ಹಾಕಿದೆ. ಅದರ ಕೆಲವು ವಿಚಾರಗಳಲ್ಲಿ ಅನುಮಾನ ಬರುತ್ತದೆ. ಅವುಗಳನ್ನು ಸರಿಪಡಿಸಿಕೊಂಡು ಹೋಗಬೇಕು. ಹಾಗೆ ಕಾರ್ಯಕ್ರಮ ಹಾಕಬೇಕು ಎನ್ನತಕ್ಕಂಥ ವಿಚಾರವನ್ನು ಕೂಡ ಅವರು ಹೇಳಿದ್ದಾರೆ; ಇಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಕೋಮು ದಳ್ಳುರಿ ಏನು ಕೆಲವು ತಿಂಗಳ ಹಿಂದೆ ನಡೆದು, ನಮ್ಮಲ್ಲಿರತಕ್ಕಂಥ ಸಮಾಜದ ಕೆಲವು ಜನರನ್ನು ಆಹುತಿ ತೆಗೆದುಕೊಂಡಿತ್ತು; ಇದೊಂದು ಕರ್ನಾಟಕ ರಾಜ್ಯಕ್ಕೆ ಕಳಂಕಪ್ರಾಯವಾಗಿದೆ ಎಂದು ಅವರು ಆಡಿರತಕ್ಕದ್ದು ನಾವೆಲ್ಲರೂ ಸೇರಿ ಒಪ್ಪತಕ್ಕಂಥ ವಿಚಾರಧಾರೆಯಾಗಿದೆ. ಈ ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಕೂಡ ನಾವು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಒಂದು ನಿಮಿಷ ಮಾತನಾಡಿದರೆ ಈ ಸಂದರ್ಭದಲ್ಲಿ ಅದು ತಪ್ಪಾಗಲಾರದು ಎಂದು ಭಾವಿಸಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ನಡೆದಿರತಕ್ಕಂಥ ಗಲಭೆಗಳು ಪ್ರತ್ಯೇಕವಾಗಿ ರಾಷ್ಟ್ರದ ಬೇರೆ ಭಾಗ ಬಿಟ್ಟು ನಡೆಯಲಿಲ್ಲ. ಇಲ್ಲಿ ನಡೆದಿರತಕ್ಕಂಥ ಗಲಭೆಗಳು ರಾಷ್ಟ್ರವ್ಯಾಪಿಯಾಗಿ ಹಬ್ಬಿರತಕ್ಕಂಥ ಆ ಪೀಡೆ ಏನಿತ್ತು, ಅದರ ಅವಿಭಾಜ್ಯ ಅಂಗವಾಗಿ ಈ ಕರ್ನಾಟಕದಲ್ಲಿ ಕೂಡ ನಡೆದಿರತಕ್ಕಂಥಾದ್ದು ಖೇದ ತರತಕ್ಕಂಥಾದ್ದು. ಇದು ಹಿಂದೆ ಎಲ್ಲೇ ನಡೆಯಲಿ, ನಮ್ಮಲ್ಲಿ ನಡೆಯುತ್ತಿರಲಿಲ್ಲ. ಎಲ್ಲೋ ಸಣ್ಣಪುಟ್ಟ ಘಟನೆಗಳು ನಮ್ಮ ಗಮನಕ್ಕೆ ಬಂದದ್ದುಬಿಟ್ಟರೆ ವ್ಯಾಪಕವಾಗಿ ಇಂತಹ ಘಟನೆಗಳು ನಡೆದಿರಲಿಲ್ಲ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಈ ಸಂದರ್ಭದಲ್ಲಿ ಆ ಘಟನೆಗಳು ನಡೆದಾಗ ನಾನು ಎಲ್ಲ ವಿರೋಧಪಕ್ಷಗಳಾದಿಯಾಗಿ ಕುರಿತು ಏನು ಹೇಳಿದ್ದೆ, ಅದು ರೆಕಾರ್ಡ್ನಲ್ಲಿದೆ. ನಾನು ಅಭಿನಂದನೆ ಸಲ್ಲಿಸಿದ್ದೇನೆ. ಏಕೆಂದರೆ ಕೋಮು ಘರ್ಷಣೆ ವಿಚಾರದಲ್ಲಿ ಮಾತ್ರ ಇದು ಒಂದು ಪಕ್ಷಕ್ಕೆ ಸೀಮಿತಗೊಂಡಂಥ ವಿಚಾರ ಇಲ್ಲ. ಅಥವಾ ಒಬ್ಬ ವ್ಯಕ್ತಿಗೆ ಸೀಮಿತಗೊಂಡಂಥ ವಿಚಾರ ಅಲ್ಲ. ಆಳುವ ಪಕ್ಷ ಯಾವುದೇ ಇರಬಹುದು; ಎಲ್ಲ ಪಕ್ಷಗಳೂ ಸಂವಿಧಾನಬದ್ಧವಾಗಿ ಇವತ್ತು ನಾವು ಏನು ನಮ್ಮ ಹುಟ್ಟು ಬೆಳವಣಿಗೆಯನ್ನು ಇಟ್ಟು ರಾಷ್ಟ್ರದ ರಾಜಕಾರಣದಲ್ಲಿ ಜೀವನ ಮಾಡುತ್ತಿದ್ದೇವೆ, ಇದಕ್ಕೆ ಎಲ್ಲರೂ ಕೂಡ

ಬದ್ಧರಾಗಿದ್ದೇವೆ. ಶಾಂತಿಪ್ರಿಯತೆ, ಕೋಮು ಸೌಹಾರ್ದತೆ ಇವನ್ನು ನಾವು ಇಟ್ಟು ಮುಂದೆ ಹೋಗಬೇಕು ಎನ್ನತಕ್ಕಂಥ ಮೂಲಭೂತ ನಂಬಿಕೆ ಬಗ್ಗೆ, ಈ ಅನಿಸಿಕೆಯ ಹಿನ್ನೆಲೆಯನ್ನು ಇಟ್ಟುಕೊಂಡು ನಾವು ಮುಂದೆ ಹೋಗುತ್ತಿದ್ದೇವೆ. ಇದು ಹೆಚ್ಚು ಕಡಿಮೆ ಆದರೆ, ಆಡಳಿತದಲ್ಲಿ ಇಂದು ಇರಬಹುದು, ಇಲ್ಲದೇ ಇರಬಹುದು; ಆದರೆ ಈ ಮೂಲಭೂತ ನೀತಿಗೆ ಅಂಟಿಕೊಂಡು ಬಂದಿರುವ ನಾವು ನೀವು ಎಲ್ಲರೂ ಕೂಡ ಈ ಮಾತನ್ನು ಬಹಳ ಧೈರ್ಯವಾಗಿ ಹೇಳಬಹುದು.

ಈ ಮಾತನ್ನು ಈ ಸದನದಲ್ಲಿ ಬೇಕಾದಷ್ಟು ಸಾರಿ ಮಾತನಾಡಿಕೊಂಡಿದ್ದೇವೆ. ಇದೇ ಮಾತನ್ನು ವಿಧಾನ ಪರಿಷತ್ತಿನಲ್ಲೂ ಕೂಡ ನಾನು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಹೇಳಿದ್ದೇನೆ. ಇವತ್ತು ರಾಜಕೀಯ ಪಕ್ಷಗಳು, ಖಾಸಗಿ ಸಂಘಸಂಸ್ಥೆಗಳು ಮತ್ತು ಅನೇಕ ಜನ ಬೇರೆಯವರೂ ಏನಿದ್ದಾರೆ, ಸಾರ್ವಜನಿಕರೂ ಸಹಕಾರ ಕೊಟ್ಟು ಈ ದಳ್ಳುರಿ ಬೆಳೆಯುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಕೂಡ ಹೊತ್ತಿದ್ದಾರೆ. ಆದರೆ ಕೆಲವು ಕೋಮು ವಿಚಾರದಲ್ಲಿ ಸೌಹಾರ್ದತೆಗೆ ನಂಬಿಕೆ ಇಲ್ಲದೇ ಇರತಕ್ಕ ಕೆಲವು ಸಂಘಸಂಸ್ಥೆಗಳು ಮಾತ್ರ ಇದಕ್ಕೆ ಕೈಹಾಕಿ ಬೆಂಕಿ ಬೀಳತಕ್ಕ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎನ್ನುವುದು ಖೇದ ತರತಕ್ಕ ವಿಚಾರ. ಈ ಸಂದರ್ಭದಲ್ಲಿ ನಾನು ವಿವರಗಳಿಗೆ ಹೋಗುವುದಿಲ್ಲ; ಈ ಕೋಮುಸೌಹಾರ್ದತೆ ಸಂಪೂರ್ಣವಾಗಿ ಹಾಳಾಗತಕ್ಕ ವಿಚಾರ ಬಂದಿರುವುದು ಕರ್ನಾಟಕ ರಾಜ್ಯದ 19-20 ಜಿಲ್ಲೆಗಳಲ್ಲಿ, ಬೆಂಗಳೂರು ನಗರ ಜಿಲ್ಲೆಯೂ ಸೇರಿಕೊಂಡಂತೆ, ಹೇಳುವುದಾದರೆ ಕೇವಲ ಆರು ಜಿಲ್ಲೆಗಳಲ್ಲಿ ಮಾತ್ರ ಬಂತು. ಜಿಲ್ಲೆಯ ಹೆಸರನ್ನು ಹೇಳಿದರೆ, ಆ ಜಿಲ್ಲೆಯ ತುಂಬ ನಡೆಯಿತು ಎಂದು ಅರ್ಥವಲ್ಲ. ಇವತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನೇ ತೆಗೆದುಕೊಂಡರೆ, ರಾಮನಗರ ಚನ್ನಪಟ್ಟಣಗಳಲ್ಲಿ ನಡೆಯಿತು. ಬೇರೆ ಕಡೆ ನಡೆಯಲಿಲ್ಲ. ಕೋಲಾರ ಜಿಲ್ಲೆಯಲ್ಲಿ ಶ್ರೀನಿವಾಸಪುರ ತಾಲ್ಲೂಕು, ಕೋಲಾರ ತಾಲ್ಲೂಕು ಮತ್ತು ಮುಳಬಾಗಿಲು ತಾಲ್ಲೂಕು. ಈ ತರಹ ಬೇರೆ ತಾಲ್ಲೂಕುಗಳಲ್ಲೂ ನಾವು ಲೆಕ್ಕ ಹಾಕಿಕೊಳ್ಳಬಹುದು. ಹಾಸನ ಜಿಲ್ಲೆ ತೆಗೆದುಕೊಂಡರೆ, ಚನ್ನರಾಯಪಟ್ಟಣ ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ನಡೆಯಿತು. ಬೇರೆ ಕಡೆ ನಡೆಯಲಿಲ್ಲ. ಒಂದು ಜಿಲ್ಲೆ ತೆಗೆದುಕೊಂಡರೆ, ಇಡೀ ಜಿಲ್ಲೆಯ ತುಂಬಾ ನಡೆಯಿತು ಎಂಬ ಅರ್ಥದಲ್ಲಿ ನಾವು ವ್ಯಾಖ್ಯಾನ ಮಾಡಬಾರದು. ಆ ಜಿಲ್ಲೆಯಲ್ಲಿ, ಒಂದು ತಾಲ್ಲೂಕಿನಲ್ಲಿ, ಆ ತಾಲ್ಲೂಕಿನ ಯಾವ ಊರಿ ಎಷ್ಟು ಊರುಗಳಲ್ಲಿ, ಇಷ್ಟಕ್ಕೆ ಮಾತ್ರ ಸೀಮಿತಗೊಳಿಸಬೇಕು. ಕರ್ನಾಟಕ ರಾಜ್ಯ ತುಂಬಾ, ಇಡೀ ರಾಜ್ಯದ ಉದ್ದಗಲಕ್ಕೂ ಇದು ನಡೆಯಲಿಲ್ಲ. ಒಂದು ಜಿಲ್ಲೆಉದ್ದಗಲಕ್ಕೂ ಕೂಡ ನಡೆಯಲಿಲ್ಲ. ಕೊನೆಯ ಪಕ್ಷ ಇಷ್ಟರ ಮಟ್ಟಿಗೆ ಆಗಿದ್ದಕ್ಕ ಸಂತೋಷಪಡಬೇಕು. ಇದೇ ಸಂದರ್ಭದಲ್ಲಿ ಹೈದರಾಬಾದ್ ಕರ್ನಾಟಕದ, ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಬಾಂಬೆ ಕರ್ನಾಟಕದ ಬೆಳಗಾಂ, ಬಿಜಾಪುರ, ಧಾರವಾಡ, ಕಾರವಾರ, ಸ್ವಲ್ಪ ಪ್ರಕ್ಷುಬ್ಧ ಪರಿಸ್ಥಿತಿ ಹುಬ್ಬಳ್ಳಿಪ್ರದೇಶ ಬಿಟ್ಟರೆ, ಉಳಿದಿರತಕ್ಕ ಪ್ರದೇಶ ಶಾಂತಿಯುತವಾಗಿ ಬಂದಿದೆ ಎಂಬುದನ್ನು ಎಲ್ಲರೂ ಸಂತೋಷಪಡಬೇಕು. ಇದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲ ಪ್ರಕ್ಷುಬ್ಧ ವಾತಾವರಣ.

ಮೊನ್ನೆ ನಡೆದ ಸುಳ್ಯ ಘಟನೆ ಬಗ್ಗೆ ನಾನು ಹೇಳುತ್ತಾ ಇಲ್ಲ. ಹಳೆಯ ಮೈಸೂರು ರಾಜ್ಯದ ಚಿತ್ರದುರ್ಗ ಜಿಲ್ಲೆಯ, ಹೊಸದುರ್ಗ ಮತ್ತು ದಾವಣಗೆರೆ ಬಿಟ್ಟರೆ, ಬೆರೆ ಕಡೆ ಎಲ್ಲಿಯೂ ನಡೆಯಲಿಲ್ಲ. ಕೋಲಾರ ಜಿಲ್ಲೆಯ ವಿಚಾರ ಈಗಾಗಲೇ ಹೇಳಿದ್ದೇನೆ. ತುಮಕೂರು ಜಿಲ್ಲೆಯ ಕುಣಿಗಲ್ ಮತ್ತು ತುಮಕೂರು ಟೌನ್‌ನಲ್ಲಿ ಸ್ವಲ್ಪ ಪ್ರಕ್ಷುಬ್ಧ ಪರಿಸ್ಥಿತಿ ಬಿಟ್ಟರೆ ಬೇರೆಕಡೆ ನಡೆದಿರುವುದು ನನಗೆ ಗೊತ್ತಿಲ್ಲ. ಅದೇ ರೀತಿ ಬೆಂಗಳೂರು ಗ್ರಾಮಾಂತರ ಜಿಲ್ಲೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ಮತ್ತು ಇತ ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು -

ಹೀಗೆ ನಡೆದಿರುವುದನ್ನು ಬಿಟ್ಟರೆ, ಉಳಿದಿರತಕ್ಕ ಹಳೆಯ ಮೈಸೂರು ರಾಜ್ಯದ ಜಿಲ್ಲೆಗಳಲ್ಲಿ ನಡೆಯಲಿಲ್ಲ. ಆದ್ದರಿಂದ ಇಲ್ಲಿ ಸಾರ್ವಜನಿಕರಿಗೂ ಕೂಡ, ನಾವೂ, ನೀವು ಎಲ್ಲರೂ ಅಭಿನಂದನೆ ಸಲ್ಲಿಸಬೇಕಾದುದು ಇದರಲ್ಲಿ ಅಡಗಿದೆ. ಕೋಮುಸೌಹಾರ್ದತೆ ಕಾಪಾಡತಕ್ಕ ವಿಚಾರದಲ್ಲಿ ನಾವೆಲ್ಲರೂ ಸೇರಿ ಒಂದಾಗಿ ಹೋಗತಕ್ಕ ವಿಚಾರದಲ್ಲಿ ಗಮನ ಕೊಡಬೇಕು. ಸುಳ್ಯದಲ್ಲಿ ನಡೆದಿರತಕ್ಕ ಇತ್ತೀಚಿನ ಘಟನೆಗಳು ಇನ್ನೂ ದಳ್ಳುರಿ ಕಿಡಿ ಇಟ್ಟುಕೊಂಡಿದೆ, ಹೊಂಚು ಹಾಕುತ್ತಿದೆ ಎನ್ನ ಮಾತು ನಮ್ಮ ಗಮನಕ್ಕೆ ಕೂಡ ಬಂದಿದೆ. ಒಂದು ಮಾತನ್ನು ತಮ್ಮ ಮುಖಾಂತರ ಈ ಸದನ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಇಂಟೆಲಿಜೆನ್ಸ್ ವಿಂಗ್ ಏನಿದೆ ಮತ್ತು ಪೋಲೀಸ್ ಇಲಾಖೆ ಬಗ್ಗೆ ಈ ಬಗ್ಗೆ ವಿವರಗಳನ್ನು ಮಾನ್ಯ ಗೃಹಸಚಿವ ಸಾಂದರ್ಭಿಕವಾಗಿ ಪ್ರಸ್ತಾಪ ಮಾಡುವುದಕ್ಕೆ ಸಿದ್ಧರಿದ್ದಾರೆ. ತಮಗೆ ಗೊತ್ತಿರುವಹಾಗೆ ನಿಜ ಹೇಳಬೇಕೆಂದರೆ, I must congratulate the Police includig fire force. ನಮ್ಮ ಪೋಲೀಸ್ ಇಲಾಖೆ ಶಕ್ತಿ ಮೀರಿ ಮಾಡಿದರು. ಪೋಲೀಸ್ ಇಲಾಖೆಯ ಸಂಖ್ಯೆ ಕಡಿಮೆ ಇದೆ. ಇವತ್ತೂ ಕೂಡ ಪ್ರಸ್ತಾಪಕ್ಕೆ ಬಂದಿದೆ. ಇದರ ಬಗ್ಗೆ ಕಾರ್ಯಕ್ರಮ ಹಾಕಿದ್ದೇವೆ. ಮತ್ತು ಬಜೆಟ್ನಲ್ಲಿ ಜಾಸ್ತಿ ಹಣ ತೆಗೆದಿಟ್ಟಿದ್ದೇನೆ. ಇದರಲ್ಲಿ ಅಗ್ನಿಶಾಮಕ ಇಲಾಖೆಯೂಸೇರಿದೆ. ನಮ್ಮ ಆರ್ಥಿಕ ಶಕ್ತಿಗನುಸಾರವಾಗಿ ಹಣವನ್ನು ಇಟ್ಟಿದ್ದೇವೆ, ಇದಕ್ಕಿಂತ ಹೆಚ್ಚು ಕೊಡುವುದಕ್ಕೆ ಬರುವುದಿಲ್ಲ.

Rs.134-135 Crores is required for strengthening of police force that has got to spread over a period of five years; That includes the housing component also for police personnel.

ಸುಮಾರು ಅರ್ಧದಷ್ಟು ಹಣ, ಅಂದರೆ, ಸುಮಾರು 60-65ಕೋಟಿ ರೂಪಾಯಿಗಳು ಬರೀ ಮನೆಗಳಿಗೆ ಹೋಗುತ್ತದೆ. ಉಳಿದಿರತಕ್ಕಂಥಾದ್ದು ಪೋಲೀಸ್ ಸ್ಟೇಷನ್ ಹೊಸದಾಗಿ ಮಾಡುವುದು, ಅಗ್ನಿಶಾಮಕ ಠಾಣೆ, ಫೈರ್ ಅಲಾರ್ಮ್. ಇನ್ನು ಹಳೆಯ ಜೀಪುಗಳು ಹಳೆಯ ವ್ಯಾನುಗಳೂ ಇವೆ. ಇವುಗಳಲ್ಲಿ ಪೋಲೀಸಿನವರನ್ನು ಕರೆದುಕೊಂಡುಹೋಗಿ ತಲುಪುವುದರೊಳಗೆ ಅಲ್ಲಿ ಅನಾಹುತ ಜಾಸ್ತಿಯಾಗಿರುತ್ತದೆ. ಇವೆಲ್ಲವನ್ನೂ ರೀಪ್ಲೇಸ್ ಮಾಡಬೇಕೆಂದು ಗೃಹಸಚಿವರು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದಾರೆ. ಸಚಿವ ಸಂಪುಟದಲ್ಲೂ ಅನುಮೋದನೆ ಕೊಟ್ಟಿದ್ದೇವೆ. ಹಣವನ್ನೂ ಈಗಾಗಲೇ ನಿಗದಿ ಮಾಡಿದ್ದೇವೆ. ಬಹಳ ಸಂದರ್ಭದಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದೇವೆ. ಅನೇಕ ಸಾರಿ ಇಲ್ಲಿ ಚರ್ಚೆ ಮಾಡಿದ್ದೇವೆ. ಆ ವಿಚಾರ ಇಲ್ಲಿಗೆ ನಿಲ್ಲಿಸುತ್ತೇನೆ. ರೆಕ್ರೂಟ್ಮೆಂಟ್ ವಿಚಾರದಲ್ಲೂ ಕೂಡಾ ಬದಲಾವಣೆ ಮಾಡುವುದಕ್ಕೆ ನಾವು ತೀರ್ಮಾನ ಮಾಡಿದ್ದೇವೆ. ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ಸ್ ವಿಚಾರದಲ್ಲಿ ಪಬ್ಲಿಕ್ ಸರ್ವೀಸ್ ಕಮೀಷನ್ ಮತ್ತೊಂದು ಬಿಟ್ಟು, ಡಿಪಾರ್ಟ್‌ಮೆಂಟಲ್ ರೆಕ್ರೂಟ್‌ಮೆಂಟ್ ಕಮಿಟಿ ಮಾಡಿ ಅರ್ಜೆಂಟಾಗಿ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಕಾನ್‌ಸ್ಟೇಬಲ್ಸ್ ರೆಕ್ರೂಟ್‌ಮೆಂಟ್ ಕೂಡಾ ಅರ್ಜೆಂಟ್ ಆಗಿ ಮಾಡಬೇಕು, ಅದಕ್ಕಾಗಿ ಆಯಾ ಜಿಲ್ಲೆಯ ಎಸ್.ಪಿ.ಯವರಿಗೆ ತಿಳಿಸಿದ್ದೇವೆ. ಆ ಕೆಲಸ ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ಗೃಹಸಚಿವರು ಉತ್ತರಕೊಟ್ಟಿದ್ದಾರೆ. ಈ ವಿಚಾರ ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಶಾಂತಿ ಸುವ್ಯವಸ್ಥೆ ಮತ್ತು ಕಾನೂನು ಪಾಲನೆ ವಿಚಾರದಲ್ಲಿ ಯಾವ ಜವಾಬ್ದಾರಿ ಸರಕಾರ ಹೊರಬೇಕು ಆ ವಿಚಾರದಲ್ಲಿ ನಾವು ಈಗಾಗಲೇ ಕಾರ್ಯೋನ್ಮುಖರಾಗಿದ್ದೇವೆ. ಅಲ್ಲಿ ವ್ಯತ್ಯಾಸ ಮತ್ತೊಂದು ಕೂಡ ಬರಬಹುದು. ಏತಕ್ಕೆಂದರೆ ತಮಗೆ ಗೊತ್ತಿರುವ ಹಾಗೆ ಇನ್ನೂ ಕೆಲವು ಸಂಘಸಂಸ್ಥೆಗಳು ಆಕ್ಟಿವೈಸ್ ಆಗಿದೆ. ಈ ವಿಚಾರ ತಮ್ಮ ಗಮನದಲ್ಲಿ ಕೂಡಾ ಇದೆ. ಇದು ಒಳ್ಳೆಯದಲ್ಲ. ಇದೇ ರೀತಿ ಪದೇ ಪದೇ ಇದನ್ನು ಮಾಡುತ್ತಾ ಹೋದರೆ ಮುಗ್ಧ ಜನ, ಅರಕ್ಷಿತ ಜನ, ಸಂಬಂಧ ಇಲ್ಲದಿರತಕ್ಕಂಥ ಜನ ಅನಾವಶ್ಯಕವಾಗಿ

ಬಲಿಪಶುಗಳಾಗುತ್ತಾರೆ. ಇವು ಅಮಾಯಕ ಜನರನ್ನು ಬಲಿ ತೆಗೆದುಕೊಳ್ಳುತ್ತವೆ ಎಂಬ ಮಾತನ್ನೂ ನೀವೂ ಹೇಳುತ್ತಿರುತ್ತೀರಿ. ಪುನಃ ಬಲಿ ತೆಗೆದುಕೊಳ್ಳುವ ಸೂಚನೆಗಳು ಇಲ್ಲದಿಲ್ಲ. ಶಕ್ತಿಮೀರಿ ಸರಕಾರದವರು ಕಾರ್ಯಕ್ರಮ ಹಾಕಿದರೂ ಕೂಡಾ we will have to foresee something else also.

ನಾನು ಈ ಸಂದರ್ಭದಲ್ಲಿ ವಿವರಗಳಿಗೆ ಹೋಗಿ ಅದು ಪ್ರಚಾರವಾಗಿ ಪತ್ರಿಕೆಗಳಿಗೆ ಹೋಗುವುದು ಬೇಡ. ನಿನ್ನೆ ಕರ್ನಾಟಕ ರಾಜ್ಯದಲ್ಲಿ ಅನೇಕ ಕಡೆ ಮೆರವಣಿಗೆಗಳು ನಡೆದಿವೆ; ಅದು ತಮ್ಮ ಗಮನಕ್ಕೂ ಬಂದಿದೆ. ಎಲ್ಲೋ ಒಂದೆರಡು ಕಡೆ ಸಣ್ಣಪುಟ್ಟ ಘಟನೆ ಬಿಟ್ಟರೆ ಶಾಂತಿಯುತವಾಗಿ ಮಾಡಿದ್ದಾರೆ.

ಪೊಲೀಸರು ವ್ಯವಸ್ಥಿತವಾಗಿ ಹ್ಯಾಂಡಲ್ ಮಾಡಿದ್ದಾರೆ. ಆದರೂ ಕೂಡಾ ಕೆಲವು ವ್ಯತ್ಯಾಸಗಳು ಬರಬಹುದು. ಶಾರ್ಟೇಜ್ ಆಫ್ ಪೋಲೀಸ್ ಫೋರ್ಸ್ ಇವೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಸಾಕಷ್ಟು ಫೋರ್ಸ್ ಇದ್ದರೂ ಕೂಡಾ ವ್ಯತ್ಯಾಸ ಬಂದಾಗ ಅದನ್ನು ಸರಿಪಡಿಸತಕ್ಕದ್ದು. ತಪ್ಪು ಮಾಡಿದ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಗಮನಹರಿಸುತ್ತೇವೆ. ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರೆಲ್ಲರಿಂದಲೂ ಒಕ್ಕೊರಲಿನ ಅಭಿಪ್ರಾಯ ಮೂಡಿಬಂದಿದೆ. ಅದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸರಕಾರದ ಗಮನಕ್ಕೆ ಮತ್ತೊಮ್ಮೆ ಈ ವಿಚಾರವನ್ನು ತಂದಿದ್ದೀರಿ. ನಮ್ಮ ಕರ್ತವ್ಯವನ್ನು ನೆನಪು ಮಾಡಿಕೊಟ್ಟಿದ್ದೀರಿ. ಅದಕ್ಕನುಗುಣವಾಗಿ ಸರಕಾರ ನಡೆದುಕೊಳ್ಳುತ್ತದೆ ಎಂಬ ಒಂದು ಮಾತನ್ನು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತರುತ್ತಿದ್ದೇನೆ. ಇನ್ನೂ ಕೆಲವು ವಿಚಾರಗಳು ಬಂದಿದ್ದಾವೆ. ಸಮಾಜದಲ್ಲಿರತಕ್ಕಂಥ ನಾವು ಒಂದು ನೀತಿ ನಿರೂಪಣೆಯನ್ನು ಮಾಡಬೇಕಾದರೆ ಪ್ರಗತಿ ಎಲ್ಲಾ ಕಡೆಯೂ ಆಗಬೇಕೆಂಬ ವಿಚಾರ ಇರಬೇಕಾಗುತ್ತದೆ. ನೀರಾವರಿ ಹಾಗೂ ಇತರ ಆದ್ಯತಾ ವಲಯಕ್ಕೆ ಸಂಬಂಧಪಟ್ಟ ವಿಚಾರ. ಇದಕ್ಕೆ ಕೋರ್‌ಸೆಕ್ಟರ್ ಎಂದು ಹೇಳುತ್ತೇವೆ. Perhaps we call it the Core Sector under the Plan. ನೀರಾವರಿ ವಿದ್ಯುತ್ ಇದರ ಬಗ್ಗೆ ಬಜೆಟ್ ವಿಚಾರ ಬಂದಾಗ ವಿವರಗಳಿಗೆ ಹೋಗೋಣ. ತಾವೂ ಕೂಡಾ ಇದರ ಬಗ್ಗೆ ಭಾಷಣ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆ ವಿಷಯ ಈ ವ್ಯಾಪ್ತಿಯಲ್ಲಿ ಇಲ್ಲ. ಸಾಂದರ್ಭಿಕವಾಗಿ ಕೆಲವು ವಿಚಾರ ಪ್ರಸ್ತಾಪ ಮಾಡಿದ್ದನ್ನು ದಾಖಲೆಯಲ್ಲಿ ನೋಡಿದ್ದೇನೆ. ನಾವು ವಿವರಗಳಿಗೆ ಹೋಗದೆ ವಿದ್ಯುತ್ ಉತ್ಪಾದನೆಗೆ ಹತ್ತಿರ ಹತ್ತಿರ 100 ಕೋಟಿ ರೂಪಾಯಿಗಳನ್ನು ಜಾಸ್ತಿ ಇಟ್ಟಿದ್ದೇವೆ. ಖಾಸಗಿ ವಲಯದವರೂ ಬಂದು ಭಾಗವಹಿಸಬಹುದು upto certain limits under certain terms and conditions ಎಂದು ಹೇಳಿದ್ದೇವೆ. ಆ ವಿವರಗಳನ್ನು ಬಜೆಟ್ ಬಂದಾಗ ಪ್ರಸ್ತಾಪ ಮಾಡೋಣ. ಅದರ ಬಗ್ಗೆ ನಾವು ಗಮನ ಕೊಟ್ಟಿದ್ದೇವೆ. ನೀರಾವರಿಗೆ ಹಣ ಜಾಸ್ತಿ ಮಾಡಿದ್ದೇವೆ. ಇನ್ನೂ ಕೂಡಾ ಜಾಸ್ತಿ ಮಾಡುತ್ತೇವೆ ಎಂಬ ಮಾತನ್ನು ಆಡಿದ್ದೇನೆ. ಇನ್ನೂ ಕೂಡಾ ಎನ್.ಡಿ.ಸಿ. ಮೀಟಿಂಗ್ ಸೇರಿಲ್ಲ. ಮಾರ್ಕೆಟ್ ಬಾರೋಯಿಂಗ್ ಮತ್ತು ನೆಗೋಷಿಯೇಟೆಡ್ ಲೋನ್ಸ್ ಎಷ್ಟು ಎಂದು ಗೊತ್ತಾಗಿಲ್ಲ. 91-92ರ ನಮ್ಮ ಯೋಜನಾ ಗಾತ್ರ 1510 ಕೋಟಿ ರೂಪಾಯಿಗಳಿದ್ದರೂ ಕೂಡಾ ಅದು ಇನ್ನೂ ಹೆಚ್ಚಾಗತಕ್ಕ ಸಂದರ್ಭ ಇದೆ. ಆದರೆ ಕಟ್ ಎಷ್ಟು ಮಾಡುತ್ತಾರೆ ಎಂಬ ಹೆದರಿಕೆ ಕೂಡಾ ಇದೆ. ಏನು ಮಾಡಬೇಕೆಂದು ನಮಗೆ ಗೊತ್ತಾಗಿಲ್ಲ. ಕೇಂದ್ರದ ಪರಿಸ್ಥಿತಿ ತಮಗೆ ಗೊತ್ತಾಗಿದೆ. ಈ ವಿಚಾರವನ್ನು ಅಷ್ಟಕ್ಕೇ ಪ್ರಸ್ತಾಪ ಮಾಡಿ ಉಳಿದ ವಿಚಾರಕ್ಕೆ ಹೋಗದ ಸಂದರ್ಭದಲ್ಲಿ, ಶಕ್ತಿಮೀರಿ ನಾವು ನಮ್ಮ ನೀತಿ ಏನಿದೆ, ಪ್ರಗತಿ ಹೋಗುವ ವಿಚಾರದಲ್ಲಿ, ಆದ್ಯತಾ ವಲಯಕ್ಕೆ ಹೆಚ್ಚಿನ ಒತ್ತು ಕೊಡತಕ್ಕ ವಿಚಾರದಲ್ಲಿ, ಹಣವನ್ನು ಹೆಚ್ಚು ಕೊಡಬೇಕಾದ ಅವಶ್ಯಕತೆ ಹೆಚ್ಚಾಗಿದೆ ಎಂದ ಹೇಳುತ್ತೇನೆ.

ಅದರ ಬಗ್ಗೆ ಬಜೆಟ್ ಚರ್ಚೆ ಬಂದಾಗ ಪ್ರಸ್ತಾಪ ಮಾಡೋಣ ಸಾಂದರ್ಭಿಕವಾಗಿ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿ ಅಷ್ಟಕ್ಕೇ ಬಿಡುತ್ತೇನ್ ಇನ್ನು ನಾನ್ ಪ್ಲಾನ್ ಅಂದರೆ ಯೋಜನೇತರ ವೆಚ್ಚಗಳಿಗೆ ನಾವು ಖರ್ಚು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಭಾಷಣ ಮಾಡಬೇಕಾದರೆ ಪಠ್ಯಪುಸ್ತಕಗಳನ್ನು, ಸಮವಸ್ತ್ರಗಳನ್ನು ಓಂದೆ ಕೊಡುತ್ತಿದ್ದುದನ್ನು ಪ್ರಸ್ತಾಪ ಮಾಡಿದ್ದೀರಿ. ಈಗಲೂ ಕೂಡಾ ಸಮಾಜದಲ್ಲಿರತಕ್ಕಂಥ ದುರ್ಬಲ ವರ್ಗದವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಇದನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ.

ಇನ್ನು ಕೆಲವರಿಗೆ ಮಾಡತಕ್ಕಂಥ ವಿಚಾರದಲ್ಲಿ ಕೆಲವರು ಇದನ್ನು ಮಾಡುವುದು ಸರಿಯಲ್ಲ ಎನ್ನತಕ್ಕಂಥ ಅಭಿಪ್ರಾಯಕ್ಕೆ ಬಂದಮೇಲೆ ಮುಂದೆ ಇದನ್ನು ವಿಚಾರ ಮಾಡೋಣ ಎನ್ನುವ ದೃಷ್ಟಿಯಿಂದ ಸದ್ಯಕ್ಕೆ ಕೈಬಿಟ್ಟಿದ್ದೇವೆ. ಆದರೆ ತಾವೆಲ್ಲ ಈಗಾಗಲೇ ನೋಡಿದ್ದೀರಿ. ಇವತ್ತು ಅಕ್ಷರ ಜ್ಞಾನ ಜಾಸ್ತಿ ಕೊಡತಕ್ಕಂಥ ವಿಚಾರದಲ್ಲಿ ಶಾಲೆಗಳಿಗೆ ಮಕ್ಕಳು ಹಾಜರಾತಿ ಸಂಖ್ಯೆ ನೋಡಿದರೆ ಸಿಕ್ಕಾಪಟ್ಟೆ ಡ್ರಾಪ್ ಔಟ್ಸ್ ಆಗುತ್ತಿದೆ. ಸುಮಾರು 60 ಪರ್ಸೆಂಟ್ ಡ್ರಾಪ್ ಔಟ್ ಆಗುತ್ತಿದೆ. ಅಂಕಿ ಅಂಶಗಳ ಪ್ರಕಾರ, ಇದರಲ್ಲಿ ನಾವು ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಕ್ಕೆ ಆಗುವುದಿಲ್ಲ. ಆಂಗ್ಲರ ಆಳ್ವಿಕೆಯಿಂದ ನಾವು ಬಿಡುಗಡೆಯಾದಾಗ ಶೇಕಡಾ 18 ಪರ್ಸೆಂಟ್ ಅಕ್ಷರ ಜ್ಞಾನ ಇದ್ದ ನಮ್ಮಂತಹ ಸಮಾಜದಲ್ಲಿ ಈಗಲೂ ಕೂಡ ಶೇಕಡಾ 57-58 ಪರ್ಸೆಂಟ್ ಅನಕ್ಷರಸ್ಥರನ್ನು ಹೊಂದಿದ್ದೇವೆ. ನಾವು ಇನ್ನೂ ಕೂಡ 42 ಪರ್ಸೆಂಟ್ ಇನ್ಕ್ಲೂಡಿಂಗ್ 18 ಪರ್ಸೆಂಟ್ ಸೇರಿ ಅಂದರೆ ವರ್ಷಕ್ಕೆ ನಾವು ಒಂದು ಪರ್ಸೆಂಟ್ ಅಕ್ಷರ ಜ್ಞಾನ ಕೊಡಲಿಕ್ಕೆ ಆಗಿಲ್ಲ. ನಮ್ಮಂತಹ ರಾಷ್ಟ್ರದಲ್ಲಿ; ರಾಷ್ಟ್ರದ ಅಂಕಿ ಅಂಶಗಳು ಕರ್ನಾಟಕ ರಾಜ್ಯದ ಅಂಕಿ ಅಂಶಗಳಷ್ಟೇ ಇವೆ. ಸ್ವಲ್ಪ ಹೆಚ್ಚು ಕಡಿಮೆ ಅಷ್ಟೇ ಇವೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ಇವತ್ತು ಏನಾಗಿದೆ, ಈ ವಲಯದಲ್ಲಿ ನಾವು ಹೆಚ್ಚು ಆದ್ಯತೆ ಕೊಡಲೇಬೇಕು. ಇದು ಪ್ರೊಡಕ್ಟೀವ್ ಬೇಸ್ಡ್ ಅಲ್ಲ ಆರ್ಥಿಕ ಅಭಿವೃದ್ಧಿ ಪ್ರಶ್ನೆ ಅಲ್ಲ. ಆದರೆ ಇದು ನಮ್ಮ ಘನತೆ ಮತ್ತು ಗೌರವದ ಪ್ರಶ್ನೆ. ನಮ್ಮ ಸಮಾಜದ ಪ್ರಶ್ನೆ. ನಾವು ಅಕ್ಷರ ಜ್ಞಾನ ಕೊಡಬೇಕು. ವಿದ್ಯೆ ಕೊಡಬೇಕು. ಈ ಒಂದು ಕಾರ್ಯಕ್ರಮವನ್ನು ತಮ್ಮ ಸರ್ಕಾರ ಇದ್ದಾಗ ನಮ್ಮ ಸರ್ಕಾರ ಸರ್ಕ ಇದ್ದಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚು ಹೆಚ್ಚು ಹಣವನ್ನು ತೊಡಗಿಸಿಕೊಂಡು ಬಂದಿವೆ. ಹೆಚ್ಚಿನ ಹಣ ಬಾರಿ ಹಣ ಖರ್ಚು ಮಾಡತಕ್ಕಂಥ ಇಲಾಖೆಯಲ್ಲಿ ಎಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇವತ್ತ ಅಧ್ಯಕ್ಷರೇ ಏನಾಗಿದೆ? ನಾವು ಕೂಡ ಕೆಲವು ಕಾರ್ಯಕ್ರಮಗಳನ್ನು ಹಾಕಿದ್ದೇವೆ. ಅದು ಮಿಡ್ಡೇ ಮೀಲ್ ಪ್ರೋಗ್ರಾಂ; ಧೈರ್ಯ ಮಾಡಿ ಹಾಕಿದ್ದೇವೆ. It is because just to stop these drop-outs of children from schools. ಇದನ್ನು ನಿಲ್ಲಿಸಬೇಕೆಂಬುದು ನಮ್ಮ ಆಸೆ. ಹಾಗೆ ನಿಲ್ಲಿಸದಿದ್ದರೆ ಉಳಿಯುವುದಿಲ್ಲವೆಂದು ನಾನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಿದ್ದೇನೆ. ವಿವರಗಳಿಗೆ ಹೋಗದೆ ಇವತ್ತು ಅಲೆಮಾರಿ, ಅರೆ ಅಲೆಮಾರಿ ಜನಾಂಗದವರು ಇದ್ದಾರೆ. ಇವರಿಗೆ ಮನೆಗಳನ್ನು ಕೊಡುವ ವಿಚಾರವನ್ನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇವೆ. ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಜಯಂತಿ ಸಲುವಾಗಿ ಒಂದು ಲಕ್ಷ ಮನೆಗಳನ್ನು ಕೊಡತಕ್ಕಂಥಾದ್ದು ಮತ್ತು ಕಾರ್ಯಕ್ರಮದಲ್ಲಿ ಬೇರೆ ಬೇರೆ ಮನೆಗಳನ್ನು, ಸೈಟ್‌ಗಳನ್ನು ಕೊಡತಕ್ಕಂಥ ಕಾರ್ಯಕ್ರಮಗಳಿವೆ. ನಾನು ಆ ವಿವರಗಳಿಗೆ ಆ ನಂತರ ಬರುತ್ತೇನೆ. ಇವತ್ತು ಅಲೆಮಾರಿ, ಅರೆಅಲೆಮಾರಿ ಜನಾಂಗದ ತಂದು ನಿಲ್ಲಿಸದಿದ್ದರೆ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಎಂದೆಂದಿಗೂ ಸಿಕ್ಕುವುದಿಲ್ಲ. ಅವರು ಕತ್ತೆಗಳ ಮೇಲೆ ಎತ್ತಿನ ಮೇಲೆ ಎರಡು ಕೋಳಿ ಇಟ್ಟುಕೊಂಡು ಹೋಗುತ್ತಾ ಇರುತ್ತಾರೆ. ನಾವು ನಮ್ಮ ಕಣ್ಣು ಎದುರಿಗೆ ಓಡಾಡುತ್ತಿದ್ದಾರೆ. ಅವರು ವಿದ್ಯೆ ಇಲ್ಲದೆ

ಓಡಾಡುತಿದ್ದಾರೆ. ನಾವು ಕಾರಿನಲ್ಲಿ ಹೋಗುತ್ತಿರುತ್ತೇವೆ. ಅವರು ಹಾಗೆ ಹೋಗುತ್ತಿರುತ್ತಾರೆ. ನಮಗೆ ಸ್ವಾತಂತ್ರ್ಯ ಬಂದು ಇಷ್ಟು ದಿವಸಗಳಾಗಿವೆ. ನಿಜವಾಗಿಯೂ ನಾವು ತಲೆ ಬಗ್ಗಿಸಬೇಕಾಗಿದೆ. ನಾವು ಸಂಪೂರ್ಣವಾಗಿ ವಿದ್ಯೆ ಕೊಟ್ಟಿದ್ದೇನೆಂದು ಭಾವನೆ ಮಾಡಲಾರೆ. ಒಟ್ಟು 15 ಪರ್ಸೆಂಟ್ ಹೌಸಿಂಗ್ ಸ್ಕೀಮ್‌ನಲ್ಲಿ ಅವರಿಗೆ ಮನೆಗಳನ್ನು ತೆಗೆದಿಡಬೇಕೆಂದಿದ್ದೇವೆ. ಇದರ ಉದ್ದೇಶ ಏನು? ಇದು ಹೊಗಳಿಕೆ ಪ್ರಶ್ನೆ ಅಲ್ಲ. ಪ್ರಾಮಾಣಿಕ ಪ್ರಯತ್ನವೆಂದು ಹೇಳತಕ್ಕಂಥಾದ್ದಕ್ಕೆ ಒಂದು ಮಾತು. ಅವರನ್ನು ತಂದು ಒಂದು ಮನೆಯಲ್ಲಿ ಉಳಿಸಿದರೆ ಅವರ ಮಕ್ಕಳನ್ನು ಆ ಊರಿನ ಶಾಲೆಗೆ ಕಳುಹಿಸಬಹುದು ಎನ್ನುವ ಒಂದು ಆಸೆ. ಅಷ್ಟೇ, ಇದು ಎಷ್ಟರ ಮಟ್ಟಿಗೆ ನಡೆಯುತ್ತದೆ ಅದು ಬೇರೆ. ಅವರನ್ನು ತಂದು ಕೂರಿಸುವುದು ಅಷ್ಟು ಸುಲಭ ಅಲ್ಲ. ಅವರಿಗೆ ಊರೂರು ತಿರುಗಿ ರೂಢಿಯಾಗಿರುತ್ತದೆ. ಅವರನ್ನು ನಿಲ್ಲಿಸಬೇಕಾದರೆ ಕಷ್ಟ. ನಾನು ನಮ್ಮ ತಾಲ್ಲೂಕಿನಲ್ಲಿ ಸೂರಡಗಿ ಎನ್ನತಕ್ಕಂಥ ಒಂದು ಗ್ರಾಮ ಇದೆ. ಸೊರಬ ತಾಲ್ಲೂಕಿನಲ್ಲಿ; ಅವರನ್ನು ತಂದು ಅಲ್ಲಿ ಇಟ್ಟೆ. ಈಗ ಒಂದು 5-6 ವರ್ಷಗಳ ಹಿಂದೆ. ನಾನು ಆ ಜನರನ್ನು ನೋಡಿ ತಡೆದುಕೊಳ್ಳಲಿಕ್ಕೆ ಆಗಲಿಲ್ಲ. ಆ ಜನ ಲಂಬಾಣಿ ಜನ ಮತ್ತು ಬೋವಿ ಜನ. ಅಂದರೆ ವಡ್ಡರು. ಮತ್ತು ಬೇರೆ ಬೇರೆ ಜನಗಳು ಇದ್ದಾರೆ. ಅವರು ಕೂಲಿ ಹುಡುಕಿಕೊಂಡು ಹೊರಟು ಹೋಗುತ್ತಿರುತ್ತಾರೆ. ನಾನು ನೂರಾರು ಕುಟುಂಬಗಳನ್ನು ತೆಗೆದುಕೊಂಡು ಬಂದು ಅಲ್ಲಿರಿಸಿದ್ದೇನೆ. ಅವರು ಧಾರವಾಡ ಜಿಲ್ಲೆಯವರೋ ಎಲ್ಲಿನವರೋ ನನಗೆ ಗೊತ್ತಿಲ್ಲ. ನಾವು ಅವರನ್ನು ತಂದು ಅಲ್ಲಿ ಇರಿಸಿದರೂ ಅವರು ಅಲ್ಲಿರುವುದಕ್ಕೆ ಇಷ್ಟಪಡಲಿಲ್ಲ. ಒತ್ತಾಯ ಮಾಡಿ ಇರಿಸಿದ್ದೆವು. ಅವರು ಹೊರಟು ಹೋಗಿದ್ದರೆ ಮತ್ತೆ ಅವರನ್ನು ಓಡಿಸಿ ತರಿಸಿದ್ದೇನೆ. ಅಲ್ಲಿ ಈಗ ಸುಮಾರು 150 ಮನೆಗಳ ಮೇಲೆ ಆಗಿವೆ. ಈಗಾಗಲೇ ಹಂಚಿನ ಮನೆಗಳನ್ನು ಕಟ್ಟಿಕೊಳ್ಳಲು ವ್ಯವಸ್ಥೆ ಕೂಡ ಮಾಡಿದ್ದೇವೆ. ಹೌಸಿಂಗ್ ಸ್ಕೀಮ್ ಪ್ರಕಾರ ಮತ್ತು ಅವರಿಗೆ ಎರಡು ಬೋರ್‌ವೆಲ್‌ಗಳನ್ನು ಸಹ ತೋಡಿಸಿದ್ದೇವೆ. ಮತ್ತು ಅಲ್ಲಿ ಜಮೀನು ಇತ್ತು ಬಗರ್ ಹುಕ್ಕುಂ ಸಾಗುವಳಿ ಮಾಡಿ ಎಂದು ಹೇಳಿಬಿಟ್ಟಿದ್ದೇವೆ. ದೇವರೇ ಗತಿ. ಜಾಗ ಇತ್ತು. ತಮ್ಮ ಸರ್ಕಾರ ಇದ್ದಾಗ. ನಮ್ಮ ಸರ್ಕಾರ ಇದ್ದರೂ ಮಾಡಿಸಬೇಕಾಗುತ್ತದೆ. ಇದು ಅನಿವಾರ್ಯ. ಅವರ ಹೊಟ್ಟೆಗೆ ಅನ್ನ ಬೇಕು. ಅದಕ್ಕೆ ಮಾಡಿಸಿದ್ದೇವೆ. ಈಗ ಅವರಿಗೆ ಅನ್ನ ಇಲ್ಲ ಅಂದರೆ ಏನು ಮಾಡುತ್ತಾರೆ. ಹಿಂದೆ ಮರದಲ್ಲಿ ಮೆಣಸಿನಕಾಯಿ ಉಪ್ಪು ಅಕ್ಕಿ ಹಾಕಿಕೊಂಡು ಜಜ್ಜಿ ಊಟ ಮಾಡಿಬಿಡುತ್ತಿದ್ದರು. ಆದರೆ ಈಗ ಬರಗಾಲ ಜಾಸ್ತಿಯಾಗಿದೆ. ಜಮೀನು ಇದ್ದವರಿಗೆ ಮರ ಮೆಣಸಿನಕಾಯಿ ಉಪ್ಪು ಇಲ್ಲ. ಧಾರವಾಡ ಜಿಲ್ಲೆ ಜನರ ಗತಿ ಏನಾಗಿದೆ? ಬೆಳೆ ಸಿಗುವುದಿಲ್ಲ. ಅವರಿಗೆ ಕೂಲಿ ಸಿಗುವುದಿಲ್ಲ. ಮರ ಅಂದರೆ ಕೇರುವ ಮರ. ಟಿಂಬರ್ ಮರ ಅಲ್ಲ. ಸುಮ್ಮನೆ ತಿರುಗಾಡುತ್ತಿರುತ್ತಾರೆ.

ನಾನು ಹೇಳುವುದೇನೆಂದರೆ ಅವನ್ನು ಇನ್ನೊಬ್ಬರ ಮನೆಗೆ ಬೇಡಿ ತಿನ್ನಲು ಕಳುಹಿಸುದಕ್ಕಿಂತ ಸದ್ವ್ಯಯವಾಗಿರತಕ್ಕಂಥ ಜನಗಳಿಗೆ ಉದ್ಯೋಗ ಕೊಡತಕ್ಕಂಥ ಅವಶ್ಯಕತೆ ಇದೆ. ಅದಕ್ಕೆ ಅವರನ್ನು ತಂದು ನಿಲ್ಲಿಸಿದ್ದೇವೆ. ಇದು ಉದಾಹರಣೆ ಅಷ್ಟೇ; ಹೊಗಳಿಕೆ ಅಲ್ಲ. ಇದೂ ಒಂದು ಪ್ರಯೋಗ. ಇದೂಕೂಡ ಒಂದು ಪ್ರಯೋಗ. ನಾವು ಮಿಡ್ಡೆ ಮೀಲ್ಸ್ ಪ್ರೋಗ್ರಾಂ ಮಾಡಿದರೆ ಸಂಪೂರ್ಣವಾಗಿ ಮಕ್ಕಳು ಶಾಲೆಗೆ ಬರುತ್ತಾರೆಂದು ಅಲ್ಲ. ಒಂದು ಪ್ರಯೋಗವಾಗಿ ನಾವು ಇದನ್ನು ಇಟ್ಟಿರತಕ್ಕಂಥಾದ್ದು. ವಿದ್ಯೆ ಬಗ್ಗೆ ನಾವೆಲ್ಲರೂ ಕಳಕಳಿ ಇಟ್ಟುಕೊಂಡಿದ್ದೇವೆ. ಇದರ ಪ್ರಮಾಣವನ್ನು ಜಾಸ್ತಿ ಮಾಡಲೇಬೇಕು. In big jump this should be taken up ಅನ್ನತಕ್ಕಂಥ ವಿಚಾರ ಇಟ್ಟು ಈ ಮಾತನ್ನು ಆಡುತ್ತೇವೆ. ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯತಿಗಳು ಭಾರಿ ವ್ಯಾಖ್ಯಾನಕ್ಕೆ ಒಳಪಟ್ಟಿರತಕ್ಕ ವಿಚಾರ. ನಿಜ ಹೇಳಬೇಕೆಂದರೆ, ಇದು ಸಣ್ಣ ವಿಚಾರವಲ್ಲ. ತಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ಮಂಡಲ ಪಂಚಾಯತಿ ಮತ್ತು ಜಿಲ್ಲಾಪರಿಷತ್ತಿನ ಕಾನೂನು ತಂದು

ಬೇಕಾದಷ್ಟು ಸ್ಥಳೀಯ ಸಂಸ್ಥೆಗಳನ್ನು ರಚನೆ ಮಾಡಲಾಗಿದೆ; ಈ ಬಗ್ಗೆ ಅನೇಕ ವಿಚಾರಗಳನ್ನು ದಿವಂಗತ ನಸೀರ್‌ಸಾಬ್‌ರವರು ಹೇಳಿರತಕ್ಕಂಥಾದ್ದು ದಾಖಲೆಯಲ್ಲಿದೆ. ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಹೇಳಿರತಕ್ಕಂಥಾದ್ದು ದಾಖಲೆಯಲ್ಲಿದೆ. ಅದರ ಬಗ್ಗೆ ನಾವು ಎಷ್ಟೋ ಸಾರಿ ಪ್ರಸ್ತಾಪ ಮಾಡಿದ್ದೇವೆ. ಅವರು ಇದರ ಬಗ್ಗೆ ಏನು ಹೇಳಿದ್ದಾರೆ. ಇದು ಒಂದು ಪ್ರಯೋಗ; ಮತ್ತೆ ವ್ಯತ್ಯಾಸಗಳು ಬಂದಾಗ ನಾವು ಸರಿಪಡಿಸಿಕೊಂಡು ಹೋಗಬೇಕೆನ್ನುವ ಮಾತನ್ನು ಆಡಿದ್ದಾರೆ. ಇವತ್ತು ನಾವು ತಿದ್ದುಪಡಿ ತರತಕ್ಕಂಥ ವಿಚಾರ ಕೂಡಾ ಈ ಪ್ರಯೋಗದಲ್ಲಿ ಇದೊಂದು ಹೆಜ್ಜೆ ಅನ್ನತಕ್ಕಂಥ ಮಾತನ್ನು ಬಿಟ್ಟರೆ ನಮಗೆ ಬೇರೆ ದಾರಿ ಉಳಿದಿಲ್ಲ. ಪ್ರಯೋಗ ಮಾಡಿದ್ದೇವೆ. ಆದರೆ, ಒಂದು ಮಾತು ಮಾತ್ರ ನಿಜ. ಅಧಿಕಾರಿ ವಿಕೇಂದ್ರೀಕರಣದ ವಾದ ಏನಿದೆ, ಅದಕ್ಕೆ ನಮ್ಮ ಪಕ್ಷ ಬದ್ಧವಾಗಿದೆ ಎನ್ನುವ ಮಾತನ್ನು ಪದೇಪದೇ ಹೇಳುವುದಕ್ಕೆ ನನಗೆ ಆಸೆಯಾಗುತ್ತದೆ. ಆಗಿನ 64th Amendment Bill to the Constitution. ನಾಳೆ ನಮ್ಮ ಪಕ್ಷ ಕೇಂದ್ರದಲ್ಲಿ ಇದ್ದಾಗ ನಾವು ಈ ದಿಸೆಯಲ್ಲಿ ತರತಕ್ಕಂಥ ಒಂದು ಸಂದರ್ಭ ಬಂದಾಗ ಸಹಜವಾಗಿ we cannot go against to that theory at all ಹೋಗುವುದಕ್ಕಾಗುವುದಿಲ್ಲ. There may be some differences about certain matters here. ಇಲ್ಲಿ ಇರಬಹುದು. ಕೆಲವು ಕಲಮ್ ಬಗ್ಗೆ ಇರಬಹುದು. ಆದರೆ, ಮೂಲಭೂತವಾಗಿ ಒಂದು ಚೌಕಟ್ಟು ಏನಿರುತ್ತದೆ. ಆ ಚೌಕಟ್ಟನ್ನು ಬಿಟ್ಟು ಮಾತ್ರ ಹೋಗುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ತಮ್ಮ ಪಕ್ಷವೂ ಕೂಡ ತಮ್ಮ ಪಕ್ಷಬದ್ಧರಿದ್ದ ಹಾಗೆ ನಾವೂ ಕೂಡಾ ಅಧಿಕಾರಿ ವಿಕೇಂದ್ರೀಕರಣ ವಾದಕ್ಕೆ ಬದ್ಧರಾಗಿದ್ದೇವೆ. The modus operandi that may be adopted or that is going to be adopted - In that we may not differ. ಇದಕ್ಕೆ ಮಾತ್ರ ವ್ಯತಿರಿಕ್ತವಾಗಿರತಕ್ಕಂಥ ವಿಚಾರಧಾರೆ ನಮ್ಮಲ್ಲಿ ಕೂಡಾ ಇಲ್ಲ. ನಾವು ಬದ್ಧರಾಗಿಯೇ ಹೋಗುತ್ತೇವೆ ಅನ್ನತಕ್ಕಂಥ; ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಾಂದರ್ಭಿಕವಾಗಿ ನಾವು ಕಾನೂನು ತಿದ್ದುಪಡಿ ಮಾಡತಕ್ಕಂಥ ಸಂದರ್ಭದಲ್ಲಿ ಕೂಡ ಆ ವಿಚಾರವನ್ನು ಕೈಗೆತ್ತಿಕೊಳ್ಳುತ್ತೇವೆ. ಇಲ್ಲೊಂದು ಮಸೂದೆಯನ್ನು ನಾವು ಪ್ರಸ್ತಾಪ ಮಾಡಿದರೆ ಅದೇ ವೇದವಾಕ್ಯವೆಂದು ತಿಳಿದುಕೊಳ್ಳತಕ್ಕಂಥ ದಡ್ಡರು ನಾವೇನಲ್ಲ. ಅಂಥಾ ಮುರ್ಖತನಕ್ಕೆ ನಾವು ಕೈಹಾಕಬಾರದು. ಮುಂದೆ ಭವಿಷ್ಯದಲ್ಲಿ ಇದು ಸರಿಯಲ್ಲವೆಂದು ಕಂಡುಬಂದಾಗ ನಮ್ಮ ಪಕ್ಷ ಅಧಿಕಾರದಲ್ಲಿ ಇರಲಿ ಅಥವಾ ನಿಮ್ಮ ಪಕ್ಷ ಅಧಿಕಾರದಲ್ಲಿ ಇರಲಿ, ಅದನ್ನು ಸುಧಾರಣೆ ಮಾಡುವ ಸಂದರ್ಭ ಬಂದಾಗ ತಾವೂ ಕೂಡ ಮಾಡಲೇಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಮಾತನಾಡಿದ್ದೇನೆಯೇ ಹೊರತು ಬೇರೆ ಭಾವನೆ ಇಟ್ಟುಕೊಂಡು ನಾನು ಮಾತನಾಡುತ್ತಿಲ್ಲ. ಆಮೇಲೆ, ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಬರಗಾಲ ಜಾಸ್ತಿ ಇದೆ. ಜನರುಗಳಿಗೆ ಉದ್ಯೋಗ ಸಿಗುತ್ತಿಲ್ಲ. ಇದರ ಬಗ್ಗೆ ಅನೇಕ ಸದಸ್ಯರು ವ್ಯಾಖ್ಯಾನ ಮಾಡಿದ್ದಾರೆ. ನಮ್ಮ ರಾಜ್ಯದ ಹಣಬರಹ ಏನೋ ಗೊತ್ತಿಲ್ಲ; ಅನೇಕ ಮಳೆಗಳು ಬಾರದೆ ಪ್ರತಿ ವರ್ಷವೂ ತೊಂದರೆಯಾಗುತ್ತಿದೆ. ನಮ್ಮ ರಾಜ್ಯದಲ್ಲಿ ಉತ್ಕೃಷ್ಟವಾದ ಭೂಮಿ ಇದ್ದರೂ ಸರಿಯಾಗಿ ಮಳೆ ಬಾರದೆ ನಿರೀಕ್ಷಿತ ಮಟ್ಟದಲ್ಲಿ ಕೃಷಿ ಮಾಡುವುದಕ್ಕಾಗುತ್ತಿಲ್ಲ. ಈ ಸಾರಿಯ ಮಳೆಗಾಲದಲ್ಲಿ ಒಂದೆರಡು ಡ್ಯಾಮ್‌ಗಳನ್ನು ಬಿಟ್ಟು ಉಳಿವುಗಳು ತುಂಬಿಕೊಂಡಿದ್ದವು. ಕಾಳಿ ಪ್ರಾಜೆಕ್ಟ್‌ನಲ್ಲಿ ನಿರೀಕ್ಷಿತ ಮಟ್ಟದಲ್ಲಿ ನೀರು ತುಂಬಲಿಲ್ಲ.

ಅದೇ ರೀತಿ ನೀರಾವರಿ ವಲಯದಲ್ಲಿ ಮಲಪ್ರಭಾ ಪ್ರಾಜೆಕ್ಟ್‌ನಲ್ಲಿ ನೀರು ತುಂಬಲಿಲ್ಲ. ಎಷ್ಟು ನೀರು ತುಂಬಿದರೂ ಇವತ್ತಿನ ಪರಿಸ್ಥಿತಿ ಸರಿಯಿಲ್ಲ. ಮಲಪ್ರಭಾ ಪ್ರಾಜೆಕ್ಟ್ ಮಾದರಿ ಡೈವರ್ಷನ್ ಸ್ಕೀಮ್ ತರದಿದ್ದರೆ ಹುಬ್ಬಳ್ಳಿ ಧಾರವಾಡ ನಗರಕ್ಕೆ ಕುಡಿಯುವ ನೀರಿನ ತೊಂದರೆ ಇದ್ದೇ ಇದೆ. ಮೊನ್ನೆ ಮೊನ್ನೆ ತಾನೇ ಹುಬ್ಬಳ್ಳಿ

ಧಾರವಾಡದ ಮೇಯರ್ ಮತ್ತು ಇತರರು ಬಂದು ಕೇಳಿದ ಮೇಲೆ 200 ಬೋರ್‌ವೆಲ್‌ಗಳನ್ನು ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಒದಗಿಸಲು ಹಣವನ್ನು ಬಿಡುಗಡೆ ಮಾಡಿದ್ದೇವೆ. ಬೆಂಗಳೂರಿನಲ್ಲೂ ಸಹಾ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಬೋರ್‌ವೆಲ್‌ಗಳನ್ನು ಹಾಕಿಸಿದ್ದೇವೆ. ಅದೇ ರೀತಿಯಲ್ಲಿ ದಾವಣಗೆರೆ ನಗರದ ಮುನಿಸಿಪಾಲಿಟಿ ಸದಸ್ಯರುಗಳು ನಿನ್ನೆ ದಿವಸ ರಾತ್ರಿ ಭೇಟಿಯಾಗಿದ್ದರು. ಆಮೇಲೆ ಚಿಕ್ಕೋಡಿ ತಾಲ್ಲೂಕಿನಿಂದಲೂ ಜನರು ಬಂದಿದ್ದರು. ಅವರಿಗೆ ಹಣ ಬಿಡುಗಡೆ ಮಾಡುವುದಕ್ಕೆ ಆರ್ಡರ್ ಇಶ್ಯೂ ಮಾಡಿದ್ದೇವೆ. ಆಮೇಲೆ ರ್‍ಯಾಟಿಫಿಕೇಷನನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳೋಣವೆಂದು ಕುಡಿಯುವ ನೀರಿಗೆ ಮೊದಲ ಆದ್ಯತೆಯನ್ನು ನಾವು ಕೊಡುತ್ತಿದ್ದೇವೆ. ಇದು ಅಷ್ಟೇ ನಾನು ಹೇಳಿದೆ ಎಂದಲ್ಲ. ಉಳಿದಿದ್ದಕ್ಕೆ ಕೂಡ ಸರ್ಕಾರದ ಒಂದು ನೀತಿ ಇದೆ. ಕುಡಿಯುವ ನೀರಿಗೆ ಹೆಚ್ಚಿನ ಗಮನ ಕೊಡಬೇಕು. ನಾವು ಗಮನ ಕೊಡುವಂತಹ ಅವಶ್ಯಕತೆ ಇದೆ. ಇಷ್ಟು ಕೊಟ್ಟರೂ ಕೂಡ ಶಾರ್ಟ್ ಫಾಲ್ಸ್ ಇದ್ದೇ ಇರುತ್ತದೆ. ಎನ್ನತಕ್ಕ ಮಾತು. ಗ್ರಾಮಾಂತರ ಪ್ರದೇಶದಲ್ಲಿ ತಮಗೆ ಗೊತ್ತಿರುವ ಹಾಗೆ ತಮ್ಮ ಕಾಲ ಇರಬಹುದು. ನಮ್ಮ ಕಾಲ ಇರಬಹುದು. ಅದು ಹಾಗೆ ಇತ್ತು, ಹಾಗೆ ಆಗಿತ್ತು, ಈಗ ಎಲ್ಲವೂ ಸರಿಯಾಗಿದೆ ಎಂದು ನಾನು ವಾದ ಮಾಡುತ್ತಿಲ್ಲ. That is not my intention. I want to make it clear. However, this has assumed a very big dimension ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಯಾಕೆಂದರೆ ನೀರಿನ ಪ್ರಮಾಣ, ಇವತ್ತು ಬೋರ್‌ವೆಲ್ ಪರಿಸ್ಥಿತಿ ಏನು ಆಗಿದೆ? ರಾಣೆಬೆನ್ನೂರು, ಹಾವೇರಿ ಈ ಕಡೆಯ ಭಾಗದಲ್ಲಿ ಪಂಪುಸೆಟ್ಟುಗಳನ್ನು ಅರ್ಧ ರೇಟಿಗೆ ಕಾಲು ರೇಟಿಗೆ ಮಾರಾಟ ಮಾಡುತ್ತಿದ್ದಾರೆ. ಮೀಟರ್ ಟೇಬಲ್ ಕೆಳಗೆ ಹೊರಟು ಹೋಗಿಬಿಟ್ಟಿದೆ. ಉದಾಹರಣೆಗೆ ನಾನು ಹೇಳುವುದಾದರೆ ಅನೇಕ ಕಡೆಗಳಲ್ಲಿ ಆಗಿದೆ. ನಿಮ್ಮ ಕೋಲಾರದಲ್ಲಿ ಆಗಿದೆ. ಇಲ್ಲಿ ಬೆಂಗಳೂರು ಹತ್ತಿರ ಆಗಿದೆ. ಮಳೆ ಪ್ರಮಾಣ ಕಡಿಮೆ ಬೀಳುವುದರಿಂದ ಇದು ಪ್ರಪಂಚದಲ್ಲಿಯೇ ಕಡಿಮೆ, ದೇಶದಲ್ಲಿ ಕಡಿಮೆ, ತತ್ಸಮವಾಗಿ ಕರ್ನಾಟಕದಲ್ಲೂ ಕಡಿಮೆ. ವಾಟರ್ ಟೇಬಲ್ ಸಂಪೂರ್ಣವಾಗಿ ಕೆಳಗೆ ಹೋಗುತ್ತದೆ. ಓಪನ್ ವೆಲ್ಸ್ ಡ್ರೈ ಅಪ್ ಆಗುತ್ತಿವೆ. ಬೋರ್‌ವೆಲ್ ಸುಮಾರು 60-70 ಪರ್ಸೆಂಟ್ ಡ್ರೈ ಅಪ್ ಆಗಿದೆ ಎನ್ನತಕ್ಕ ವರದಿ ಇದೆ. ನಿಜವಾಗಿ ಇದು ಗಾಬರಿ ತರತಕ್ಕ ವಿಚಾರ. ಇವತ್ತು ನಾವು ಅದನ್ನು ದೀಪನ್ ಮಾಡಬೇಕು ಎಂದು ಹೋದರೂ ಅದು ಹೆಚ್ಚು ಖರ್ಚು ಆಗುತ್ತದೆ. ಆದರೆ ಲೆಕ್ಕಾಚಾರ ಸಿಗುತ್ತಾ ಇಲ್ಲ. ಹೊಸದಾಗಿ ತೆಗೆಸುವುದು ಒಳ್ಳೆಯದು ಎನ್ನತಕ್ಕ ವಿಚಾರ ಇದೆ. ಇನ್ನೂ ಒಂದು, ಇದರಲ್ಲಿ ಮೋಸ ಆಗಿರುವುದು ನಮ್ಮ ಗಮನಕ್ಕೆ ಬಂದಿದೆ. ಕೇಸಿಂಗ್ ಪೈಪ್ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವ ಹಾಗೆ ಇದ್ದರೆ, ಅನೇಕ ಕಡೆಗಳಲ್ಲಿ ಮೋಸ ಕೂಡ ಆಗಿವೆ. ನಮ್ಮ ಕಾಲ, ನಿಮ್ಮ ಕಾಲ ಎಂದಲ್ಲ; ಅದು ಮಾಡಿರುವವರದ್ದೇ ಒಂದು ಕಾಲ. ಅವರು ಏನು ಮಾಡುತ್ತಾರೆ? ಬೈರೇಗೌಡರೂ ಕೂಡ ಒಪ್ಪುತ್ತಾರೆ. ನಾವು ನೀವು ಹೋಗಿ ನೋಡುವುದಕ್ಕಾಗುವುದಿಲ್ಲ. ನಾವು ಇಂಜಿನಿಯರ್ ಅಲ್ಲ. ಅಲ್ಲಿ ಹೋಗಿ ನಾವು ಯಾರೂ ನೋಡುವುದಕ್ಕಾಗುವುದಿಲ್ಲ. ಕೇಸಿಂಗ್ ಪೈಪ್ ಎಷ್ಟು ಹಾಕಿದರು ಎಂದು ನಮಗೆ ಗೊತ್ತಾಗುವುದಿಲ್ಲ. ಆದರೂ ಇಷ್ಟು ಹಾಕಿದ್ದೇವೆಂದು ಬಿಲ್ಲು ಹಣ ತೆಗೆದುಕೊಂಡು ಬಿಡುವುದು; ಪೂರ್ತಿ ಸೆಟ್ಲ್ ಆಗಿ ಬ್ಲಾಕ್ ಆಗಿ ಇದ್ದಂತಹ ನೀರು ಕೂಡ ಹಾಳು ಆಗುವುದಕ್ಕೆ ಅವರು ಬೇರೆ ಕಾರಣಕರ್ತರಾಗಿ ಕುಳಿತುಕೊಂಡಿದ್ದಾರೆ. ಹೆಚ್ಚಿಗೆ ಏನು ಮಾಡಬಹುದು ಎಂದರೆ ತನಿಖೆ ಮಾಡಿಸಬಹುದು. ಎಲ್ಲಾ ಬಾವಿಗಳ ಹತ್ತಿರ ಹೋಗಿ ಇಂಚು ಪಟ್ಟಿ ತೆಗೆದುಕೊಂಡು ಎಷ್ಟು ಇಂಚು ಹಾಕಿದ್ದಾರೆ. ಎಷ್ಟು ಹಾಕಬೇಕಿತ್ತು, ಎಷ್ಟು ಇಲ್ಲ ಎಂದು, ಆದರೆ ಈಗ ನಾವು ನೀರು ಕೊಡುವುದಕ್ಕೆ ಮಾತ್ರ ಸಾಧ್ಯ ಆಗುತ್ತಾ ಇಲ್ಲ. Better we go in for providing drinking water

immediately. We have to sink more borewells in other areas. ಅಲ್ಲಿ ಅಕ್ಕಪಕ್ಕದಲ್ಲಿ ಎಲ್ಲೆಲ್ಲಿ ಮಾಡಿಕೊಳ್ಳಬೇಕು ಎನ್ನುವುದನ್ನು ಬಿಟ್ರೆ ಇನ್ನು ಬೇರೆ ಏನೂ ನನಗೆ ಕಾಣಿಸುತ್ತಿಲ್ಲ. ಬೇರೆ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟರೆ We are prepared to take up all those programmes.

ಶ್ರೀಮತಿ ಚಂದ್ರಪ್ರಭಾ ಅರಸ್ : ಮಿನಿ ವಾಟರ್ ಸ್ಕೀಮ್ ಅಂದರೆ ಕಿರು ನೀರಾವರಿ ಬಗ್ಗೆ ನಾನು ಹೇಳಿದ್ದೆ;

ಶ್ರೀ ಎಸ್. ಬಂಗಾರಪ್ಪ : ಕಿರು ನೀರಾವರಿ ಯೋಜನೆಗಳು. ಪೈಪ್ಡ್ ವಾಟರ್‌ಗಳು ಏನು ಇದ್ದಾವೆ. ಅದು ದೊಡ್ಡ ಪ್ರಮಾಣದಲ್ಲೆ ಹಾಕತಕ್ಕಂತಹ ಅವಶ್ಯಕತೆ ಬಹಳ ಇದೆ ಎಂದು ನನಗೆ ಅನಿಸುತ್ತದೆ. ಹಾಗೆ ಏನಾದರೂ ಮಾಡಿಕೊಂಡರೆ ಅದಕ್ಕೂ ಕೂಡ ನನಗೆ ಅನಿಸುತ್ತದೆ. ಕೇಸಿಂಗ್ ಪೈಪ್ ಜೊತೆಗೆ ಅದರದ್ದು ಏನು ಎಂಬುದನ್ನು ಯೋಚನೆ ಮಾಡಬೇಕು, ನೀರು ಬೇಕಲ್ಲ;

ಶ್ರೀ ಬಿ.ಹೆಚ್. ಬನ್ನಿಕೋಡ್ : ಕೈ ಪಂಪುಗಳನ್ನು ಹಾಕುವುದಕ್ಕೆ ಬದಲು ಭೂಮಿಯಲ್ಲಿ ನೀರಿದ್ದರೆ ಮಿನಿ ವಾಟರ್ ಸ್ಕೀಮ್ ಮಾಡಿ, ಆ ನೀರನ್ನು ಸಪ್ಲೈ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ : ವಿವರಣೆಗೆ ನಾನು ಹೋಗದೇ ಪರಿಸ್ಥಿತಿ ಈ ರೀತಿ ಇದೆ ಎನ್ನತಕ್ಕದ್ದನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ವಿವರಣೆ ಕೊಡುವುದು ಕೆಲವೊಮ್ಮೆ ಅವಶ್ಯಕ. ಕುಡಿಯುವ ನೀರಿಗೆ ಆದ್ಯತೆ ಕೊಡಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ ಹಾಗೂ ರಾಷ್ಟ್ರೀಯ ನೀತಿಯಾಗಿದೆ. ಆದ್ಯತೆಗೆ ಅನುಗುಮವಾಗಿ ನಾವು ಹೆಚ್ಚಿನ ಹಣವನ್ನು ಕೇಂದ್ರ ಸರ್ಕಾರದ ನೆರವಿನ ಜೊತೆಗೆ ಆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಅನ್ನತಕ್ಕ ಮಾತಿಗೆ ಅನ್ಯಥಾ ಮಾತು ಇಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಉದ್ಯೋಗದ ಬಗ್ಗೆ ಹೇಳುವುದಾದರೆ, ನಾನು ಬಜೆಟ್‌ಗೆ ಬಂದಾಗ ಬಹಳ ವಿವರಣೆಗೆ ಹೋಗಬೇಕು ಎಂಬ ಉದ್ದೇಶ ಇದೆ. ಅಂಕಿ ಅಂಶಗಳ ಸಹಿತ. ಇವತ್ತು ಇರತಕ್ಕ ಕೇಂದ್ರ ಸರ್ಕಾರದ ನೀತಿ ಮತ್ತು ರಾಜ್ಯ ಸರ್ಕಾರದ ನೀತಿಯ ಪ್ರಕಾರ ನಮ್ಮ ಕಾರ್ಯಕ್ರಮವನ್ನು ಆದಷ್ಟು ಜನರಿಗೆ ಕೊಡತಕ್ಕದ್ದನ್ನು ನಾವು ಮುಂದುವರೆಸಿಕೊಂಡು ಹೋಗುತ್ತೇವೆ. ಇಲ್ಲೆ ಈ ಸಂದರ್ಭದಲ್ಲೆ ಶಿಕ್ಷಣ ಕ್ಷೇತ್ರಕ್ಕೆ ಸಂದರ್ಭದಲ್ಲಿ ಹಾಗೆ ಮತ್ತೊಂದು ಮಾತನ್ನು ಆಡಿದರೆ ಬಹಳ ಒಳ್ಳೆಯದು. 11 ಸಾವಿರ ಶಿಕ್ಷಕರನ್ನು ಈ ಸಾರಿ ನಾವು ನೇಮಕ ಮಾಡುತ್ತೇವೆ. ನಿಜ ಹೇಳಬೇಕು ಎಂದರೆ ಆಯಾ ಜಿಲ್ಲೆಯವರನ್ನೇ ಮಾಡಬೇಕು ಎನ್ನತಕ್ಕ ತೀರ್ಮಾನವನ್ನು ಮಾಡಿದಾಗ ಆ ಬಗ್ಗೆ ಬಹಳ ಜನ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ಕಡೆಯಿಂದ ಕೂಡ ಮೆಚ್ಚುಗೆ ಬಂದಿದೆ. ಇಲ್ಲದಿದ್ದರೆ ಏನು ಮಾಡುತ್ತಾರೆ ಅಂದರೆ 19 ಜಿಲ್ಲೆಗಳಿಗೂ ಅರ್ಜಿ ಹಾಕಿಕೊಳ್ಳುತ್ತಾರೆ. ಇಲ್ಲಿಂದ ಅಲ್ಲಿಗೆ ಹೋಗುವುದು, ಅಲ್ಲಿಂದ ಇಲ್ಲಿಗೆ ಬರುವುದು ಸುಮ್ಮನೇ ಹಣ ಖರ್ಚು ಮಾಡಿಕೊಳ್ಳುತ್ತಾರೆ. ಕಡೆಗೆ ಅಲ್ಲೆ ಕೂಡ ಸೆಲೆಕ್ಟ್ ಆಗದೇ ಇರುವುದು. ಇದು ಒಳ್ಳೆಯದಲ್ಲ ಎನ್ನತಕ್ಕ ದೃಷ್ಟಿಯಿಂದ; It will not stand in the Court of Law. ಇತ್ಯಾದಿ ಬಂದವು. Let us take that risk ಎಂಬ ದೃಷ್ಟಿಯಿಂದ ಇದನ್ನು ಮಾಡಿರತಕ್ಕದ್ದು. ಇಲ್ಲಿಯವರೆಗೆ ಏನೂ ಆಗಿಲ್ಲ. ಬಹಳ ಚೆನ್ನಾಗಿ ಆಗಿದೆ ಎನ್ನತಕ್ಕ ವಿಚಾರ. ಆದರೆ ಒಂದೆರಡು ಕಡೆ ಮಾತ್ರ ಆಪಾದನೆ ಬಂದಿದೆ. ಅದನ್ನು ಮಾನ್ಯ ಶಿಕ್ಷಣ ಸಚಿವರು ನೋಡುತ್ತಾರೆ. ರಾಯಚೂರು ಮತ್ತು ಬೆಳಗಾಂನಲ್ಲಿ ನನಗೆ ಗೊತ್ತಿರುವ ಹಾಗೆ ಆಪಾದನೆ ಇರಬಹುದು; ಅದನ್ನು ಕರೆಕ್ಟ್ ಮಾಡುತ್ತಿದ್ದಾರೆ. ಅಲ್ಲಿ ಏನು ಮಾಡಿದ್ದಾರೆ ಎಂದರೆ ಬೇರೆ ಜಿಲ್ಲೆಯವರಿಗೆ ಕೊಟ್ಟಿದ್ದಾರೆ,

ಎಂಬುದು ಒಂದು, ಇನ್ನೊಂದು ಕಡಿಮೆ ಮಾರ್ಕ್ಸ್ ಇದ್ದವರಿಗೆ ಕೊಟ್ಟು ಹೆಚ್ಚಿಗೆ ಮಾರ್ಕ್ಸ್ ತೆಗೆದುಕೊಂಡವರನ್ನು ಬಿಟ್ಟು ಬಿಟ್ಟಿದ್ದಾರೆ ಎನ್ನುವಂತಹ ಒಂದು ವಾದ ಬಂತು. That matter is already being looked into. ಈ ಬಗ್ಗೆ ಸೂಕ್ತ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಹಿಂದೆ ಸಮಿತಿಗಳಿದ್ದಾಗ ಇಲ್ಲಿ ಏನು ಅಪಾದನೆಗಳು ಬಂದಿದ್ದವು, ಅದು ಇನ್ನೂ ನನ್ನ ನೆನಪಿನಲ್ಲಿದೆ. ಮಾನ್ಯ ರಾಚಯ್ಯನವರು ಶಿಕ್ಷಣ ಸಚಿವರಾಗಿದ್ದಂಥ ಕಾಲದಲ್ಲಿ ನಡೆದ ಘಟನೆ ತಮ್ಮ ನೆನಪಿನಲ್ಲಿರಬಹುದು. ಆ ಸಂದರ್ಭದಲ್ಲಿ ತತ್‌ಕ್ಷಣವೇ ಸಮಿತಿಯು ತನ್ನ ಕೆಲಸ ಮಾಡುವುದನ್ನು ನಿಲ್ಲಿಸಿ ಬಿಟ್ಟರು. ಏಕೆಂದರೆ ಲಂಚರುಷುವತ್ತುಗಳು ತಲೆಬುಡವಿಲ್ಲದೆ ಹೋದಾಗ ನಾವು ಸಚಿವ ಸಂಪುಟದವರು ಆ ಬಗ್ಗೆ ಒಂದು ತೀರ್ಮಾನವನ್ನು ಮಾಡಿದ್ದೇವೆ. ಉಳಿದಂತೆ ನಾವು ಈ ಬಾರಿಯ ಅಧ್ಯಾಪಕರ ಆಯ್ಕೆಯನ್ನು ಮಾಡಿದ ವಿಧಾನದಲ್ಲಿ ಐದು ಪೈಸೆಗಳಷ್ಟು ಕೂಡ ಎಲ್ಲಿಯೂ ಅವ್ಯವಹಾರ ನಡೆದ ಬಗ್ಗೆ ನಮ್ಮ ಗಮನಕ್ಕೆ ಬಂದಿಲ್ಲ. ಎಲ್ಲಿಯಾದರೂ ಜಾಸ್ತಿ ಅಂಕಗಳನ್ನು ಪಡೆದವರನ್ನು ಬಿಟ್ಟು ಕಡಿಮೆ ಅಂಕಗಳನ್ನು ಪಡೆದವರಿಗೆ ಹಾಕಿದ್ದಾರಲ್ಲ. ಅಲ್ಲಿ ಏನಾದರೂ ನಡೆದಿರಬಹುದೇನೋ ಎಂಬ ಒಂದು ಸಂಶಯ ನಮ್ಮನ್ನು ಕಾಡುತ್ತಿದ್ದರೂ ಕೂಡ ಆ ಬಗ್ಗೆ ಕೂಡ ನೀಡಿದ ಕಟ್ಟುನಿಟ್ಟಿನ ಆದೇಶಗಳಿಂದಾಗಿ ಅದು ಕೂಡ ನಡೆಯದಂತೆ ನೋಡಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಆಯ್ಕೆ ಮಾಡುವಾಗ ವಯಸ್ಸು ಮಿತಿಯನ್ನು ಅಂದರೆ ಜಾಸ್ತಿ ವಯಸ್ಸಿನ ಆಧಾರದ ಮೇಲೆ ಆದ್ಯತೆಯನ್ನು ಕೊಡಬೇಕೆಂದು ಮಾಡಿದ್ದೇವೆ, ಆ ರೀತಿ ಮಾಡಿದ್ದಾರೆ.

ಇನ್ನು ಪಂಪುಸೆಟ್‌ಗಳಿಗೆ ಕಡಿಮೆ ದರ ಮಾಡಬೇಕೆಂಬ ವಿಚಾರದಲ್ಲಿ ನಾವು ಚರ್ಚೆ ಮಾಡಿದ್ದೇವೆ. ಆ ಬಗ್ಗೆ ಈಗಾಗಲೇ ಹೇಳಿರುವ ಕಾರಣ ಇನ್ನೊಮ್ಮೆ ಆ ಕುರಿತು ಹೇಳುವುದಿಲ್ಲ. ನಮಗೆ ಎಷ್ಟು ವಿದ್ಯುಚ್ಛಕ್ತಿ ಸಿಗುತ್ತದೆ ಅದಕ್ಕೆ ಅನುಗುಣವಾಗಿ ನಾವು ಎಷ್ಟೇ ಕಷ್ಟ ಇದ್ದರೂ ಕೂಡ ಅದನ್ನು ಅರ್ಧ ಚಾರ್ಜ್ ಎಂದು ಮಾಡಿದ್ದೇವೆ. ಅದರ ವಿವರಗಳಿಗೆ ನಾನು ಹೋಗುವುದಿಲ್ಲ. 40 ಸಾವಿರ ಪಂಪ್ ಸೆಟ್‌ಗಳು ಇದ್ದುದನ್ನು ನಾನು 60 ಸಾವಿರಕ್ಕೆ ಏರಿಸಿದ್ದೇವೆ. ಹೀಗೆ ನಾವು ಎನರ್ ಜೈಸ್ ಮಾಡುವ ಕಾರ್ಯ ಈಗ 60 ಸಾವಿರವನ್ನು ಮುಟ್ಟುವ ಹಂತಕ್ಕೆ ತಲುಪಿರುವುದು ನಮ್ಮ ಸಾಧನೆ. ಈ ತಿಂಗಳ ಕೊನೆಯಲ್ಲಿ ಅದು 60 ಸಾವಿರಕ್ಕೆ ಬಂದು ತಲುಪುತ್ತದೆ, ಎಲ್ಲಿಯಾದರೂ ಒಂದು ನೂರು ಹೆಚ್ಚು ಅಥವಾ ಕಡಿಮೆ ಆಗಬಹುದು. ಈಗಾಗಲೇ 57 ಸಾವಿರ ಸಂಖ್ಯೆಗೆ ತಲುಪಿದ್ದು ತಿಂಗಳ ಕೊನೆಯಲ್ಲಿ ನಮ್ಮ ಗುರಿ ಮುಟ್ಟುವ ಪ್ರಯತ್ನ ನಮ್ಮದಾಗಿದೆ. ಆದರೆ ವಿದ್ಯುಚ್ಛಕ್ತಿ ಸಪ್ಲೈ ಮಾಡತಕ್ಕಂಥ ವಿಚಾರದಲ್ಲಿ ತೊಡಕು ಇವೆ. ಈ ಬಗ್ಗೆ ಇವೊತ್ತು ಚಿಂತಾಮಣಿಯಲ್ಲಿ ಈ ಬಗ್ಗೆ ಅಮರಣಾಂತಿಕ ಉಪವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಬಂದ ಪತ್ರಿಕಾ ವರದಿಯನ್ನು ನೋಡಿದ್ದೇನೆ. ಆ ಬಗ್ಗೆ ಚೀಫ್ ಇಂಜಿನಿಯರ್‌ರವರನ್ನು ಕರೆಸಿ ಮಾತನಾಡಿದ್ದೇನೆ. ಅದನ್ನು ಸರಿಪಡಿಸುತ್ತೇವೆ. ಜಿಲ್ಲಾ ಪರಿಷತ್ ಸದಸ್ಯರುಗಳು ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಸುದರ್ಶನ್‌ರವರು ಮತ್ತು ಶ್ರೀ ಪಿಳ್ಳಪ್ಪನವರು ಕೂಡ ಮಾತುಕತೆಗೆ ಬಂದಿದ್ದರು. ಅವರಲ್ಲದೆ ಬೇರೆ ಮುಖಂಡರುಗಳು ಕೂಡಾ ಬಂದಿದ್ದರು. ನಾನು ಕುಮಾರಕೃಪಾದಲ್ಲಿ ಫೈಲ್ ನೋಡುವಾಗ ತಾವು ಬಂದಿದ್ದಿರಿ. ಆಗ ನಡೆದ ನಮ್ಮ ನಿಮ್ಮ ಚರ್ಚೆ ಬಹುಶಃ ನಿಮ್ಮೆಲ್ಲರ ಮನಸ್ಸಿಗೆ ಸಮಾಧಾನ ತಂದಿರಬಹುದು ಎಂದು ಅಂದುಕೊಂಡಿದ್ದೇನೆ. ಪೂರ್ತಿ ಸಮಾಧಾನ ತಂದಿರಲಾರದು. ಆ ದಿಶೆಯಲ್ಲಿ ನಾವು ಕೈಗೊಂಡ ಕಾರ್ಯಕ್ರಮಗಳು ತಮ್ಮ ಮನಸ್ಸಿಗೆ ಸಮಾಧಾನವನ್ನು ತಂದಿರಬಹುದು ಎಂದು ನಾನು ನಂಬಿದ್ದೇನೆ. ಟ್ರಾನ್ಸ್‌ಫಾರ್ಮರ್ ವಿಚಾರದಲ್ಲಿ ಸಂಬಂಧಪಟ್ಟವರೊಡನೆ ಚರ್ಚಿಸಿದ್ದೇನೆ. ಅಂದು ಕೆ.ಇ.ಬಿ. ಚೇರ್ಮನ್‌ರವರು ಇರಲಿಲ್ಲ ಇದರ ಬಗ್ಗೆ ಕೂಡಾ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ.

ಈ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಪಂಚ ಸೂತ್ರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಈ ಮಾತನ್ನು ಮೇಲ್ಮನೆಯಲ್ಲಿ ಕೂಡಾ ನೆನ್ನೆ ದಿನ ಹೇಳಿದ್ದೇನೆ. ಇವೊತ್ತು ಆಡಳಿತದಲ್ಲಿ ವ್ಯತ್ಯಾಸ ಆಗಿಲ್ಲ. ಈ ಮಾತನ್ನು ನಾನು ನೇರವಾಗಿ ಒಪ್ಪಿಕೊಳ್ಳುತ್ತೇನೆ. ಹಿಂದೆ ಹೇಗೆ ಇತ್ತು, ಇಂದು ಹಾಗೆಯೇ ಇದೆ. ಇದಕ್ಕೊಂದು ಕಾರ್ಯಕಲ್ಪವನ್ನು ಹಾಕದಿದ್ದರೆ ಅದು ಸರಿಹೋಗುವುದಿಲ್ಲ. ಹಣಕಾಸು ಮತ್ತಿತರ ವಿಚಾರಗಳ ಬಗ್ಗೆ ಗಮನ ಕೊಟ್ಟು ನಮ್ಮ ಬಜೆಟ್ ಪ್ರೆಸೆಂಟ್ ಆಗಲಿ ಎಂದು ನಾವೂ ಕೂಡ ಕಾದಿದ್ದೇವೆ. ಈಗ ನಾವು ಪಂಚಸೂತ್ರಗಳನ್ನು ಮಾಡಿದ್ದೇವೆ. ಇದರ ಬಗ್ಗೆ ಹೆಚ್ಚಿನ ವಿವರಗಳಿಗೆ ಹೋಗದೇನೆ, ಅದೇ ಒಂದು ರಾಮಬಾಣ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆಡಳಿತ ಸುಧಾರಣೆಯ ದೃಷ್ಟಿಯಲ್ಲಿ ಇದೊಂದು ಪ್ರಯೋಗ ಮಾತ್ರ, ಇದರಲ್ಲಿ ಸರಿಹೋಗದಿದ್ದರೆ, ಅನ್ಯ ಮಾರ್ಗಗಳನ್ನು ಸೂಕ್ತ ದಿಶೆಯಲ್ಲಿ ಹುಡುಕಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಏಕೆಂದರೆ ಬಸವಲಿಂಗಪ್ಪನವರು ಒಂದೊಂದು ಸಲ ಹೊಸ ಹೊಸ ವಿಚಾರಗಳನ್ನು ಹೇಳಿಬಿಡ್ತಾರೆ. ನಾನು ಹೇಳುತ್ತಿದ್ದಂತೆ ಇದೂ ಕೂಡ ಒಂದು ಪ್ರಯೋಗ. ಉದಾಹರಣೆಗೆ ಇವತ್ತೊಂದು ಕೌಂಟರ್ ಹಾಕಿ ಬಿಡಬೇಕು ಮತ್ತು ಅಲ್ಲೆಲ್ಲ ಇಂಟರ್‌ಕಾಂ ಹಾಕಿಸಬೇಕೆಂದು ಸುಮ್ಮನೆ ಚಿಂತನೆ ಮಾಡಿದ್ದೇವೆ, ಫೈಲ್ ಏನಾಗಿದೆ ಎಂದು ಕೇಳಿದಾಗ 10-20 ನಿಮಿಷದಲ್ಲಿ ಸಂಬಂಧಪಟ್ಟವರು ಆ ಕೌಂಟರ್‌ಗೆ ಬರಬೇಕು. ಗುಮಾಸ್ತರ ಹತ್ತಿರ ಜನ ಬಿಟ್ಟರೆ ಅದು ಲಂಚಕ್ಕೆ ಅವಕಾಶವಾಗುತ್ತದೆ. ಇದೊಂದು ಚಿಂತನೆ, ತೀರ್ಮಾನ, ವಿವರ ಚರ್ಚೆ ಮಾಡಿ ಹೊರಟು ಹೋಗಿಬಿಡಬೇಕು. ಅವರಿಗೆ ಏನಾಗಬೇಕೆಂದು ಚೀಟಿ ಕೊಟ್ಟು ಕಳಿಸಬೇಕು, ಅಥವಾ ಫೈಲ್ ಹೋಗಿದ್ದರೆ ಇಂತಲ್ಲಿ ಹೋಗಿದೆ ಅಂತಾದರೂ ಹೇಳಬೇಕು. ಸುಮ್ಮನೆ ಕೂತರೆ ಏನು ಬರುತ್ತದೆ. ಇನ್ನೂ ಕೂಡ ಸಂಪೂರ್ಣವಾಗಿ ಅಂತಿಮ ತೀರ್ಮಾನ ಮಾಡಿಲ್ಲ ಆದರೆ ಆ ದಿಸೆಯಲ್ಲಿ ಕೆಲವು ಸೂತ್ರಗಳನ್ನು ಹಾಕಿದ್ದೇವೆ. ಅಡ್ಮಿನಿಸ್ಟ್ರೇಟಿವ್ ಆಕ್ಟ್ ತರಬೇಕೆಂದು ಪ್ರಸ್ತಾಪ ಮಾಡಿದ್ದೇವೆ. ಇವತ್ತು ಏನಾಗಿದೆ, ಇಡೀ ದೇಶದಲ್ಲೇ ಒಬ್ಬ ಗುಮಾಸ್ತನ ಮೇಲೆ ಒಬ್ಬ ಆಫೀಸರ್ ಸೆಕ್ಷನ್ ಆಫೀಸರ್ ಮೇಲೆ ಮತ್ತೊಬ್ಬರು, ಕೆಲವು ಹಂತಗಳಿವೆ. ನಮ್ಮ ಸುತ್ತೋಲೆ ಪ್ರಕಾರ ಮಾಡಬೇಕು, ನೀವು ಫೈಲ್ ಬರೆದು ಕಳಿಸಿಕೊಡಬೇಕು ಎಂದರೆ ಅವನು ಹಾಗೇ ಇಟ್ಟುಕೊಂಡರೆ 15 ದಿವಸ 15 ತಿಂಗಳು ಅವನಿಗೆ ಯಾರೂ ಹೇಳಂಗಿಲ್ಲ ಕೇಳಂಗಿಲ್ಲ ಅನ್ನೋ ಮಟ್ಟಕ್ಕಿದೆ. Please do not forget this aspect. ಅದಕ್ಕೇನು ಮಾಡಬೇಕು? We will have to fix up the responsibility and accountability. ಇದನ್ನು ಮಾಡಿ ಕಾನೂನು ಚೌಕಟ್ಟಿಗೆ ತರಬೇಕು. ಇವತ್ತು ಇದು ಒಂದು ಹೊಸ ಪ್ರಯೋಗ ಈ ಬಗ್ಗೆ ಬೇರೆ ರಾಜ್ಯಗಳ ಜೊತೆ ಸಂಪರ್ಕ ಬೆಳೆಸಿದ್ದೇವೆ. ಯಾರಾದರೂ ಮಾಡಿದ್ದಾರಾ ಅಂತ; ಯಾರೂ ಇಲ್ಲಮೋ ನಾನಾದರೂ ಹೊಸದಾಗಿ ಮಾಡೋಣ ಅಂತ. ಸೆಕ್ಷನ್ ಥ್ರಿ ಫೋರ್, ಸೆಕ್ಷನ್ ಥ್ರಿ ಓಗೆ ಹೇಳ್ತದೆ, ಸಬ್-ಕ್ಲಾಸ್-4 ಹೀಗೆ ಹೇಳುತ್ತದೆ ಇತ್ಯಾದಿ ಅಂತ ಜವಾಬ್ದಾರಿ ಫಿಕ್ಸ್ ಮಾಡಿ ಅವನ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಏನೂ ಇಲ್ಲ, ಎನ್‌ಕ್ವಯರಿ ಮತ್ತೊಂದು, ನೀವು ಕೇಳ್ತೀರಿ, ಅವನು ಅಲ್ಲೇ ಕೂತುಕೊಳ್ತಾನೆ. ಇದೊಂದು ಪ್ರಯೋಗವಾಗಿ ಹೊಸ ಕಾನೂನು ಮಾಡೋಣ; ಮುಂದಿನ ಅಧಿವೇಶನದಲ್ಲಿ ಇದನ್ನು ತರುತ್ತಿದ್ದೇವೆ. ಅದರ ಬಗ್ಗೆ ಬರವಣಿಗೆ ಪ್ರಾರಂಭ ಮಾಡಿಸ್ತೇನೆ, ಅದರ ಬಗ್ಗೆ ಚರ್ಚೆ ಮಾಡಿ, ಒಳ್ಳೊಳ್ಳೆ ತಿದ್ದುಪಡಿಗಳನ್ನು ತಾವು ಕೊಟ್ಟರೆ ಅವನ್ನು ಸೇರಿಸಿಕೊಂಡು ಹೋಗಬೇಕೆಂದು ಈ ಮಾತು ಆಡಿದ್ದೇನೆ, ಆದರೆ ಒಂದು, ಜನ ಮಾತ್ರ ಇವತ್ತು ನಮ್ಮನ್ನು ಕ್ಷಮಿಸೋದಿಲ್ಲ ಎಂಬ ಮಾತು ನನಗೆ ಗೊತ್ತಿದೆ. ಈಗಿರುವ ವ್ಯವಸ್ಥೆ ಅದು ವ್ಯವಸ್ಥೆ; ಇದು ಒಳ್ಳೆಯದಲ್ಲ. ಈ ಕುವ್ಯವಸ್ಥೆಯಿಂದ ಒಳ್ಳೆಯ ವ್ಯವಸ್ಥೆಗೆ ತಂದು ನಿಲ್ಲಿಸಬೇಕೂಂತ ಇದ್ದರೆ ಆಮೂಲಾಗ್ರವಾದಂಥ ಒಂದು

ಚಿಂತನೆ, ಈ ವಿಚಾರದಲ್ಲಿ ಕಾರ್ಯಕ್ರಮಾಧಾರಿತ ಒಂದು ಚಿಂತನೆ ಈ ಬಗ್ಗೆ ಅತಿ ಅವಶ್ಯಕ ಎಂದು ಸ್ಪಷ್ಟವಾಗಿ ಹೇಳಬಲ್ಲೆ. ಹಾಗೇ ಮಾತು ಸರ್ಕಾರ ಇದನ್ನು ಬಿಡೋದಿಲ್ಲ, ಇದರ ಬಗ್ಗೆ ಕೈಹಾಕುತ್ತೇವೆ. ಬೇರೆ ಬೇರೆ ಕಾರ್ಯಕ್ರಮ ಆಗಬೇಕೆಂಬ ದೃಷ್ಟಿಯಿಂದ ಈ ವಿಷಯದಲ್ಲಿ ನಿಧಾನವಾಗಿ ಹೋಗಿದ್ದೇವೆಂದು ಹೇಳಿ, ಇನ್ನೂ ಕೂಡ ಸರಿಯಾಗಿಲ್ಲ ಎಂದು ಒಪ್ಪಿಕೊಂಡು ಈ ಪ್ರಯೋಗಕ್ಕೆ ಕೈಹಾಕುತ್ತೇವೆಂದು ಹೇಳ್ತಾ ಇದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಭಾಷಣ ಮಾಡಿದ್ದಾರೆ, ಈಗ ಇಲ್ಲ. ಒಂದು ಲಕ್ಷದ 2 ಸಾವಿರ ಕಡತಗಳು ಮುಖ್ಯಮಂತ್ರಿಗಳ ಕಛೇರಿಯಲ್ಲಿವೆ ಎಂದು ಅವರು ಹೇಳಿದ್ದಾರೆ. ಇದರಲ್ಲಿ ತಮ್ಮ ಗಮನಕ್ಕೆ ತರುವುದಾಗಿದ್ದರೆ, ಲಕ್ಷ ಎಂದರೆ ಅವರ ಸರ್ಕಾರದ ಕಾಲದ್ದನ್ನೂ ಸೇರಿಸಿಕೊಂಡು ಹೇಳಿದರೇನೋ ಅನುಮಾನ ಬಂತು. ಏಕೆಂದರೆ ಎಷ್ಟು ಏನು ಅಂದು ಅಂಕಿ ಅಂಶ ಕೊಡುತ್ತಿದ್ದೇನೆ. 1 ಲಕ್ಷ 20 ಸಾವಿರ ಕಡತಗಳು ಇತ್ಯರ್ಥಕ್ಕಾಗಿ ಮುಖ್ಯಮಂತ್ರಿಗಳ ಕಛೇರಿಯಲ್ಲಿ ಕಾದು ಕುಳಿತಿವೆ. ಇದರ ದುಷ್ಪರಿಣಾಮ ಏನೆಂಬ ಮಾತು ಆಡಿದ್ದಾರೆ. ಅಧ್ಯಕ್ಷರೇ ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ; ನನ್ನ ಹತ್ತಿರ ಕೆಲವು ಖಾತೆಗಳು ಜಾಸ್ತಿ ಇರುವುದು ನಿಜ. ಮಂತ್ರಿ ಮಂಡಲ ವಿಸ್ತರಣೆಯಾಗಬೇಕೆಂಬುದೂ ನಿಜ. ಇದನ್ನು ಮುಚ್ಚಿಟ್ಟು ಮಾತನಾಡತಕ್ಕಂಥ ಅವಶ್ಯಕತೆ ಇಲ್ಲ. ಕೆಲವು ಕಾರಣದಿಂದ ಆಗಿಲ್ಲ. ಮುಂದೆ ಮಾಡಿಕೊಳ್ತೇವೆ, ನಾವು. ಈಗೇನು ಕಡಿಮೆಯಿಲ್ಲ. 20 ಜನ ಇದ್ದೇವೆ ನನ್ನನ್ನೂ ಸೇರಿಸಿಕೊಂಡು, ನಾವೇನು ಕಡಿಮೆ ಇಲ್ಲ ಜವಾಬ್ದಾರಿ ಹೊರುವ ಶಕ್ತಿ ನಮ್ಮ ಹತ್ತಿರ ಸದಾ ಸಿದ್ಧವಾಗಿದೆ.

ಅದರ ಬಗ್ಗೆ ಅನುಮಾನ ಬೇಕಾಗಿಲ್ಲ. ಆದರೂ ಕೂಡಾ .....

ಶ್ರೀ ಆರ್.ಎಲ್. ಜಾಲಪ್ಪ : ನಿಮಗೆ ಬಹಳ ಶಕ್ತಿ ಇದೆ. ಇರುವವರನ್ನು ತೆಗೆದು ನೀವೊಬ್ಬರೇ ಇರುವುದು ಇನ್ನೂ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ : ನಾನು ಜಾಲಪ್ಪನವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅಷ್ಟೊಂದು ಶಕ್ತಿಯನ್ನು ಅವರು ನನ್ನಲ್ಲಿ ಕಂಡುಹಿಡಿದಿದ್ದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸಂಪೂರ್ಣವಾಗಿ ಶಕ್ತಿ ಉಪಯೋಗವಾಗಬೇಕಾದರೆ ಎಲ್ಲರನ್ನೂ ತೆಗೆದು ತಾವು ಒಬ್ಬರೇ ಇದ್ದರೆ ಸಂಪೂರ್ಣ ಉಪಯೋಗವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಬಂದಿದೆ ಅಷ್ಟೇ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಜಾಸ್ತಿ ಇದ್ದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ : ನನಗೆ ಬಂದಿರುವುದು 1.26 ಲಕ್ಷ ಕಡತಗಳು ಎಂದು ಅವರು ಹೇಳಿದ್ದಾರೆ, ಈಗಿನ ಮಂತ್ರಿಮಂಡಲದ ವಿಸ್ತರಣೆ ಇತ್ಯಾದಿಯನ್ನು ನಾವು ಮಾಡಿಕೊಳ್ಳುತ್ತೇವೆ, ಅದು ಚುನಾವಣೆಗೆ ಮುಂಚೆಯೋ ಅನಂತರವೋ ನಾವು ಮಾಡಿಕೊಳ್ಳುತ್ತೇವೆ, ಅದನ್ನು ನಮಗೆ ಬಿಡಿ. ಅದನ್ನು ನಮಗೇ ಬಿಟ್ಟರೆ ಬಹಳ ಸಂತೋಷ.

ಶ್ರೀ ಆರ್.ಎಲ್. ಜಾಲಪ್ಪ : ಅವರ ಸಂತೋಷಕ್ಕಾದರೂ ಹೇಳಿ. ಮೊದಲು ವಿಸ್ತರಣೆ ಮಾಡುತ್ತೀರೋ ಆಮೇಲೆ ಮಾಡುತ್ತೀರೋ ಎಂದು.

ಶ್ರೀ ಎಸ್. ಬಂಗಾರಪ್ಪ : ನೀವು ಇದ್ದೀರಲ್ಲಾ, ಅದಕ್ಕೆ ತಾಪತ್ರಯ ಬಂದಿರುವುದು ಇಲ್ಲಿ.

ಶ್ರೀ ಸಿ. ಬೈರೇಗೌಡ : ಹಾಗಾದರೆ ಜಾಲಪ್ಪನವರನ್ನು ಮಂತ್ರಿಯನ್ನಾಗಿ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಯಾರನ್ನು?

ಶ್ರೀ ಸಿ. ಭೈರೇಗೌಡ : ಜಾಲಪ್ಪನವರನ್ನು.

ಶ್ರೀ ಎಸ್. ಬಂಗಾರಪ್ಪ : ಅವರನ್ನು ಕೇಳಿ.

ಶ್ರೀ ಸಿ. ಭೈರೇಗೌಡ : ಹಾಗಾದರೆ ಏನೋ ನಡೆಯುತ್ತಿದೆ.

ಶ್ರೀ ಎಸ್. ಬಂಗಾರಪ್ಪ : ಅವವು ಹಿಂದೆಯೂ ಆಗಿದ್ದರು.

ಶ್ರೀ ಸಿ. ಭೈರೇಗೌಡ : ಈಗ ಮಾಡುತ್ತೀರಾ ಅಂಥ?

ಶ್ರೀ ಎಸ್. ಬಂಗಾರಪ್ಪ : ಅವರಿಗೆ ಅಪಾರ ಅನುಭವವಿದೆ.

ಶ್ರೀ ಸಿ. ಭೈರೇಗೌಡ : ಈಗ ಏನಾದರೂ ಮಾಡುವಂಥ ಸಂದರ್ಭ ಇದೆಯೇ ಅಂಥ?

ಶ್ರೀ ಎಸ್. ಬಂಗಾರಪ್ಪ : ಇದಕ್ಕೆ ಏನೋ ನಿಮಗೆ ಕಾರಣ ಸಿಕ್ಕಿರಬೇಕು ಎಂದು ನನ್ನ ಭಾವನೆ. ಮಾನ್ಯ ವಿರೋಧ ಪಕ್ಷದ ನಾಯಕರು 1,26 ಲಕ್ಷ ಕಡತಗಳು ನನ್ನಲ್ಲಿವೆ ಎಂದು ಹೇಳಿದ್ದಾರೆ, 1.26 ಲಕ್ಷ ಕಡತಗಳು ನನ್ನ ಆಫೀಸಿಗೆ ಬಂದಿಲ್ಲ. ಅದು ತಮ್ಮ ತಪ್ಪು ಗ್ರಹಿಕೆ, ಈ ಸುದ್ದಿ ಸರಿಯಿಲ್ಲ. ನನಗೆ ಬಂದಿರತಕ್ಕಂಥ ಒಟ್ಟು ಕಡತಗಳು ಇಲ್ಲಿಯವರೆಗೆ 2560, ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಏಕೆಂದರೆ ಕೆಲವು ಇಲಾಖೆಗಳಿಂದ ಹೆಚ್ಚು ಫೈಲ್ಗಳು ಬರತಕ್ಕಂಥದ್ದನ್ನು ನಾನು ಇಟ್ಟುಕೊಂಡಿಲ್ಲ. ಸುಮ್ಮನೆ ಹತ್ತು - ಹನ್ನೆರಡು ಇಲಾಖೆಗಳು ಎಂದು ತಮಗೆ ಕಾಣುತ್ತವೆ. ಇನ್ ಫರ್ಮೇಷನ್ ಅಥವಾ ಟೂರಿಸಂ ಇರಬಹುದು, ಹೆಚ್ಚು ಅದರಲ್ಲಿ ಫೈಲ್‌ಗಳು ಬರುವುದಿಲ್ಲ. ಕೆಲವು ಮಾತ್ರ ಬರುತ್ತವೆ. ನಾನು ಇಲ್ಲಿಯವರೆಗೆ ಎಷ್ಟು ಕಡತಗಳನ್ನು ವಿಲೇವಾರಿ ಮಾಡಿದ್ದೇನೆ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಅದನ್ನು ಹೇಳಿದರೆ ತಮ್ಮ ಸಂಶಯ ನಿವಾರಣೆಯಾಗುತ್ತದೆ ಎನ್ನತಕ್ಕಂಥ ನಂಬಿಕೆ ನನ್ನದು. 2100 ಚಿಲ್ಲರೆ ಫೈಲ್‌ಗಳನ್ನು ನಾನು ವಿಲೇವಾರಿ ಮಾಡಿದ್ದೇನೆ.

(An hon. member was speaking to an Hon.Minister near Chief minister)

MR. SPEAKER : At least when the Chief Minister is speaking why can't the Members have patience?

ಶ್ರೀ ಪಿ.ಜಿ.ಆರ್.ಸಿಂಧ್ಯ : ಹೊಸಬರು ಇದ್ದಾರೆ ಅವರು.

ಅಧ್ಯಕ್ಷರು : ಹೊಸಬರಾದರೆ ಏನು? ಹಳಬರಾದರೆ ಏನು? ಒಂದೂವರೆ ವರ್ಷ ಆಯಿತು.

Basic minimum courtesy that you extend to a speaker.

ಶ್ರೀ ಎಸ್. ಬಂಗಾರಪ್ಪ : ಏನು ಮಾಡುವುದು? ಅದು ನಿಮ್ಮ ಕಾಲದಲ್ಲಿಯೂ ಇದೆ, ನಮ್ಮ ಕಾಲದಲ್ಲಿಯೂ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ತರಹ ವಿಲೇವಾರಿ ಆದ ಕಡತದ ಲೆಕ್ಕವನ್ನು ಹೇಳುತ್ತಿದ್ದೀರೋ ಏನೋ ಅಂಥ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, 2500 ಚಿಲ್ಲರೆ ಫೈಲುಗಳಲ್ಲಿ 2100 ಚಿಲ್ಲರೆ ಫೈಲುಗಳನ್ನು ನಾನು ವಿಲೇವಾರಿ ಮಾಡಿದ್ದೇನೆ, ಕಳುಹಿಸಿಕೊಟ್ಟಿದ್ದೇನೆ. ಇನ್ನು ಉಳಿದಿರತಕ್ಕಂಥದ್ದು ಸುಮಾರು 300-400 ಚಿಲ್ಲರೆ ಇರಬಹುದು. ನಿನ್ನೆ ರಾತ್ರಿ ಏನಾದರೂ ಬಂದಿದ್ದರೆ ಅದನ್ನು ನಾವು ಸೇರಿಸಿಕೊಳ್ಳಬೇಕಾಗುತ್ತದೆ. ಅದು ನನಗೆ ಗೊತ್ತಿಲ್ಲ. ಇಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ,

ಅನಂತರ ಇಲ್ಲಿ ಪಂಡಿತ್ ಜವಾಹರಲಾಲ್ ನೆಹರೂರವರ ಅನಾವರಣದ ಬಗ್ಗೆ ತಾವು ಮಾತನಾಡಿದ್ದೀರಿ, ಅದು ಪ್ರಶ್ನೆಯಾಗಿ ಕೂಡಾ ಈ ಸದನದಲ್ಲಿ ಪ್ರಶ್ನೆ ಬಂದಾಗ ಉತ್ತರವನ್ನು ಕೂಡಾ ನಾನು ಲಿಖಿತವಾಗಿ ಸದನದಲ್ಲಿ ಈಗಾಗಲೇ ಕೊಟ್ಟಿದ್ದೇನೆ. ಇತ್ತೀಚೆಗೆ ಪಂಡಿತ್ ಜವಾಹರಲಾಲ್ ನೆಹರೂರವಥ ಪ್ರತಿಮೆ ಆಗಿನ ಕಾಲದಿಂದಲೂ ಅದು ಹಾಗೆಯೇ ಇತ್ತು. ಅದನ್ನು ಮಾಡಬೇಕು, ಯಾರನ್ನು ಕರೆಸಬೇಕು ಎನ್ನತಕ್ಕಂಥ ವಿಚಾರ ಕೂಡಾ ಬಂದಾಗ ರಾಜೀವ್ ಗಾಂಧಿಯವರು ಕೂಡಾ ಈ ರಾಷ್ಟ್ರದ ಮಾಜಿ ಪ್ರಧಾನಿಯಾಗಿದ್ದವರು. ಅವರನ್ನು ಕೂಡಾ ಕರೆಸಿದರೆ ತಪ್ಪಲ್ಲ ಎನ್ನತಕ್ಕಂಥದ್ದನ್ನು ತಾವು ಒಪ್ಪುತ್ತೀರಿ ಎಂಬ ಭಾವನೆಯಿಂದ ಈ ಮಾತನ್ನು ನಾನು ಆಡಿದ್ದೇನೆ. ಇದಕ್ಕೆ ಬೇರೆಯವರನ್ನು ಕರೆಸಬಾರದು ಎನ್ನತಕ್ಕಂಥ ಅಭಿಪ್ರಾಯವಲ್ಲ. ಇಲ್ಲಿ ಕರೆಸಿದ್ದು ಕೂಡಾ ತಪ್ಪಾಗಲಾರದು ಎನ್ನತಕ್ಕಂಥ ದೃಷ್ಟಿಯಿಂದ ಕರೆಸಿ ಅದನ್ನು ಉದ್ಘಾಟನೆ ಮಾಡಿದ್ದೇವೆ. ಆದುದರಿಂದ ಇದು ಪಕ್ಷದ ಪ್ರಶ್ನೆಯಲ್ಲ. ಅವರೂ ಕೂಡಾ ರಾಷ್ಟ್ರದ ಅಧಿಕಾರದ ಚುಕ್ಕಾಣಿಯನ್ನು ಹಿಡಿದು ನಡೆಸಿದ್ದರಿಂದ ಅವರನ್ನು ಕರೆಸಿದರೆ ತಪ್ಪಲ್ಲ. ಇದಕ್ಕೆ ಹಿಂದೆಯೂ ಕೂಡ ಬೇಕಾದ,ಟು ತಾವು ಸರ್ಕಾರವನ್ನು ನಡೆಸತಕ್ಕಂಥ ಕಾಲದಲ್ಲಿ ಕೇಂದ್ರದಲ್ಲಿ ಇರಬಹುದು, ಆಗ ಕೂಡಾ ಮಾಜಿಯವರನ್ನು ಕರೆಸಿ ಈ ರೀತಿಯಲ್ಲಿ ಕೂಡಾ ಉದ್ಘಾಟನೆ ಮಾಡತಕ್ಕಂಥದ್ದು ಇಂಥದ್ದನ್ನೆಲ್ಲಾ ಉದಾಹರಣೆಗಳು ಇದೆ. ನಾನು ವಿವರಗಳಿಗೆ ಹೋಗದೆ ಈ ವಿಷಯವನ್ನು ಇಲ್ಲಿಗೇ ಮುಗಿಸುತ್ತೇನೆ. ಇದೇ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೊಂದು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೆ.ಎ.ಟಿ. ಬಗ್ಗೆ ತಾವು ಹೇಳಿದ್ದೀರಿ. I hope you have said something about the reconstitution of the K.A.T.

ಅದರ ವಿಚಾರದಲ್ಲಿ ನಾನು ಸ್ಪಷ್ಟಪಡಿಸುತ್ತೇನೆ. ಇವತ್ತು ಅವರು ಏನು ರಿಟೈರ್ ಆದರೋ ಅಲ್ಲಿ ಒಬ್ಬರೇ ಇದ್ದರೆ ಕೋರ್ಟ್ ನಡೆಯುತ್ತಿಲ್ಲ.

ನಾನು ಒಪ್ಪುತ್ತೇನೆ. ಈಗ ಆ ಕೋರ್ಟ್ ನಡೆಯುತ್ತಿಲ್ಲ. ಕೋರ್ಟನ್ನು ನಡೆಸಬೇಕು, ಮುಂದುವರಿಯಬೇಕು ಎನ್ನತಕ್ಕಂಥ ಆಸಕ್ತಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಅಲ್ಲಿಯ ನ್ಯಾಯಾಧೀಶರು ನಿವೃತ್ತಿ ಹೊಂದುವುದಕ್ಕೆ ಮೊದಲೇ ಹೆಸರುಗಳನ್ನು ನಾವು ಶಿಫಾರಸ್ಸು ಮಾಡಿ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಸುಮಾರು ಒಂದು ವಾರ ಹತ್ತು ದಿವಸ ಮುಂಚಿತವಾಗಿಯೇ ಕಳುಹಿಸಿದ್ದೇವೆ. ತಾರೀಖು ಬೇಕಾದರೆ ನಾನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಅದರಲ್ಲಿ ಮುಚ್ಚುಮರೆಯ ಪ್ರಶ್ನೆ ಇಲ್ಲ. ತಮಗೆ ಗೊತ್ತಿರುವ ಹಾಗೆ ಕೇಂದ್ರದಲ್ಲಿ ರಾಜಕೀಯದ ಬೆಳವಣಿಗೆ ಹೆಚ್ಚಾಗಿ ಒಂದು ಫೈಲು ಕೂಡ ಮುಟ್ಟುವುದಕ್ಕೆ ಅವರಿಗೆ ಸಾಧ್ಯವಾಗಿಲ್ಲ.

ಕರ್ನಾಟಕ ಭವನದಲ್ಲಿರುವ ಮಾನ್ಯ ಇಸ್ಸಾರ್‌ರವರಿಗೆ ಎಷ್ಟೋ ಸಾರಿ ಪೋಸ್ಟ್ ಮೆಸೇಜ್ ಕಳುಹಿಸಿದ್ದೇವೆ. ಟೆಲಾಕ್ಸ್ ಮೆಸೇಜ್ ಕೂಡ ಕಳುಹಿಸಿದ್ದೇವೆ. ಖಾಸಗಿಯಾಗಿ ಜೀಫ್ ಸೆಕ್ರೆಟರಿಗೆ ಅವರನ್ನು ಕಳುಹಿಸಿಕೊಟ್ಟಿದ್ದೇನೆ. ಅಲ್ಲಿ ಇದಕ್ಕಾಗಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಆಮೇಲೆ ಚೀಫ್ ಜಸ್ಟಿಸ್ ಆಫ್ ದಿ ಸುಪ್ರೀಂ ಕೋರ್ಟ್, ಅವರ ಹತ್ತಿರ ಇದು ಹೋಗಬೇಕು. ಇಷ್ಟು ಆದಮೇಲೆ ಪುನಃ ಉಪಪ್ರಧಾನ ಮಂತ್ರಿಗೆ ಬಂದು ಅಲ್ಲಿಂದ ಪ್ರಧಾನಮಂತ್ರಿಗೆ ಬಂದು ಆಮೇಲೆ ಅದು ರಾಷ್ಟ್ರಾಧ್ಯಕ್ಷರಿಗೆ ಹೋಗಬೇಕು. It is a very labourious process. ಅದು ಕೆ.ಎ.ಟಿ. ಯಲ್ಲಿರತಕ್ಕದ್ದು. ಇವತ್ತು ಏನಾಗಿದೆ ಅಂದರೆ ಎಲ್ಲವೂ ಮುಗಿದಿದೆ. ಈಗ ಯಾವ ಹಂತದಲ್ಲಿ ಇದೆ ಎಂದು ಅದನ್ನು ಹೇಳಿಬಿಡುತ್ತೇನೆ. ಈಗಾಗಲೇ ಇದು ಚೀಫ್ ಜಸ್ಟಿಸ್ ಆಫ್ ಸುಪ್ರೀಂ ಕೋರ್ಟ್ ಅವರ ಒಪ್ಪಿಗೆ ಪಡೆದು ಬಂದಿದೆ. ಡೆಪ್ಯೂಟಿ ಪ್ರಧಾನ ಮಂತ್ರಿಗಳ ಕಛೇರಿಯಲ್ಲಿ ಕೂತಿದೆ. ಈಗ ನಾವು ಏನು ಮಾಡಬೇಕು? ನಾವ ನಮ್ಮ ಆಫೀಸರ್ಗಳನ್ನು ಕಳುಹಿಸಿದ್ದೇವೆ. ಅವರು ಅಲೆದು ಅಲೆದು ಪ್ರಯತ್ನಪಟ್ಟರೂ

ಯಾರು ಈ ಕಡೆ ಗಮನ ಕೊಡುತ್ತಿಲ್ಲ. ಏಕೆಂದರೆ ಅಲ್ಲಿನ ಪರಿಸ್ಥಿತಿ ತಮಗೆ ಗೊತ್ತಿದೆ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಬೈರೇಗೌಡರನ್ನು ಕಳುಹಿಸಿಕೊಡಿ.

ಶ್ರೀ ಎಸ್. ಬಂಗಾರಪ್ಪ : ಏನು ಮಾಡಬೇಕೆಂದು ನಮಗೆ ಗೊತ್ತಾಗುವುದಿಲ್ಲ. ಹೋಗಿ ಹೋಗಿ ಸಾಕಾಗಿದ್ದರೂ ಕೂಡ ನಾವು ಇನ್ನೂ ಕೈ ಬಿಟ್ಟಿಲ್ಲ. ಆದರೂ ಕೂಡ ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ಪುನಃ ನಾವು ನಮ್ಮ ಆಫೀಸರ್ ಗಳಿಗೆ ತಿಳಿಸಿದ್ದೇನೆ. ಹೋಗಿ ಅವರ ಬೆನ್ನು ಹತ್ತಿ ಏನಾದರೂ ಮಾಡಿ ತೆಗೆದುಕೊಂಡು ಬನ್ನಿ ಎಂದು , ಈಗ ಇದು ಮಾನ್ಯ ದೇವಿಲಾಲ್ ಅವರ ಆಫೀಸಿನಲ್ಲಿ ಇದೆ. ಮುಂದೆ ಏನು ಮಾಡಬೇಕೆಂದು ನಮಗೂ ಕೂಡ ಅರ್ಥವಾಗುತ್ತಿಲ್ಲ. ವಿವರಣೆಗೆ ನಾನು ಹೋಗುವುದಿಲ್ಲ. ಏಕೆಂದರೆ ಶ್ರೀ ದೇವಿಲಾಲ್ ರವರು ಈಗಲೂ ಕೂಡ ಕೇರ್ ಟೇಕರ್ ಗೌರ್ನ್ಮೆಂಟ್ ನಲ್ಲಿ ಅದನ್ನು ಮಾಡಿಸಿಕೊಂಡು ಬನ್ನಿ ಎನ್ನತಕ್ಕ ಒತ್ತಡವನ್ನು ತಂದಿದ್ದೇವೆ. ನಾವು ಮಾಡಬಾರದೆಂದು ಸರ್ಕಾರದ ಉದ್ದೇಶ ಅಲ್ಲ, ಮಾಡಬೇಕು ಎಂಬುದು ನಮ್ಮ ಉದ್ದೇಶ. ರಾಜಕೀಯ ಬೆಳವಣಿಗೆಯಿಂದ ಅದು ಬರುವುದಕ್ಕೆ ನಿಧಾನವಾಗಿದೆಯೇ ವಿನಃ ನಾವು ಇದಕ್ಕೆ ಕಾರಣವಲ್ಲ. ನಾವು ನಮ್ಮ ಕರ್ತವ್ಯವನ್ನು ಮಾಡಿದ್ದೇವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನೊಂದು ವಿಚಾರ ಲೋಕಯುಕ್ತದ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. I think you have said something again on Lokayuktha matter. ಈ ವಿಚಾರದಲ್ಲಿ ನಾನು ಒಂದೇ ಒಂದು ತಮ್ಮ ಗಮನಕ್ಕೆ ತರುವುದಾಗಿದ್ದರೆ ತಾವು ಜಡ್ಜ್ಮೆಂಟ್ ಅನ್ನು ಕೂಡ ಪ್ರಸ್ತಾಪ ಮಾಡಿದ್ದೀರಿ, ನಾನು ಆವತ್ತೇ ಹೇಳಿದೆ, ಈ ಬಗ್ಗೆ ಹೆಚ್ಚಿನ ಚರ್ಚೆ ಮಾಡುವುದು ಬೇಡ ಎಂದು. ನಾನು ಹೆಚ್ಚು ಹೆಚ್ಚು ಚರ್ಚೆ ಮಾಡಿದರೆ ಅದು ಪತ್ರಿಕೆಯಲ್ಲಿ ಮತ್ತು ಸುದ್ದಿ ಸಂಸ್ಥೆಗಳ ಮುಖಾಂತರ ಬಂದರೆ ಅದರ ಮೇಲಿನ ನಂಬಿಕೆ ನಾಳೆ ಬಹಳ ಕಡಿಮೆಯಾಗುತ್ತದೆಂಬ ಮಾತಿಗೆ ತಾವು ಕೂಡ ಓಗೊಟ್ಟು ಅದನ್ನು ಒಪ್ಪಿಕೊಂಡಿರಿ. ಅದಕ್ಕೆ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಆದರೆ ಹೆಚ್ಚಿನ ಚರ್ಚೆಗೆ ನಾನೂ ಕೂಡ ಹೋಗದೆ ನಾನು ಈಗಾಗಲೇ ಹೇಳಿರತಕ್ಕ ಮಾತುಗಳು ಪತ್ರಿಕೆಯಲ್ಲಿ ಬಂದಿರುವುದರಿಂದ ಚಿಕ್ಕದಾಗಿ ಉತ್ತರವನ್ನು ಕೊಟ್ಟು ಮುಗಿಸುತ್ತೇನೆ.

Entertaning oral application in Calcutta High Court jurisdiction, it is allowed........ ಈ ವಿಚಾರದಲ್ಲಿ ಸುಪ್ರೀಂಕೋರ್ಟಿನ ನ್ಯಾಯಧೀಶರಾದ ಶ್ರೀಮಾನ್ ಚಿನ್ನಪ್ಪರೆಡ್ಡಿಯವರು ಎಂದು ಕಾಣುತ್ತದೆ. He has said something .... ಅನ್ನತಕ್ಕದ್ದು ನಾನು ಆ ದಿವಸ ಹೇಳಿದೆ. ಇವತ್ತೂ ಕೂಡ ನನ್ನ ಹತ್ತಿರ ಇದೆ, ಈಗಲೂ ಕೂಡ ಇದೆ. 1984 Supreme Court page 61 ನಾನು ಇದರ ವಿವರಕ್ಕೆ ಹೋಗದೆ ನಾನು ಒಂದೇ ಒಂದು ಮಾತನ್ನು ಹೇಳಬಲ್ಲೆ. ಒಂದೊಂದು ಹೈಕೋರ್ಟಿನಲ್ಲಿ ಏನು ಮಾಡಿದ್ದಾರೆ ಅಂದರೆ ಕೆಲವು ರೂಲ್ಸ್ ಅನ್ನು ಮಾಡಿಕೊಂಡು ಕೆಲವು ಹೈಕೋರ್ಟಿನಲ್ಲಿ ಇಟ್ಟುಕೊಂಡಿದ್ದಾರೆ. ಓರಲ್ ಅಪ್ಲಿಕೇಷನ್ ಮೇಲೆ Judge can act either in single bench or division bench ಅನ್ನತಕ್ಕದ್ದು ಈವನ್ ಮನೆಯಲ್ಲಿ ಇದ್ದರೂ ಕೂಡ ಆಕ್ಟ್ ಮಾಡಬಹುದು ಎಂದು ಅವರು ಮಾಡಿ ಇಟ್ಟುಕೊಂಡಿದ್ದಾರೆ. ಅದರ ಪ್ರಕಾರ ಇವರು ಆಕ್ಟ್ ಮಾಡಿರತಕ್ಕ ವಿಚಾರ ಹಿಡಿಸುವುದಿಲ್ಲ ಅಂತ ಅಂದರೂ ಕೂಡ but entering oral application in Calcutta High Court jurisdiaction, it is allowed, ಎನ್ನತಕ್ಕ ಮಾತನ್ನು ಅವರೇ ಹೇಳಿಕೊಂಡಿದ್ದಾರೆ. ಅದನ್ನು ಓದಿದರೂ ಕೂಡ ಗೊತ್ತಾಗುತ್ತದೆ. ಆದ್ದರಿಂದ ಅವರು ತಪ್ಪು ಗ್ರಹಿಸಿ ಮಾಡತಕ್ಕ ವಿಚಾರ ಅಲ್ಲ, ಅವರ ಇಂಟೆಗ್ರಿಟಿ ಪ್ರಾಮಾಣಿಕತೆಯನ್ನು ನಾವು ಪ್ರಶ್ನೆ ಮಾಡತಕ್ಕ ಅವಶ್ಯಕತೆಗೆ ಇದು ಸಂಬಂಧ

ಬರಲಾರದು. ಈ ಮಾತನ್ನು ತಾವು ಒಪ್ಪುತ್ತೀರಿ, ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಅಷ್ಟಕ್ಕೆ ಸೀಮಿತವಾಗಿ ಹೇಳಿಲ್ಲ. ಮುಂದಕ್ಕೆ ಹೋಗಿ ಹೇಳಿದೆ, ಓರಲ್ ಅಪ್ಲಿಕೇಷನ್ 3 ದಿವಸ ಆದರೂ ಕೂಡ ರಿಟರ್ನ್ ಆಗಿ ಯಾರು ವಕೀಲರು ಓರಲ್ ಅಪ್ಲಿಕೇಷನ್ ಹಾಕಿ ಓರಲ್ ಆಗಿ ಹೇಳಿದ್ದರು, ಅವರು ಅಪ್ಲಿಕೇಷನ್ ಕೊಡಲಿಲ್ಲ. ಡಿಸ್ ಪೋಸ್ ಆಫ್ ಆಗಲಿಲ್ಲ. When the matter went up to Supreme Court, nobody knews who was the applicant. ಆ ವಿಚಾರಕ್ಕೆ ನಾನು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ : ಹಾಗೇನಿಲ್ಲ. ಜಡ್ಜ್‌ಮೆಂಟ್ ಓದಿದರೂ ಕೂಡ ಗೊತ್ತಾಗುತ್ತದೆ. ಅದು ನನ್ನ ಪ್ರಕಾರ ಸರಿಯಾಗಿದೆ. ಇದೇ ಸಂದರ್ಭದಲ್ಲಿ ತಾವು ಅಡ್ವೋಕೇಟ್ ಜನರಲ್ ಬಗ್ಗೆ ಎರಡು ವಿಚಾರ ಪ್ರಸ್ತಾಪ ಮಾಡಿದ್ದೀರಿ. ಕಾವೇರಿ ಟ್ರೈಬ್ಯೂನಲ್ ಸದಸ್ಯರು ಕೆಲವು ದಿನಗಳ ಹಿಂದೆ ನಮ್ಮ ರಾಜ್ಯಕ್ಕೆ ಭೇಟಿ ನೀಡಿದಾಗ, ನಿಜ ಹೇಳಬೇಕೆಂದರೆ, We requested, since he is one of the Advocates in the capacity of Advocate General in the Court also, ಈ ವಿಚಾರವನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರ ನೇತೃತ್ವದಲ್ಲಿ ಕೂಡಾ ಅವರುಗಳು ಕಾವೇರಿ ಬೇಸ್‌ನಲ್ಲಿ ಇರುವಂಥ ಪ್ರಾಜೆಕಟ್ಟ್‌ಗೆ ಹೋಗಿದ್ದಾಗ ಇನ್ ಫ್ಯಾಕ್ಟ್ ಅವರ ಸರ್ವಿಸಸ್ ಬಹಳ ಒಳ್ಳೆಯ ರೀತಿಯಲ್ಲಿ ಸರ್ಕಾರಕ್ಕೆ ಉಪಯೋಗವಾಗಿದೆ ಎಂದು ಎಲ್ಲರಿಗೂ ಕೂಡ ಗೊತ್ತಿದೆ. I was also present in Mysore.

ನಾವು ಮಾನ್ಯ ವೀರಪ್ಪ ಮೊಯಿಲಿಯವರು, ಮಾನ್ಯ ಸಚಿವರುಗಳು, ನಮ್ಮ ಅಡ್ವೋಕೇಟ್ ಜನರಲ್‌ರವರು ಮತ್ತು ನಮ್ಮ ಅಡ್ವೋಕೇಟ್ ಜವಳಿಯವರು ಇದ್ದಂಥ ಸಂದರ್ಭದಲ್ಲಿ ನಮ್ಮ ಅಡ್ವೋಕೇಟ್ ಜನರಲ್‌ರವರು ರಾಜ್ಯಕ್ಕೆ ಸಹಾಯವಾಗುವಂತೆ ಚರ್ಚೆಯಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ಅವರು ತಮ್ಮ ಕರ್ತವ್ಯವನ್ನು ಒಳ್ಳೆಯ ರೀತಿಯಿಂದ ನಿಸ್ಪೃಹತೆಯಿಂದ ನೆರವೇರಿಸಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇದಕ್ಕಾಗಿ ನಾವು ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಅವರು ಹಿಡಿದ ಕೆಲಸವನ್ನು ಬಿಡದೆ ಬಹಳ ನಿಷ್ಠೆಯಿಂದ ಮಾಡುವ ಸ್ವಬಾವವುಳ್ಳವರಾಗಿದ್ದಾರೆ, ರಾಜ್ಯದ ಹಿತವನ್ನು ಕಾಪಾಡುವಂಥ ಈ ಕೆಲಸದಲ್ಲಿ ಅವರ ಕೊಡುಗೆ ಅಭಿನಂದನೀಯವಾದುದು. ಇವರ ಜೊತೆಯಲ್ಲಿ ಸುಪ್ರೀಮ್ ಕೋರ್ಟ್ ಹಾಗೂ ಟ್ರಿಬ್ಯೂನಲ್‌ನಲ್ಲಿ ನಮ್ಮ ರಾಜ್ಯವನ್ನು ಪ್ರತಿನಿಧಿಸುತ್ತಿರುವಂಥ ಹಿರಿಯ ನ್ಯಾಯವಾದಿಗಳಾದ ಡಾ. ಚಿಟಾಳೆ, ಇವರಿಗೂ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. A battalion of Advocates

ಇವರೆಲ್ಲಾ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡಿದ್ದಾರೆ. ತಮ್ಮ ಇನ್ನೊಂದು ವಿಚಾರ ಅಂದರೆ ಇವರ ಮೇಲೆ ಕೋರ್ಟ್‌ನವರು ಕೆಲವು ರಿಮಾರ್ಕ್ಸ್ ಬರೆದಿದ್ದಾರೆ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದೀರಿ. ಶ್ರೀಮಾನ್ ಬೋಪಣ್ಣನವರು ಜಡ್ಜ್ ಆಗಿದ್ದಂಥ ಕಾಲದಲ್ಲಿ who is now retired, ಈ ರೀತಿ ಬರೆದಿದ್ದಾರೆ ಎನ್ನುವ ಮಾತನ್ನು ಹೇಳಿದ್ದೀರಿ. ಈ ಬಗ್ಗೆ ಅವತ್ತೇ ಹೇಳಿದಂಥ ಒಂದು ಮಾತನ್ನು ಹೇಳುತ್ತೇನೆ. ಏನೆಂದರೆ ಚಂದ್ರೇಗೌಡರೇ, ಅದು ರಿವರ್ಸ್ ಆಗಿದೆ, ಡಿವಿಜನ್ ಬೆಂಚ್‌ನಿಂದ ಹೊರಟು ಹೋಗಿದೆ ಎಂದು, ಆಗ ನನ್ನ ಹತ್ತಿರ ಅದು ಇಲ್ಲ, ತಾವು ಹೇಳಿದರೆ ನಾನು ಅದನ್ನು ಒಪ್ಪುತ್ತೇನೆಂದೂ ಸೌಜನ್ಯದಿಂದ ಹೇಳಿದ್ದಿರಿ. ಅದರ ಕಾಪಿ ನನ್ನ ಬಳಿ ಇದೆ, ನಿಮಗೆ ಬೇಕಾದರೆ ಕಳುಹಿಸಿಕೊಡುತ್ತೇನೆ. Hon. Jagannath Shetty, I think the Chief Justice, who is now the Judge of Supreme Court and Justice N.D. venkatesh, who was the Chairman of the K.A.T. and now

retired – ಇವರುಗಳು ಇದ್ದಂಥ ಕಾಲದಲ್ಲಿ 5ನೇ ಆಗಸ್ಟ್ 86 ರಲ್ಲಿ ಅದರಲ್ಲಿ ಹೇಳಿದ್ದಾರೆ. "In our system of administration of Justice, no client can choose a judge of his choice"

ಅದು ಏಕೆಂದರೆ, ಎಲ್ಲರ ಮೇಲೂ ಬರೆದು ಬಿಟ್ಟಿದ್ದರು. ಅದಕ್ಕಾಗಿ ಇದರ ಬಗ್ಗೆ ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲವೆಂದು ನಾನು ಆಗಲೇ ಹೇಳಿದ್ದೇನೆ. As Chief Minister, i am part and parcel of the government or as hon.member of this august House, I should not say anything against any of the sitting or even retired Judges. ಅವರ ಬಗ್ಗೆ ಹೇಳುವುದು ನನಗೆ ಬೇಕಾಗಿಲ್ಲ. ಆದರೆ ಜಡ್ಜ್ ಆದಂಥವರು ತಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳಬೇಕು. ಒಂದು ಕೇಸ್ 'X' ಗೆ ಸಂಬಂಧಪಟ್ಟಂತೆ ಇದ್ದರೆ, 'Y' ವಿಚಾರದಲ್ಲಿ ತೆಗೆದುಕೊಂಡು ಹೋಗಿ ತೂರಿಸಬಹುದೇ extraneous to the matter on hand, that is the ground on which entire judgement is reversed.

ಆ ವಿಚಾರದಲ್ಲಿ ಮೆರಿಟ್ಸ್ ಮೇಲೆ ತಾವೂ ಸಹ ಹೇಳುವುದಿಲ್ಲವೆಂದು ಹೇಳಿದಿರಿ. ನಾನು ಅದರ ಬಗ್ಗೆ ಹೋಗುವುದಿಲ್ಲ. This is how extraneous things were brought into the matter on hand by the same Judge Mr.Bopanna.

ಇವತ್ತು ಅವರು ಏನು ಮಾಡಿದರು? ನನ್ನ ಮೇಲೆ ಸಹ ಬರೆದರು, ಪಾರ್ಟಿಸ್ ಮೇಲೆ ಬರೆದರು, ಅಡ್ವೋಕೇಟ್ ಮೇಲೆ ಬರೆದರು ದೇವರೇ ಗತಿ, ಏನೂ ಮಾಡುವುದಕ್ಕಾಗುವುದಿಲ್ಲ, ಅದು ತಪ್ಪಾಗಿದೆಯೆಂದು ಗೊತ್ತಿದ್ದರೂ ಕೂಡ ನಾನು ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಬೇರೆ ಜಾಗದಲ್ಲಿ ಕುಳಿತುಕೊಂಡೆ. I wanted to honour the judgement of the Court and I did it.

ರಾಜೀನಾಮೆ ಕೊಟ್ಟು ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ. ಬೇರೆಯವರೂ ಇದೇ ಮಾಡಲಿ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ನಾನು ಇದರಲ್ಲಿ ರಾಜಕೀಯ ಮಿಕ್ಸ್ ಮಾಡುವುದಕ್ಕೆ ತಯಾರಿಲ್ಲ. All these matters were subject matter of lengthy discussion on the very same august House.

ನಿಮ್ಮ ಗಮನವನ್ನು ಇದರ ಬಗ್ಗೆ ಸೆಳೆದು ದಿಕ್ಕನ್ನು ಬದಲಾವಣೆ ಮಾಡಲು ನಾನು ತಯಾರಿಲ್ಲ. ಆದ್ದರಿಂದ ಅಡ್ವೋಕೇಟ್ ಜನರಲ್‌ರವರ ಬಗ್ಗೆ ಏನು ಬರೆದಿದ್ದಾರೆ ಎಂದರೆ, "he is a man known for his honesty, integrity and hard work". I know that actually and he was my personal advocate also.

ನಮ್ಮ ಕರ್ನಾಟಕ ರಾಜ್ಯದ ಕೇಸ್‌ಗಳನ್ನು ನಡೆಸುವವರ ಪೈಕಿ ಇರುವಂತಹ ನಿಸ್ಪೃಹ ವ್ಯಕ್ತಿಗಳ ಪೈಕಿ ಇವರೂ ಸಹ ಒಬ್ಬರಾಗಿದ್ದಾರೆ. ನಾನು ಇವರನ್ನು ಸುಮ್ಮನೆ ಹೊಗಳುತ್ತಿಲ್ಲ. ತಾವು ಬೇಕಾದರೆ ಪರೀಕ್ಷೆ ಮಾಡಬಹುದು ಇವರು ಅದಕ್ಕೆ ಅರ್ಹರು. ಇವರಲ್ಲಿ ಶಾರ್ಟ್‌ಫಾಲ್ಸ್ ಅಥವಾ ಶಾರ್ಟ್ ಕಮಿಂಗ್ಸ್ ಏನಾದರೂ ಇದ್ದರೆ, ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಅವರಿಗೆ ಹೇಳೋಣ.

ಆದರೆ ಆ ಮನುಷ್ಯ ಆ ಕೇಸ್ ತೆಗೆದುಕೊಂಡು ಬಿಟ್ಟರೆ ಮಾತ್ರ ಯಾವ ಜಡ್ಜಿಗೂ ಕಾಂಪ್ರಮೈಸ್ ಮಾಡತಕ್ಕಂಥ ವಿಚಾರ ಅಲ್ಲ. ತಮ್ಮ ಕ್ಲೈಂಟ್ಸ್ ಅಂದರೆ, ಕರ್ನಾಟಕ ರಾಜ್ಯವೇ ಕ್ಲೈಂಟ್ಸ್ ಆಗುತ್ತದೆ. ಅವರ ಬಗ್ಗೆ ಏನು ಹೇಳಿದ್ದಾರೆಂದರೆ, Page 5 " In our system of administration of justice, no client can choose a judge of his choice. But the case on hand is not of that nature. The explanation given by the Counsel is fair enough ..... in our opinion was not intended".

ಏಕೆಂದರೆ, ನಾಳೆ ಕೋರ್ಟಿನಲ್ಲಿ ಇದ್ದರೆ ಅವೊತ್ತು ಬೋಪಣ್ಣ ಅವರ ಕೋರ್ಟಿನಲ್ಲಿ ಆರ್ಗ್ಯೂಮೆಂಟ್ ಮಾಡಬೇಕಾದರೆ ಕಾಗದಗಳನ್ನೆಲ್ಲಾ ಹರಿದು ಕೋರ್ಟ್‌ನಲ್ಲಿ ಆರ್ಗ್ಯುಮೆಂಟ್ ಬಿಸಾಕಿ ಬಿಟ್ಟರು. ಏನೂ ಮಾಡಲಿಕ್ಕಾಗದು. ಈ ದೇಶದ ಹಣೆ ಬರಹ, ಬರೆದ ಮೇಲೆ ತಲೆ ಬಗ್ಗಿಸಿಕೊಂಡು ಹೋಗತಕ್ಕಂಥ ಸಂದರ್ಭ ಇದೆ. ಇದು ಏನೇ ಆಗಲಿ ನಾವಾಗಲೀ, ನೀವಾಗಲಿ ಅವರ ತೀರ್ಮಾನ ತೆಗೆದುಕೊಂಡು ಹೋಗಬೇಕು. "... and indeed this cannot be calculated to bring the Learned judge or the Court into disrepute. We therefore see no reason to proceed further against Respondent 1". Respondent 1 is the same person Advocate general Mr.C.Shivappa. ಇಷ್ಟು ವಿಷಯವನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಇದನ್ನು ತಪ್ಪು ಎಂದು ತಿಳಿದುಕೊಳ್ಳುವುದಕ್ಕೆ ಇಲ್ಲಿ ಏನೂ ಕಾರಣ ಇಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ತಮಗೆ ಗೊತ್ತಿರುವ ಹಾಗೆ ನಾವು ಮಾಜಿ ಟೆನೆಂಟ್ಸ್ಗೆ ರಿಯಾಯತಿ ಕೊಡುವ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಅನಂತರ, ಬಡವರಿಗೆ ಸೈಟು ಮತ್ತು ಮನೆ ಕೊಡತಕ್ಕಂಥ ಒಂದೇ ಒಂದು ಮಾತನ್ನು ನಾನು ನೋವಿನಿಂದ ಹೇಳುತ್ತಿದ್ದೇನೆ. ಸರ್ಕಾರಿ ಜಮೀನನ್ನು ಯಾರಾದರೂ ಬಗರ್ ಹುಕುಂ ಸಾಗುವಳಿ ನಡೆಸಿ ಅತಿಕ್ರಮಣ ಮಾಡಿದ್ದರೆ, ಅದರಲ್ಲೂ ಎಸ್ ಸಿ:ಎಸ್ ಟಿ ಗಳಾಗಿದ್ದರೆ, ಅವರಿಗೆ ಅದನ್ನು ಖಾಯಂ ಆಗಿ ಕೊಡಬೇಕೆಂದು ನಾವು ತಿದ್ದುಪಡಿ ಮಾಡಿದ್ದೇವೆ. ತಾವು ಅದಕ್ಕೆ ಬೆಂಬಲ ಕೊಟ್ಟಿದ್ದೀರಿ. ನಾವು ಪಾಸ್ ಮಾಡಿದ್ದೇವೆ. ತಮ್ಮ ಕಾಲದಲ್ಲಿ ತಾವು ಸಹ ಈ ಬಗ್ಗೆ ಪ್ರಯತ್ನ ಮಾಡಿದ್ದೀರಿ, ನಾನು ಅಲ್ಲಗಳೆಯುವುದಿಲ್ಲ. ಇವೊತ್ತು ಏನಾಗಿದೆಯೆಂದರೆ, ಊರ ಪಕ್ಕದಲ್ಲಿರುವ ಜಾಗವು ಕೂಡಾ ಹೋರಟು ಹೋಗುತ್ತಿದೆ. ನಾವು ಬಡವರಿಗೆ ಇವೊತ್ತು ಒಂದು ಸೈಟು ಕೊಡುವುದಕ್ಕೆ ಆಗ್ತಾ ಇಲ್ಲ. ಇವೊತ್ತು ಜಮೀನು ಕಡಿಮೆಯಾಗಿ ಸರ್ಕಾರ ಸುಮ್ಮನೆ ಕೂತುಕೊಂಡು ಬಿಟ್ಟಿದೆ, ಅಂತಹ ಪರಿಸ್ಥಿತಿ ಇದೆ. ಅವರಿಗೆ ಸಾಗುವಳಿ ಮಾಡಲು ಭೂಮಿಯನ್ನು ಕೊಡಬಾರದು ಎಂಬ ಉದ್ದೇಶ ಇಲ್ಲ. ಸೈಟು ಇಲ್ಲದಿದ್ದರೆ ಏನು ಮಾಡಬೇಕು? ಎನ್ನತಕ್ಕಂಥ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಆದುದರಿಂದ, ನಾವು ಮನವಿ ಮಾಡಿಕೊಂಡಿದ್ದೇವೆ. ಯಾರಾದರೂ ದಾನಿಗಳಿದ್ದರೆ, ಮುಂದೆ ಬನ್ನಿ ಎಂದು. ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಬಹಳ ಜನ ದಾನಿಗಳು ಇದ್ದಾರೆ. ಈ ಕಡೆ ಇಲ್ಲವೆಂದಲ್ಲ, ಇಲ್ಲಿಯೂ ಇದ್ದಾರೆ. ಆ ಕಡೆ ಜಾಸ್ತಿ ಇದ್ದಾರೆ. ಒಂದೊಂದು ಹಳ್ಳಿಯ ಪಕ್ಕದಲ್ಲಿ ನಾವು ಏನಾದರೂ ಮಾಡಿ 5-10 ಎಕರೆ ಜಮೀನು ತೆಗೆದುಕೊಂಡು, ಅದಕ್ಕೂ ಕೂಡಾ ಬೇಲಿಯನ್ನು ಹಾಕಿಸಬೇಕು, ಏಕೆಂದರೆ ನಾಳೆಯೂ ಕೂಡಾ ಅಲ್ಲಿ ಬಗರ್ ಹುಕುಂ ಸಾಗುವಳಿಯಾಗುತ್ತದೆಂಬ ಹೆದರಿಕೆಯಾಗುತ್ತಿದೆ. ಆಮೇಲೆ ಜನಸಂಖ್ಯೆಯ ಬಗ್ಗೆ ಕೂಡಾ ನಾವು ಒಂದು ವಿಚಾರ ಮಾಡಬೇಕು. ಸುಮ್ಮನೆ ಸರ್ಕಾರವಾಯಿತು, ಪ್ರಜಾಪ್ರಭುತ್ವ, ಜನ ಓಟು ಕೊಡುತ್ತಾರೆ, ಸರ್ಕಾರ ರಚನೆ ಮಾಡುತ್ತಾರೆ, ಇದಕ್ಕೆ ಬುಡ ಇಲ್ಲ, ತುದಿ ಇಲ್ಲ. ಅರ್ಜಿ ಕೊಡುತ್ತಾರೆ. ತಾವು ಶಾಸಕರಾಗಿ, ಸಚಿವರಾಗಿ, ಮುಖ್ಯ ಮಂತ್ರಿಯಾಗಿ, ಅಧಿಕಾರಿಗಳಾಗಿ, ಮಂಡಲ ಪ್ರಧಾನರಾಗಿ, ಜಿಲ್ಲಾ ಪರಿಷತ್ ಸದಸ್ಯರಾಗಿ ಆ ಪಕ್ಷ ಈ ಪಕ್ಷ ಎಂದು ಏನೂ ನೋಡುವುದಿಲ್ಲ. ಜನ ಏನಂತ ಅರ್ಜಿ ಕೊಡುತ್ತಾರೆ, ನಾನು ಬಹಿರಂಗ ಸಭೆಯಲ್ಲಿ ಕೂಡಾ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸ್ವಾಮಿ, ನನಗೆ ಮನೆ ತುಂಬಾ ಮಕ್ಕಳು, ನನಗೆ ಆಸ್ತಿ ಇಲ್ಲ, ನನ್ನ ಜೀವನಕ್ಕೆ ತೊಂದರೆಯಾಗಿದೆ. ಒಬ್ಬೊಬ್ಬರಿಗೆ ಎಂದರೆ, 6-8-10-12 ಮಕ್ಕಳು ಇರುತ್ತಾರೆ. ಅವರನ್ನು ನೋಡಿದರೆ ಕೂಲಿ ಮಾಡುತ್ತಾರೆ, ಆಸ್ತಿ ಇಲ್ಲ. ಇವೊತ್ತು ಬರ್ಡನ್ ಆಗುತ್ತಿರುವುದು ಯಾರ ಮೇಲೆ? ಇಡೀ ಸಮಾಜದ ಮೇಲೆ ಬರ್ಡನ್ ಆಗುತ್ತಿದೆ. ಇವೊತ್ತು ಬರೀ ಸರ್ಕಾರ ಸರ್ಕಾರ ಅಂತ ಹೇಳಿದ ತಕ್ಷಣ ಬರೀ ಸೈಟು ಕೊಟ್ಟು ಮನೆ ಕಟ್ಟಿಸಿಕೊಡುವುದಕ್ಕೆ ಒಂದು ಸರ್ಕಾರ ಹುಟ್ಟಿದೆಯೆಂದು

ತಿಳಿದುಕೊಳ್ಳುವಷ್ಟು ಮೂರ್ಖರು ನಾವಾಗಬಾರದು. ಯಾವುದೇ ಸರ್ಕಾರ ಇರಬಹುದು. ನಾನು ಹೇಳುತ್ತಿದ್ದೇನೆ, ಜನರೂ ಕೂಡಾ ಇದನ್ನು ಅರ್ಥಮಾಡಿಕೊಳ್ಳಬೇಕು. After all this is the creation of the very same society. This is the political system.

ಇದಕ್ಕಾಗಿಯೇ ನಾವು ಒಂದು ಸಿಸ್ಟಮ್ ಮಾಡಿಕೊಂಡಿದ್ದೇವೆ. ಪ್ರಜಾಪ್ರಭುತ್ವ, ಚುನಾವಣೆ ಬಹುಮತ ಬಂದರೆ ಸರ್ಕಾರ ಮಾಡಬೇಕು ಅಥವಾ ಕೆಲವು ಪಕ್ಷಗಳು ಸೇರಿ ಸರ್ಕಾರವನ್ನು ಕೇಂದ್ರ ಇಲ್ಲವೇ ರಾಜ್ಯಗಳಲ್ಲಿ ರಚನೆ ಮಾಡಬೇಕೆಂಬ ಪದ್ಧತಿಯನ್ನು ನಾವು ಇಟ್ಟುಕೊಂಡಿದ್ದೇವೆ. ಇಂತಹ ಸಂದರ್ಭದಲ್ಲಿ ಮನೆ ತುಂಬಾ ಮಕ್ಕಳನ್ನು ಹುಟ್ಟಿಸಿಕೊಂಡು ಸರ್ಕಾರದ ತಲೆ ಮೇಲೆ ಹಾಕಬೇಕು ಎನ್ನತಕ್ಕಂಥಾದ್ದು ಏನು? ಆದುದರಿಂದ, ಈ ಸಮಸ್ಯೆಗೆ ಪರಿಹಾರವನ್ನು ಬರೀ ಸರ್ಕಾರದಿಂದ ನಿರೀಕ್ಷಿಸುವುದು ಸರಿಯಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಮುಖ್ಯಮಂತ್ರಿಗಳು ಪ್ರಾರ್ಥನೆ ಮಾಡತಕ್ಕದ್ದು ಏನೆಂದರೆ, ಈ ದೇಶದಲ್ಲಿ ಜನಸಂಖ್ಯಾ ಸ್ಫೋಟವಾಗುತ್ತಿದೆ, ಜನಸಂಖ್ಯೆ ಅನಿಯಂತ್ರಿತವಾಗಿ ಬೆಳೆಯುತ್ತಿದೆ, ಇದು ನಿಯಂತ್ರಣ ಆಗಬೇಕೆಂಬ ಮಾತನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಹಾಗೂ ಈ ಬಗ್ಗೆ ಸರ್ಕಾರ ಮಾಡತಕ್ಕಂಥ ಅಭಿವೃದ್ಧಿ ಸಹಾಯ ಸೌಕರ್ಯಗಳು ಕಾಣ್ತಾ ಇಲ್ಲ. ಇದು ನಿಯಂತ್ರಣ ಆಗಬೇಕೆಂದು ಹೇಳುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಅನೇಕ ಯೋಜನೆ ಗಳನ್ನು ಹಾಕಿಕೊಂಡಿದ್ದರೂ ಇದರ ನಿಯಂತ್ರಣ ಸಾಕಷ್ಟು ಆಗಿಲ್ಲ ಎನ್ನುವ ದೃಷ್ಟಿಯಿಂದ ಸರ್ಕಾರ ಕೊಡತಕ್ಕಂಥ ಸಹಾಯ - ಸಹಕಾರ ಸಬ್ಸಿಡಿ ಐ.ಆರ್.ಡಿ.ಪಿ. ಮನೆ ಕಟ್ಟಿಸಿ ಕೊಡತಕ್ಕಂಥ ಅನೇಕ ಯೋಜನೆಗಳಿವೆ. ಈ ಜನಸಂಖ್ಯಾ ನಿಯಂತ್ರಿಸುವುದಕ್ಕೆ ಮತ್ತು ಯಾರು ಈ ಕುಟುಂಬ ಕಲ್ಯಾಣ ಯೋಜನೆಯಡಿ ಬರುವವರಿದ್ದರೆ, ಅವರಿಗೆ ಮಾತ್ರ ಈ ಸಹಾಯ - ಸೌಲಭ್ಯವನ್ನು ಇನ್ನು ಮುಂದೆ ಸರ್ಕಾರ ಕೊಡುತ್ತದೆ ಎನ್ನುವಂತಹ ಯೋಚನೆ ಏನಾದರೂ ಈ ಸರ್ಕಾರಕ್ಕೆ ಇದೆಯೇ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಕುಟುಂಬ ಯೋಜನೆ ಬಗ್ಗೆ ಮೊದಲು ನಿಯಂತ್ರಣ ಇರಲಿಲ್ಲ. ಆಗ ಮಕ್ಕಳು ಸಿಕ್ಕಾಪಟ್ಟೆ ಹುಟ್ಟಿದ್ದು ಆಯಿತು. ಜನಸಂಖ್ಯೆ ಏರಿಕೆಯಾಯಿತು. ಈ ಮಧ್ಯೆ ಇದು ಕೇಂದ್ರದ ರಾಷ್ಟ್ರೀಯ ನೀತಿಯಾಗಿ ಯೋಜನೆ ಆಗಿ ಆಯಾಯ ರಾಜ್ಯಗಳಿಗೆ ಹಣ ಕೊಡುವಂತಹ ಸೌಲಭ್ಯ ಈಗಲೂ ಕೂಡ ಇದೆ. ಅದು ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಅದು ಸ್ಲೋಡೌನ್ ಆಗತಕ್ಕದ್ದು ಕಂಡು ಬರುತ್ತದೆ. ಈಗಿನ ಅಂಕಿ ಅಂಶಗಳ ಪ್ರಕಾರ ಅನೇಕ ಭಾಗಗಳಲ್ಲಿ ಕೆಲವು ಕಡೆ ನಿಂತುಹೋಗಿದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಇಡೀ ರಾಜ್ಯದಲ್ಲಿ ಆ ಕಾರ್ಯಕ್ರಮ ನಿಂತುಹೋಗಿದೆ.

ಶ್ರೀ ಎಸ್. ಬಂಗಾರಪ್ಪ : ಅದನ್ನೇ ನಾನು ಹೇಳುತ್ತಿರುವುದು. ಈಗ ಏನಾಗಿದೆ, ಆ ಧರ್ಮ, ಈ ಧರ್ಮ, 28 ಧರ್ಮಗಳು, 108 ಜಾತಿಗಳು, ಭಾರಿ ಭಾಷೆಗಳು, ಬೃಹತ್ ರಾಷ್ಟ್ರ, ಇವ್ಯೊಂದು ಕೂಡ ಕಂಟ್ರೋಲ್‌ಗೆ ಬರುವುದಿಲ್ಲ. ಮಣ್ಣೂ ಇಲ್ಲ. ಈಗ ಇದರಲ್ಲಿ ಏನಾಗಿದೆ ಅಂದರೆ, ಒಂದು ಕಡೆ ಪೂರ್ವಕ್ಕೆ ಹೋದರೆ, ಇನ್ನೊಂದು ಕಡೆ ಪಶ್ಚಿಮಕ್ಕೆ ಎಳೆಯುತ್ತದೆ. ಧರ್ಮ, ಜಾತಿ ಬಿಟ್ಟು ಇದನ್ನು ರಾಷ್ಟ್ರೀಯ ಸಮಸ್ಯೆಯಾಗಿ ಮತ್ತು ಇದನ್ನು ಪಕ್ಷಾತೀತವಾಗಿ ತೆಗೆದುಕೊಳ್ಳದಿದ್ದರೆ ಇವೊತ್ತು ಈ ರಾಷ್ಟ್ರೀಯ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಇಲ್ಲಿ ಸಮಸ್ಯೆ ಬರೆಸ್ಯೆಟುಮನೆ ಅಲ್ಲ ಅಂದರೆ ಜನಸಂಖ್ಯೆ ನಿಯಂತ್ರಣವಾಗಬೇಕು. ಈಗ ನಾವು ಇದರ ಬಗ್ಗೆ ನೋಡಿದಾಗ ಸಿನಿಮಾದಲ್ಲಿ ಸೀಟು ಸಿಕ್ಕುವುದಿಲ್ಲ, ಹೋಟಲಿನಲ್ಲಿ ಸೀಟು ಸಿಕ್ಕುವುದಿಲ್ಲ, ಬಸ್ಸಿನಲ್ಲಿ ಸೀಟು ಸಿಕ್ಕುವುದಿಲ್ಲ ನಿಮಗೆ ಎಲ್ಲೂ ಜಾಗ ಸಿಕ್ಕುವುದಿಲ್ಲ. ನಿಮ್ಮನ್ನೇ ದಬ್ಬಿಕೊಂಡು

ಅವರು ಹೋಗುತ್ತಾರೆ, ಇಲ್ಲ ಅಂದರೆ ಅವರನ್ನೇ ದಬ್ಬಿಕೊಂಡು ನಾವು ಹೋಗಬೇಕು, ಆ ರೀತಿ ಆಗುತ್ತಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವೊತ್ತು ಸ್ಮಶಾನದಲ್ಲಿಯೂ ಜಾಗ ಸಿಕ್ಕುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಸ್ಮಶಾನಕ್ಕೆ ಜಾಗ ಇಲ್ಲ, ಆದ್ದರಿಂದಲೇ, ಸ್ವಲ್ಪ ಸಾಯುವುದು ಲೇಟ್ ಆಗಿರಬೇಕು ಎಂದು ನನ್ನ ಭಾವನೆ.

ಶ್ರೀ ಆರ್.ಎಲ್. ಜಾಲಪ್ಪ : ಸಬ್ಸಿಡಿ ಕೊಡುವುದಿಲ್ಲ, ಬರ್ತ್ ಕಂಟ್ರೋಲ್ ಮಾಡದಿದ್ದರೆ ಎಂದು ಹೇಳಿದರೆ, ಅದು ಎಲ್ಲಿಯೂ ನಡೆಯುವುದಿಲ್ಲ. ಇದು ಎಲ್ಲಾ ಕೊಡದೇ ಹೋದರೆ ಅಷ್ಟೇ ಹೋಯಿತು ಎಂದು ಹೇಳುತ್ತಾರೆ. ಏನಾದರೂ ಶಕ್ತಿ ಇದ್ದರೆ ಕಾನೂನು ತಂದು ಒಂದು ಸೆಂಟ್ರಲ್ ಆಕ್ಟ್ ಮಾಡಿ ಎರಡು ಮಕ್ಕಳ ಮೇಲೆ ಇರುವುದು ಬೇಡ ಎಂದು ಕಾನೂನು ತರಲಿಕ್ಕೆ ಧೈರ್ಯ ಇದೆಯೋ ಯಾವ ಪಕ್ಷದವರಿಗೂ ಈ ಧೈರ್ಯ ಇಲ್ಲ. ಅವರಿಗೆ ಬೇಕಾಗಿರುವುದು ಓಟು. ಆದ್ದರಿಂದ ಇದು ಹೀಗೆ ನಡೆದುಕೊಂಡು ಹೋಗುತ್ತಿದೆ, ನಡೆಯಲಿ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ : ನಾನು ಅದನ್ನೇ ಹೇಳಿದ್ದು. ಹಲವಾರು ಕಟ್ಟಳೆಗಳಿಂದ, ಯಾವು ಯಾವುದೋ ಒಂದು ಗುಂಗಿನಲ್ಲಿ ಹುಟ್ಟಿದಾಗಿನಿಂದ, ಸಾಯುವವರೆಗೂ ಸಿಕ್ಕಿ ಹಾಕಿಕೊಂಡು ಈ ರಾಷ್ಟ್ರದಲ್ಲಿ ನರಳುತ್ತಿದ್ದೇವೆ. ಇದು • ನಮ್ಮ ಕರ್ನಾಟಕವು ಸೇರಿದಂತೆ ಹೇಳುತ್ತಿದ್ದೇನೆ. ನಿಜವಾಗಿ ಮುಂದಿನ ಪೀಳಿಗೆಗೆ ನಿಮ್ಮ ಕೊಡುಗೆ ಏನು ಎನ್ನತಕ್ಕ ಭಾಷಣ ಮಾಡಿದರೆ, ಮಕ್ಕಳು ಜಾಸ್ತಿ ಮಾಡಿದಂಥ ಅಪ್ಪ ಅವ್ವನ್ನೇ ಕೇಳಬೇಕು. ಅದಕ್ಕೆ ಅವರೇ ಉತ್ತರವನ್ನು ಕೊಡಬೇಕು. ಸರ್ಕಾರ ಅಂದರೆ ಏನು, ನಾನು ಆ ಕಡೆ ಕುಳಿತಿದ್ದಾಗಲೂ ಕೂಡ ಈ ಮಾತನ್ನು ಆಡಿದ್ದೇನೆ, ಬೇಕಾದರೆ ರೆಕಾರ್ಡ್ ತೆಗೆದುನೋಡಿ ತಮಗೆ ಗೊತ್ತಾಗುತ್ತದೆ. ಈ ಭಾಷಣ ಮಾಡಲಿಕ್ಕೆ ಮುಖ್ಯಮಂತ್ರಿ ಆಗುವ ಅವಶ್ಯಕತೆ ಇಲ್ಲ, ಮಂತ್ರಿಗಳಾಗುವ ಅವಶ್ಯಕತೆ ಇಲ್ಲ. ಇದನ್ನು ಪಕ್ಷಾತೀತವಾಗಿ ನೋಡಬೇಕು. ಏಕೆಂದರೆ, ನಾಳೆ ಮತ್ತೊಂದು ಪಕ್ಷ ಬರಬಹುದು. ಕೇಂದ್ರ ಮತ್ತು ರಾಜ್ಯದಲ್ಲಿ ಅದೇ ರೀತಿ ನಡೆದಿದ್ದಾವೆ, ಇವಕ್ಕೆ ಏನಾದರೂ ಮಾಡದಿದ್ದರೆ ಈ ಜನಸಂಖ್ಯಾ ಸ್ಫೋಟ ಏನಿದೆ, ಹಲವಾರು ಸೋಷಿಯಲ್ ಪೆಥಾಲಜಿಗೆ ಬರತಕ್ಕಂಥ ವಿಚಾರಗಳು ಏನಿದೆ, ಈ ರೋಗ ರುಜಿನಗಳು, ಇದಕ್ಕೆ ಮೂಲಭೂತ ಕಾರಣ ಇದಕ್ಕೆ. ಏನಾದರೂ ಮಾಡಿ ನಿಲ್ಲಿಸಬೇಕೆಂದು ಎಂದು ಮಾತ್ರ ಸಲಹೆ ಮಾಡಬಲ್ಲೆ. ಉತ್ತರ ಕೊಡಲಿಕ್ಕೆ ನನ್ನ ಹತ್ತಿರ ಶಕ್ತಿ ಇಲ್ಲ, ತಮ್ಮ ಹತ್ತಿರ ಶಕ್ತಿ ಇಲ್ಲ, ಯಾರ ಹತ್ತಿರವೂ ಶಕ್ತಿ ಇಲ್ಲ.

ಅಧ್ಯಕ್ಷರು : ನಿಮ್ಮ ಸಹೋದ್ಯೋಗಿ ಶಿವಣ್ಣನವರು ಒಬ್ಬರು ಇದಕ್ಕೆ ಉತ್ತರವನ್ನು ಕೊಡಬಹುದು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸಮಸ್ಯೆಗೆ ಸರಿಯಾದಂಥ ಉತ್ತರ ನಿಮ್ಮ ಸಹೋದ್ಯೋಗಿ ಶಿವಣ್ಣನವರಿಂದ ಸಾಧ್ಯ ಎಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ.

ಶ್ರೀ ಎಸ್.ಬಂಗಾರಪ್ಪ : ಅದು ನೀವು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಬೇಕಾದರೆ ಒಂದು ದಿವಸ ಚರ್ಚೆ ನಡೆಸೋಣ.

MR. SPEAKER : But anyway we cannot escape from the seriousness of the point which the Hon'ble Chief Minister is making....

ಶ್ರೀ ಎಸ್. ಬಂಗಾರಪ್ಪ : ಆದ್ದರಿಂದ ಈ ಸಂದರ್ಭದಲ್ಲಿ ಯಾವುದೇ ವಿಚಾರ ಇದ್ದರೂ ಕೂಡ ಸರ್ಕಾರ ವಿಫಲ ಆಯಿತು ಎಂದು ಹೇಳುವುದಕ್ಕೆ ಎಷ್ಟೇ ಪ್ರಾಮಾಣಿಕ ಪ್ರಯತ್ನ ಮಾಡಿದರೂ ಕೂಡ ವಿಫಲ ವಾಗಿದೆ ಎಂಬ ಮಾತನ್ನು ಯಾರಾದರೂ ಹೇಳುವುದಕ್ಕೆ ಸಾಧ್ಯತೆ ಇರತಕ್ಕಂಥ ಒಂದು ಸಂದರ್ಭದಲ್ಲಿ ಮಾತ್ರ ನಾವು ಸಿಕ್ಕಿಹಾಕಿಕೊಂಡಿದೇವೆ. ಇದಕ್ಕೆ ಕಾರಣ ಬರೀ ಈ ಸರ್ಕಾರ ಅಲ್ಲ. ಇದಕ್ಕೆ ರಿಪೇರಿ ಮಾಡಲಿಕ್ಕೆ ಬರೀ ಒಂದು ಓಟು ಕೊಟ್ಟರೆ ಬರುವುದಿಲ್ಲ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಸಮಸ್ಯೆಗಳನ್ನು ಹುಟ್ಟಿಸಿ, ಹುಟ್ಟಿಸಿ ಸಮಾಜವೇ ಕೆಟ್ಟು ಸರ್ಕಾರದ ತಲೆಯ ಮೇಲೆ ಗೂಬೆ ಕೂಡಿಸತಕ್ಕಂತಾದ್ದು ಕೂಡ ಸರಿಯಲ್ಲ. ಆದ್ದರಿಂದ ಇದನ್ನು ಸರಿಪಡಿಸಲಿಕ್ಕೆ, ಇಡೀ ಸಮಾಜ ಜವಾಬ್ದಾರಿ ಹೊರಬೇಕು. ಸಮಾಜವೇ ಸೃಷ್ಟಿ ಮಾಡಿ ಇಟ್ಟುಕೊಂಡಿರತಕ್ಕ ಒಂದು ಸರ್ಕಾರ ರಾಜ್ಯ ಮತ್ತು ಕೇಂದ್ರದಲ್ಲೊ ಕೂಡ ಸಿದ್ಧವಾಗಿರಬೇಕು ಇಷ್ಟು ಮಾತ್ರ ನಾನು ತಮ್ಮ ಗಮನಕ್ಕೆ ತರಬಲ್ಲೆ.

ಇನ್ನೂ ಕೆಲವು ವಿಚಾರಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಬಗ್ಗೆ ಗೂಡ್ವಾಲಾಸ್ ಸಮಿತಿಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಸಿಂಧ್ಯರವರೂ ಹಾಗೂ ಇನ್ನಿತರ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾವು ಶೀಘ್ರದಲ್ಲಿಯೇ

ಶ್ರೀ ಪಿ.ಜಿ.ಆರ್. ಸಿಂಧ್ಯ: ಶೀಘ್ರದಲ್ಲಿ ಎಂದರೆ ಯಾವತ್ತು?

ಶ್ರೀ ಎಸ್.ಬಂಗಾರಪ್ಪ: ಶೀಘ್ರ ಎಂದರೆ ಅಷ್ಟೆ. ಶೀಘ್ರ ಎಂದು ಅಷ್ಟು ಇಟ್ಟುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಶೀಘ್ರ ಎಂದರೆ ಶೀಘ್ರಲಪಿ.

ಶ್ರೀ ಎಸ್. ಬಂಗಾರಪ್ಪ: ಶೀಘ್ರ ಎಂದರೆ, ಅತಿ ಶೀಘ್ರದಲ್ಲಿ ನಾವು ತೀರ್ಮಾನ ಮಾಡುತ್ತೇವೆ. ಇದು ಈಗ ಕ್ಯಾಬಿನೆಟ್ ಸಬ್ ಕಮಿಟಿಯ ಮುಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ತಾವು ಮುಖ್ಯ ಮಂತ್ರಿಗಳಾಗುವುದಕ್ಕೆ ಮುಂದೆ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಶೀಘ್ರ, ಅತಿ ಶೀಘ್ರ, ಎನ್ನತಕ್ಕ ಶಬ್ದಗಳನ್ನು ಉಪಯೋಗಿಸಿದರು. ಅವರು ಹೊರಟು ಹೋದರು. ಕೊನೆಯ ಪಕ್ಷ ನಮಗೆ ಇಷ್ಟಾದರೂ ಅಶ್ವಾಸನೆಯನ್ನು ಕೊಡಿ. ಏಕೆಂದರೆ ನೀವು ಹಿಂದುಳಿದವರ್ಗದವರು, ಹಿಂದುಳಿದ ವರ್ಗದವರ ಪರವಾಗಿ ನೀವು ಹೋರಾಟ ಮಾಡಿರತಕ್ಕವರು. ನಿನ್ನೆಯ ದಿವಸ ಈ ಕಡೆಯಿಂದ ಮಾತನಾಡಿದ ನಮ್ಮ ಅನೇಕ ಮಾನ್ಯ ಸದಸ್ಯರು ಭಾಷಣದ ತಿರುಳೂ ಇದೇ ಆಗಿತ್ತು. ಕೊನೆಯ ಪಕ್ಷ ನಿಮ್ಮ ಕಾಲದಲ್ಲಿ ಇದನ್ನು ಕಾರ್ಯಗತಮಾಡುತ್ತೇನೆಂದು ಹೇಳಿ. ಅಂದರೆ ನೀವು ಮುಖ್ಯ ಮಂತ್ರಿಗಳಾಗಿರತಕ್ಕ ಅವಧಿಯಲ್ಲಿ....

ಶ್ರೀ ಎಲ್.ಆರ್. ಶಿವರಾಮೇಗೌಡ: ಅಂದರೆ ಅದನ್ನು ಪುನರ್ ಪರಿಶೀಲನೆ ಮಾಡಿ ಮಾಡುತ್ತೇವೆಂಬ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅವರು ಹೇಳಿದ್ದರ ಬಗ್ಗೆಯಾದರೂ ಸಹ ನೀವು ಖಚಿತವಾಗಿ ಹೇಳಿ. ನಿಮ್ಮ ಅವಧಿಯಲ್ಲಿ ನಾನು ಇದನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿ. ಅವರು ಹೇಳಿದ್ದನ್ನು ಸಹ ನೀವು ಕನ್ಸಿಡರ್ ಮಾಡಬಹುದು. ಆದರೆ ನೀವು ಖಚಿತವಾಗಿ ಹೇಳಿ. ಇದು ನನ್ನ ನಿರ್ಧಾರ. ನಾನು ಇದಕ್ಕೋಸ್ಕರ, ಈ ಮೌಲ್ಯಕ್ಕೋಸ್ಕರ ನಿಲ್ಲುತ್ತೇನೆಂದು ಹೇಳಿ. ಕೆಲವು ವಿಚಾರಗಳಲ್ಲಿ ನಮಗೂ ಮಾನ್ಯ ಬಸವಲಿಂಗಪ್ಪನವರಿಗೂ ಸಹಮತಿ ಇಲ್ಲದಿದ್ದರೂ ಅವರು ನಿರ್ಧಿಷ್ಟವಾಗಿ ಹೇಳುತ್ತಾರೆ. ಈ ವಿಚಾರದಲ್ಲಿ

ನಾನು ನಿಲ್ಲುತ್ತೇನೆ ಎಂದು ಹೇಳುತ್ತಾರೆ. ಆದರೆ ಇತ್ತೀಚೆಗೆ ಅವರು ಸ್ವಲ್ಪ ಬದಲಾವಣೆಯಾಗಿರತಕ್ಕದು ಸ್ವಾಗತಾರ್ಹ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಅವರು ಬಹಳ ಗಂಭೀರವಾಗಿ ಕೂತಿದ್ದಾರೆ. ಅವರನ್ನು ಎಳೆದು. ಏನೋ ಮಾಡಿ.....

ಶ್ರೀ ಪಿ.ಜಿ.ಆರ್. ಸಿಂಧ್ಯ: ಅವರ ಬಗ್ಗೆ ನಾನು ಒಳ್ಳೆಯದನ್ನೇ ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಅಧ್ಯಕ್ಷರೆ, ನಾನು ಸುಮ್ಮನೆ ಕೂತಿದ್ದೇನೆ. ಆದರೆ ಇವರು ನನ್ನನ್ನು ಕೆಣಕುತ್ತಿದ್ದಾರೆ. ಇವರು ನನ್ನನ್ನು ಹೊಗಳುತ್ತಾರೆ ಮತ್ತು ತೆಗಳುತ್ತಾರೆ. ಎರಡನ್ನೂ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೆಲವು ವಿಚಾರಗಳಲ್ಲಿ ನಿಮ್ಮನ್ನು ಹಿಂದೆಯೂ ಹೊಗಳಿದ್ದೇನೆ; ಇವತ್ತೂ ಹೊಗಳಿದ್ದೇನೆ. ನಿಮ್ಮ ಧೈರ್ಯವನ್ನು ಹೊಗಳಲೇಬೇಕು. .ಯಾರು ಏನೇ ಹೇಳಿದರೂ ಜಪ್ಪಯ್ಯ ಎನ್ನುವುದಿಲ್ಲ ನೀವು. ಆದುದರಿಂದಲೇ ನಾನು ಹೇಳಿದ್ದು, ಈ ಸರ್ಕಾರದಲ್ಲಿ ಕೆಲವು ರುಬ್ಬು ಗುಂಡುಗಳಿವೆ ಅಂತಹೇಳಿ ಎಂದು ನಾನು ಹೇಳಿದ್ದು. ನೀವು ಏನೂ ವಿಚಲಿತರಾಗುವುದಿಲ್ಲ. ನಾನು ಮುಖ್ಯಮಂತ್ರಿಗಳಲ್ಲಿ ಕೇಳುತ್ತಿರುವುದು ನಿಮ್ಮ ಅವಧಿಯಲ್ಲಿ ನಾನು ಇದನ್ನು ಮಾಡುತ್ತೇನೆ, ಇದಕ್ಕೋಸ್ಕರ ನಾನು ನಿಲ್ಲುತ್ತೇನೆಂದು ನಿಮ್ಮ ಖಚಿತವಾದ ಅಭಿಪ್ರಾಯವನ್ನು ಹೇಳಿ......

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವರಾಮೇಗೌಡರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅವರ ಸಲಹೆಯನ್ನು ತಾವು ಸಲಹೆಯನ್ನು ಸ್ವೀಕಾರ ಮಾಡಿ ಪುನರ್ ಪರಿಶೀಲನೆಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುವುದಾದರೆ ಹೇಳಿ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ. ಇದು ಬಹಳ ಮುಖ್ಯವಾದುದು. ಧಾರವಾಡ ಜಿಲ್ಲೆಯಲ್ಲಿ ಅಂದರೆ ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಬೆಂಚನ್ನು ತೆರೆಯುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನಾನು ಉತ್ತರ ಕೊಟ್ಟಮೇಲೆ ಮಾನ್ಯ ಸದಸ್ಯರು ನೆನಪು ಮಾಡಿದರೆ ಆದು ಏನು ಎಂಬುದನ್ನು ತಿಳಿಸುತ್ತೇನೆ. ತಾವು ಈ ವಿಷಯವನ್ನು ಕೇಳಬಾರದು ಅಂತ ಅಲ್ಲ.

ಮಾನ್ಯ ಅಧ್ಯಕ್ಷರೆ, ಚಿನ್ನಪ್ಪರೆಡ್ಡಿ ಆಯೋಗದ ವರದಿ ಇರಬಹುದು, ಗೊಡ್‌ವಾಲಾ ಸಮಿತಿಯ ವರದಿ ಇರಬಹುದು, ಎಲ್ಲ ವರದಿಗಳ ಬಗ್ಗೆ ಒಂದೇ ಉತ್ತರ ಎಂದರೆ ಇದನ್ನು ಆದಷ್ಟು ಶೀಘ್ರವಾಗಿ ತೀರ್ಮಾನ ಮಾಡುತ್ತೇವೆಂಬುದನ್ನು ಬಿಟ್ಟು ನಾವು ಬೇರೆ ಏನನ್ನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಕಳೆದ ಸಾರಿಯ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ವರದಿ ಬಂದಕೂಡಲೇ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಬಂದಕೂಡಲೇ ಎಂದರೆ ಎಷ್ಟು ಅವಧಿಯಲ್ಲಿ ತೀರ್ಮಾನವನ್ನು ನೀವು ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕೆಂದು ನಾನು ಆಗ ಪ್ರಸ್ತಾಪ ಮಾಡಿದ್ದೆ. ಈಗ ನಾನು ಇದನ್ನು ತಮಗೆ ಒತ್ತಾಯಮಾಡಿ ಹೇಳುತ್ತಿದ್ದೇನೆ....

ಶ್ರೀ ಎಸ್. ಬಂಗಾರಪ್ಪ : ಹಿಂದುಳಿದ ವರ್ಗದ ಜನರ ಹಿತದೃಷ್ಟಿಯಿಂದ ನಾಲ್ಕು ದಿವಸ ತಡವಾದರೂ ಪರವಾಗಿಲ್ಲ. ಆದುದರಿಂದಲೇ ನಾನು ಹೇಳಿದ್ದು,

ಸ್ವಲ್ಪ ತಡವಾದರೂ ಕೂಡ "ಶೀಘ್ರ" ಎಂದು ಹೇಳಿದರೆ ನೀವು ನಂಬುವುದಿಲ್ಲ ಎಂದು ತಿಳಿದು ನಾನು ಸ್ವಲ್ಪ ತಡವಾಗಿ ಎಂದು ಹೇಳಿದ್ದು.

ಶ್ರೀ ವಾಟಾಳ್ ನಾಗರಾಜ್ : ಶೀಘ್ರ ಎಂದರೆ ಚುನಾವಣೆ ಆದಮೇಲೆ ಅಂತ ಅದರ ಅರ್ಥ.

ಶ್ರೀ ಎಸ್. ಬಂಗಾರಪ್ಪ : ಅದು ನನಗೆ ಗೊತ್ತಿಲ್ಲ. ನಾವು ಇದರ ಬಗ್ಗೆ ಒಂದು ಅಂತಿಮ ತೀರ್ಮಾನಕ್ಕೆ ಬರುತ್ತೇವೆ.

ಈ ಸಂದರ್ಭದಲ್ಲಿ ಡಾ. ಸರೋಜಿನಿಮಹಿಷಿ ವರಧಿಯ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದರ ಬಗ್ಗೆ ನಾನು ಸರ್ಕಾರಿ ಆಜ್ಞೆಯನ್ನು ಕೂಡ ವಿತರಣೆ ಮಾಡಿದ್ದೇವೆ. ತಾವು ಅದನ್ನು ನೋಡಿರಬಹುದೆಂದು ನನ್ನ ಭಾವನೆ. ಈ ಸಮಿತಿಯ ವರದಿಯಲ್ಲಿರತಕ್ಕ ಶಿಫಾರಸ್ಸುಗಳಲ್ಲಿ ಕೆಲವು ಸಣ್ಣ-ಪುಟ್ಟ ಮಾರ್ಪಾಡನ್ನು ಮಾಡಿ ಭಾಷಾ ಅಲ್ಪಸಂಖ್ಯಾತರ ಹಿತವನ್ನು ನಾವು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡಿದ್ದೇವೆ. ಈ ಸಮಾಜದ ಎಲ್ಲಾ ವರ್ಗಗಳಿಂದಲೂ ಇದಕ್ಕೆ ಬಹಳ ಒಳ್ಳೆಯ ಸಂತೋಷದ ಸ್ವಾಗತ ಸಿಕ್ಕಿದೆ. ಸರೋಜಿನಿ ಮಹಿಷಿ ವರದಿಯ ಬಗ್ಗೆ ನಾವು ತೆಗೆದುಕೊಂಡಿರುವ ತೀರ್ಮಾನವನ್ನು ನಾವು ಚಾಚೂ ತಪ್ಪದಂತೆ ಜಾರಿಗೆ ತರುತ್ತೇವೆ. ಇದನ್ನು ಜಾರಿಗೆ ತರತಕ್ಕಂತಹ ಸಂದರ್ಭದಲ್ಲಿ ಒಂದು ಪ್ರಶ್ನೆ ಬಂದಿದೆ, ಅದೇನೆಂದರೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ಬೇರೆಯವರನ್ನೇ ನೇಮಕ ಮಾಡುತ್ತಿದ್ದಾರೆಂದು ನಮ್ಮ ಮಾನ್ಯ ಸದಸ್ಯರಾದ ಇಸಾಮಿಯ ಅವರು ಒಂದು ಪ್ರಶ್ನೆಯನ್ನು ಕೇಳಿದರು. Linguistic minorities ಬಗ್ಗೆ ನಾನು ಉತ್ತರವನ್ನು ಕೊಡಬೇಕಾದರೆ ಅದನ್ನು ಓದಿ ಹೇಳಿದ್ದೇನೆ. ಈವತ್ತು ರಾಜ್ಯ ಸರ್ಕಾರದ ಇಲಾಖೆಗಳಿರಬಹುದು ಕೇಂದ್ರ ಸರ್ಕಾರದ ಇಲಾಖೆಗಳಿರಬಹುದು ಮತ್ತು ಸರ್ಕಾರೇತರ ಸಂಸ್ಥೆಗಳು ಏನೇನಿವೆ, ಅವುಗಳನ್ನು ಸಹ ಕವರ್ ಮಾಡಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ, ಅದಕ್ಕಾಗಿ ನಮಗೆ ಬಹಳ ಸ್ವಾಗತ ಸಿಕ್ಕಿದೆ. ನಾವು ಪ್ರತಿಯೊಬ್ಬರ ಬಗ್ಗೆಯೂ ಕೂಡ ಈ ಬಗ್ಗೆ ಸಂಪರ್ಕ ಬೆಳೆಸಿ ಇದನ್ನು ಜಾರಿಗೊಳಿಸುವ ವಿಚಾರದಲ್ಲಿ ಬಿಗಿಯಾಗಿ ಹೋಗುತ್ತೇವೆ ಇದರಲ್ಲಿ ಯಾವುದೇ ಅನುಮಾನ ಬೇಕಾಗಿಲ್ಲ ಎಂಬ ಮಾತನ್ನು ಮಾನ್ಯ ವಾಟಾಳ್ನಾಗರಾಜ್ರವರಿಗೆ ವಿಶೇಶವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಜೀವ ಹೋಗಿದೆ, ಅದಕ್ಕೆ ಜೀವವೇ ಇಲ್ಲಾ?

ಶ್ರೀ ಎಸ್. ಬಂಗಾರಪ್ಪ : ಇಷ್ಟು ಮಾತನ್ನು ಹೇಳಿ, ಪ್ರಾದೇಶಿಕ ಅಸಮಾನತೆಯು ಬರುತ್ತದೆ ಎನ್ನತಕ್ಕ ದೃಷ್ಟಿಯಿಂದ ಸದನದ ಎಲ್ಲಾ ಮಾನ್ಯ ಸದಸ್ಯರು ಪಕ್ಷಾತೀತವಾಗಿ ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಹೈದರಾಬಾದ್ ಕರ್ನಾಟಕ ಏರಿಯಾಕ್ಕೆ ಹೈಪವರ್ ಕಮಿಟಿ ಎಂದು ಮಾಡಿದ್ದೇವೆ ಅದನ್ನು ಸ್ಟ್ಯಾಚ್ಯೂಟರಿ ಬಾಡಿ ಮಾಡುವ ಮಟ್ಟಕ್ಕೆ ನಾವು ಹೋಗಿದ್ದೇವೆ. ಅದಕ್ಕಾಗಿ ಒಂದು ಸಣ್ಣ ಸಮಿತಿಯನ್ನು ಸಹ ಮಾಡಿದ್ದೇವೆ ಅದು ಗುರುಪಾದಪ್ಪನವರಿಗೆ ಗೊತ್ತಿದೆ. ಅವರು ಗುಲ್ಬರ್ಗಾದಲ್ಲಿ ಕುಳಿತು ನೀವು ಉತ್ತರಪ್ರದೇಶ, ಮಹಾರಾಷ್ಟ್ರ, ವಿದರ್ಭಗಳಲ್ಲಿ ಯಾವ ರೀತಿ ಮಾಡಿದ್ದಾರೆಂಬುದನ್ನು ಪೆಶಬಲ್ ನೊಡಿಕೊಂಡುಬಂದ ಮೇಲೆ ಮಾಡಿ ಎಂದು ಹೇಳಿದರು. Then we thought of it. Let us create a Statutory Board, There is nothing wrong in it....

ತಮ್ಮ ಅನಿಸಿಕೆಗೆ ಅನುಗುಣವಾಗಿ ನಾವು ತೀರ್ಮಾನವನ್ನು ಮಾಡಿದ್ದೇವೆ ಮತ್ತು ಅದಕ್ಕೆ ಸ್ಟ್ಯಾಚ್ಯುಟರಿ ಸ್ಟೇಟಸ್‌ನ್ನು ನಾವು ಕೊಟ್ಟಿದ್ದೇವೆ. ಅದನ್ನು ಕೊಟ್ಟ ಮೇಲೆ ನನ್ನ ಪ್ರಕಾರ ಹಲವಾರು ವಿಚಾರಗಳನ್ನು ನಾವು ತೀರ್ಮಾನ ಮಾಡಲು

ಅನುಕೂಲವಾಗುತ್ತದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಮತ್ತೊಂದು ವಿಚಾರವೇನೆಂದರೆ ನಾವು ಎರಡು ಕೃಷಿ ಕಾಲೇಜುಗಳನ್ನು ಸ್ಥಾಪಿಸಬೇಕೆಂದಿದ್ದೇವೆ. 1980ರಲ್ಲಿ ಪ್ರಕಟಣೆಯಾಗಿರುವಂತೆ ಬೆಂಗಳೂರಿನ ಹೆಬ್ಬಾಳ ಕಾಲೇಜಿಗೆ ಸೇರಿದಂತೆ ಶಿವಮೊಗ್ಗದಲ್ಲಿ, ಧಾರವಾಡ ಕೃಷಿ ಕಾಲೇಜಿಗೆ ಸೇರಿದಂತೆ ನಮ್ಮಲ್ಲಿ ಕೃಷಿ ಕಾಲೇಜು ಇಲ್ಲ ಮತ್ತು ರಾಯಚೂರಿನ ಇಂಜಿನೀಯರಿಂಗ್ ಕಾಲೇಜು ಹಾಗೂ ಇದನ್ನು ಬಿಟ್ಟರೆ ಬೀದರ್ನಲ್ಲಿ ವೆಟರ್ನರಿ ಕಾಲೇಜು ಬಿಟ್ಟರೆ ಬೇರೆ ಯಾವ ಕಾಲೇಜುಗಳು ಇರಲಿಲ್ಲ. ಆದರೆ ಇತ್ತೀಚಿಗೆ ಬಿಜಾಪುರವು ಹಣ್ಣು-ಹಂಪಲುಗಳ ವಿಚಾರದಲ್ಲಿ ಬಹಳ ಪ್ರಗತಿ ಸಾಧಿಸಿದೆ. ಕಾರಣ ಅಲ್ಲಿಯ ವಾತಾವರಣ, ಮಣ್ಣಿನ ಸಾರ ಇವುಗಳ ಬಗ್ಗೆ ತಜ್ಞರ ಅಭಿಪ್ರಾಯದಂತೆ ಬೆಸ್ಟ್ ಸೂಟೆಡ್. ಈಗ ಅಲ್ಲಿ ದಾಳಿಂಬೆ, ದ್ರಾಕ್ಷಿ, ಚುಕ್ಕೆ ದ್ರಾಕ್ಷಿ ಇವುಗಳ ಉತ್ಪಾದನೆಯಲ್ಲಿ, ಪ್ರಗತಿಯಲ್ಲಿ ಬೆಂಗಳೂರನ್ನು ಮೀರಿಸುವ ಮಟ್ಟಕ್ಕೆ ಹೋಗಿದೆ. ಈ ಬಿಜಾಪುರ ನಮ್ಮ ಸದಸ್ಯರಾದ ಕಲ್ಲೂರ್‌ರವರ ಜಿಲ್ಲೆ. ಆದುದರಿಂದ ಅಲ್ಲಿ ಒಂದು ಕಾಲೇಜನ್ನು ಕೊಟ್ಟಿದ್ದೇವೆ. ಅಲ್ಲಿ ಈಗ ಮಕ್ಕಳ ಪಾಠ ಪ್ರವಚನಗಳು ನಡೆಯುತ್ತಿವೆ, ಮತ್ತೆ ಈ ಸಾರಿ ಮತ್ತೆ ಎರಡು ಕಾಲೇಜುಗಳನ್ನು ಮಾಡುತ್ತೇವೆ ಅದಕ್ಕಾಗಿ ಹಣವನ್ನು ತೆಗೆದಿಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದನ್ನು ಹೇಳಿದ್ದಿರಾ?

ಶ್ರೀ ಎಸ್. ಬಂಗಾರಪ್ಪ : ಹೌದು, ಅದನ್ನು ಬಜೆಟ್ ಭಷಣದಲ್ಲಿ ಹೇಳಿದ್ದೇನೆ. ಗುರುಪಾದಪ್ಪನವರೆ, ನೀವು ಚಂದ್ರೇಗೌಡರ ಬಳಿ ಹುಶಾರಾಗಿ ಅನಲೈಸ್ ಮಾಡಬೇಕು. ಒಂದು ಕಾಲೇಜನ್ನು ಮಂಡ್ಯದಲ್ಲಿ ಮಾಡುತ್ತೇವೆ. ನನ್ನ ಪ್ರಕಾರ (ಐ.ಸಿ.ಆರ್.) ಇಂಡಿಯನ್ ಕೌನ್ಸಿಲ್ ಆಫ್ ರಿಸರ್ಚ್ ಟೀಮ್ ಬಂದಿದ್ದಾಗ ಅವರು ನಿಖರವಾಗಿ ಮೊದಲನೆಯ ಪ್ರಾಮುಖ್ಯತೆಯನ್ನು ಮಂಡ್ಯಕ್ಕೆ ಕೊಟ್ಟರು ಅದು ಸರಿಯಾದುದೆ, ಏಕೆಂದರೆ ಅಲ್ಲಿ ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಬೇಕಾದಷ್ಟು ಇನ್‌ಫ್ರಾಸ್ಟ್ರಕ್ಚರ್ ಇದೆ, ಮೂಲತವಾಗಿ ಮೊದಲೇ ಅಲ್ಲಿ ಪ್ರಾರಂಭ ಮಾಡಬೇಕಾಗಿತ್ತು ಎಂದು ನನಗನ್ನಿಸುತ್ತದೆ. ಕಳೆದಸಾರಿ ಒಂದು ಸಮಿತಿಯನ್ನು ಮಾಡಿದ್ದೆವು. ನಾನು ಆಗ ಕೃಷಿಮಂತ್ರಿಯಾಗಿದ್ದೆ, ಆಗಲೇ ಅಲ್ಲಿ ಕಾಲೇಜನ್ನು ಮಾಡಲು ಯಾಚಿಸಿದ್ದೆವವು, ಅದಕ್ಕೆ ಅನುಗುಣವಾಗಿ ನಾವು ಮತ್ತೆ ವಿಚಾರ ಮಾಡಿ ಮಂಡ್ಯದಲ್ಲಿ ಕಾಲೇಜನ್ನು ತೆರೆಯಲು ತೀರ್ಮಾನಿಸಿ ಅದಕ್ಕಾಗಿ ಹಣವನ್ನು ತೆಗೆದಿಟ್ಟಿದ್ದೇವೆ. ಮಂಡ್ಯದಲ್ಲಿ ನೀರಾವರಿಗೆ ಬೇಕಾದಷ್ಟು ಇನ್‌ಫ್ರಾಸ್ಟ್ರಕ್ಚರ್ ಇದೆ. ಈ ಸಲ ಮಂಡ್ಯದಲ್ಲಿ ಒಂದು ಕಾಲೇಜನ್ನು ಪ್ರಾರಂಭ ಮಾಡುತ್ತೇವೆ.

ಇನ್ನೊಂದು ಹಾರ್ಟಿಕಲ್ಚರ್ ಕಾಲೇಜನ್ನು ಯಾರೂ ಸಹ ಈ ದೇಶದಲ್ಲಿ ಮಾಡಿಲ್ಲ. ಆಗ್ರಿಕಲ್ಚರ್ ಯುನಿವರ್ಸಿಟಿಯಲ್ಲಿ ಹಾರ್ಟಿಕಲ್ಚರ್ಸಬ್ಜೆಕ್ಟ್ ಆಗಿರಬಹುದು. It is anexport oriented programme. We should not forget.

ಶ್ರೀ ಆರ್.ಎನ್. ನಾಯಕ್ : ಹಾರ್ಟಿಕಲ್ಚರ್ ಕಾಲೇಜು ಕೊಡುವುದಾದರೆ ದಯಮಾಡಿ ಉತ್ತರ ಕನ್ನಡ ಜಿಲ್ಲೆಗೆ ಕೊಡಿ. ಅಲ್ಲಿಗೆ ಏನೂ ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ: ನೋಡೋಣ ಈಗ ಏನಾಗಿದೆ. ಹಾರ್ಟಿಕಲ್ಚರ್‌ಗೆ ಸಿಕ್ಕಾಪಟ್ಟೆ ಬೇಡಿಕೆ ಬರುತ್ತದೆ. ಫ್ಲವರ್ಸ್ ಇರಬಹುದು. ಹಣ್ಣು ಹಂಪಲು ಇರಬಹುದು. ಆರ್ಟಿಕಲ್ಸ್ ಇರುತ್ತದೆ. ಅದಕ್ಕೆ ಶೀತಲಗಾರ ವ್ಯವಸ್ಥೆಯನ್ನು ಮಾತ್ರ ಚೆನ್ನಾಗಿ ಮಾಡಿಕೊಡಬೇಕು. ಇದಕ್ಕೆ ವರ್ಲ್ಡ್ ಬ್ಯಾಂಕ್ ಏಯ್ಡ್ ಇದೆ. ಅದಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾ ಪ್ರೋಗ್ರಾಮ್ ಇದೆ. ಅವನ್ನೆಲ್ಲಾ ಚೆನ್ನಾಗಿ ಮಾಡಿ ಇಟ್ಟುಬಿಟ್ಟರೆ ಪಸ್ಸೈಕ್ಲಾಸಾಗಿ ನಾವು ಫಾರಿನ್ ಎಕ್ಸಚೇಂಜ್ ಅರ್ ಮಾಡಬಹುದು. ಬೇಕಾದಷ್ಟು ನಮ್ಮ ರೈತರಿಗೆ ಧೈರ್ಯ ಕೊಡಬಹುದು. ಏಷಿಯಾಟಿಕ್ ಟೀಮ್‌ನವರು ಏನು ಹೇಳಿದರೆಂದರೆ, ನಾನು ಅಗ್ರಿಕಲ್ಚರ್ ಆಗಿದ್ದಾಗ ನನ್ನ ರೂಂನಲ್ಲಿ ಟೀ ಕೊಟ್ಟಾಗ

ಅವರು ಏನು ಅಂದರು ಅಂದರೆ ಅದರಲ್ಲಿ ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್ ಮಾಡಿ ಎಂದರು. ಅದಕ್ಕೆ ನಾನು ಹೇಳಿದ ಪೋಸ್ಟ್ ಗ್ರಾಜುಯೇಟ್ಸ್ ಈಗ ಬೇಡ. ಪೋಸ್ಟ್ ಗ್ರಾಜುಯೇಟ್ ಆಮೇಲೆ ಮಾಡೋಣ, ಮೊದಲು ಬಿ.ಎಸ್.ಸಿ. ಹಾರ್ಟಿಕಲ್ಚರ್ ಹಾಕೋಣ ಎಂದು ನನ್ನ ಆಶೆ ಇದರಿಂದ ನಮ್ಮ ರೈತರಿಗೆ ಬೇಕಾದಷ್ಟು ಅನುಕೂಲ ಸಿಗುತ್ತದೆ. ಪ್ರಾರಂಭದಲ್ಲಿ ಮೊದಲು ವಿದ್ಯೆ ಕಲಿಯಲಿ ಆಮೇಲೆ ಮತ್ತಷ್ಟು ಪ್ರಾರಂಭ ಮಾಡಲಿ ನಮ್ಮ ರೈತರು ಎಂಬ ದೃಷ್ಟಿಯಿಂದ ನಾವು ವಿಚಾರ ಮಾಡಿದೆವು. ಆದರಿಂದ ಬಿ.ಎಸ್.ಸಿ. ಹಾರ್ಟಿಕಲ್ಚರ್ ಕಾಲೇಜು ಅಟ್ ಮೂಡಿಗೆರೆ, ಮಾಡತಕ್ಕಂತಹ ತೀರ್ಮಾನ ಕೂಡ ಹೌದು. ಇದೆ ಅಕಾಡೆಮಿಕ್ ವರ್ಷದಿಂದ ಪ್ರಾರಂಭ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸದಸ್ಯರುಗಳಲ್ಲಿ ಕೆಲವು ತಪ್ಪು ಅಭಿಪ್ರಾಯಗಳು ಇವೆ. ಅಲ್ಲಿ ಇರತಕ್ಕಂಥ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ 4 ಮಾತು ಹೇಳಿದರೆ ಅಲ್ಲಿ ಏತಕೋಸ್ಕರ ಕಾಲೇಜು ತೆಗೆಯುತ್ತಾರೆ ಅನ್ನುವರು ಮಾನ್ಯ ಸದಸ್ಯರಿಗೆ ತಿಳಿಯುತ್ತದೆ. ಸೀದಾ ತೆಗೆದುಕೊಂಡು ಹೋಗಿ ಕೊಡುತ್ತಿದ್ದಾರೆ ಎನ್ನುವ ಭಾವನೆ ಬರುವುದು ಬೇಡ. ಹಾರ್ಟಿಕಲ್ಚರ್ ಕಾಲೇಜಿಗೆ ಸಂಬಂಧಪಟ್ಟಂತೆ ಕಳೆದ ಹತ್ತಾರು ವರ್ಷಗಳಿಂದ ಕೇಳುತ್ತಿದ್ದಾರೆ. ಇನ್‌ಫ್ರಾಸ್ಟ್ರಕ್ಚರ್ ನಿರ್ಮಾಣ ಮಾಡಿದ್ದಾರೆ. ಸುಮಾರು 10 ರಿಂದ 15 ಕೋಟಿ ರೂಪಾಯಿಗಳ ಕಟ್ಟಡಗಳಿವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಮಗೆ ಅದೆಲ್ಲಾ ಗೊತ್ತಾಗಿ ಬಿಟ್ಟಿದೆ. ವಿರೋಧ ಪಕ್ಷದ ನಾಯಕರು ಅಲ್ಲಿಯವರು, ಮುಖ್ಯಮಂತ್ರಿಯವರು ಅಲ್ಲಿಯವರು ರೈತ ಸಂಘದ ಮುಖಂಡರು ಮತ್ತು ಬಿ.ಜೆ.ಪಿ. ಮುಖಂಡರು ಅಲ್ಲಿಯವರೇ, ನಮ್ಮನ್ನು ಯಾರೂ ಈಗ ನೋಡುತ್ತಾರೆ.

(ಗೊಂದಲ)

ಶ್ರೀ ಬಂಗಾರಪ್ಪ : ಮಲ್ಲಾರಿ ಗೌಡರಿಗೆ ಮತ್ತೊಮ್ಮೆ ಅಭಿನಂದನೆಗಳು ನಮ್ಮ ಮಲೆನಾಡಿನ ಒಗ್ಗಟ್ಟನ್ನು ಮತ್ತೊಮ್ಮೆ ಒಡಮೂಡಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರೇ ಈ ಸಂದರ್ಭದಲ್ಲಿ ನನ್ನ ಒಂದು ಯೋಜನೆ ಎಂದರೆ ಅದನ್ನು ನಾವು ಇನ್ನೂ ಕೂಡ ಅಂತಿಮ ತೀರ್ಮಾನ ನಾವು ಮಾಡಿಲ್ಲ. ಆದಷ್ಟು ಬೇಗ ಫಾರೆಸ್ಟ್ ಕಾಲೇಜ್ ಮಾಡಬೇಕು. ಇವತ್ತು ಪಶ್ಚಿಮಘಟ್ಟ ಬಹಳ ಸಂಪದ್ಭರಿತಿವಾಗಿದೆ. ಅಂತಹ ಒಂದು ಪ್ರದೇಶವನ್ನು ನಮ್ಮ ಕರ್ನಾಟಕದಲ್ಲಿ ನಾವು ಹೊಂದಿದ್ದೇವೆ. ಆದ್ದರಿಂದ ನಾವು ಫಾರೆಸ್ಟ ಕಾಲೇಜು ಪ್ರಾರಂಭ ಮಾಡಬೇಕಾಗಿದೆ.

They are all Western Ghat areas.

ನಮ್ಮ ಕೂರ್ಗ್ ಕಾನ್ವಟುಯೆನ್ನಿ ಬ್ಯುಟಿಫುಲ್ ಏರಿಯಾ ಸಕಲೇಶಪುರ ಅಂಡ್ ದೇನ್ ಚಿಕ್ಕಮಗಳೂರು ಜಿಲ್ಲೆ, ನಮ್ಮ ಶಿವಮೊಗ್ಗ ಜಿಲ್ಲೆ, ಕಾರವಾರ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಖಾನಾಪುರ ತಾಲ್ಲೂಕ್ ಆಫ್ ಬೆಳಗಾಂ ಡಿಸ್ಟ್ರಿಕ್ಟ್. ಇಷ್ಟೆಲ್ಲಾ ಒಳಗೊಳ್ಳುತ್ತದೆ. ನಮ್ಮ ಪಶ್ಚಿಮ ಘಾಟ್ಟಗಳ ಸರದೆಯಲ್ಲಿ ಇಲ್ಲಿ ಈಗಾಗಲೇ ಅದ್ಭುತವಾಗಿರತಕ್ಕ ಶ್ರೀ ಗಂಧ ಇರಬಹುದು. ಬೇರೆ ಬೇರೆ ಮರಗಳು ಇರಬಹುದು. ಏನೇ ಇರಬಹುದು. ನಾವು ಕಾಲೇಜನ್ನು ಮಾಡಬೇಕು. ಅನ್ನುವ ವಿಚಾರದಲ್ಲಿ ಆಸೆ ಸರ್ಕಾರಕ್ಕೆ ಇದೆ. ಅಂತಿಮ ತೀರ್ಮಾನ ನಾನು ಈಗಾಲೇ ಹೇಳಲಾರೆ. ಈ ವರ್ಷದಿಂದಲೇ ಪ್ರಾರಂಭ ಮಾಡುವುದಕ್ಕೆ ಸಾಧ್ಯವೇ ಎಂದು ನಾವು ವಿಚಾರ ಮಾಡುತ್ತೇವೆ. ನಿಜ ಹೇಳಬೇಕೆಂದರೆ ಶ್ರೀಮಾನ್ ನಾಣಯ್ಯನವರು ಮೇಲ್ಮನೆ ವಿರೋಧಪಕ್ಷದ ನಾಯಕರು, ಈ ಸಂದರ್ಭದಲ್ಲಿ ಕೂಡ ಅವರು ನನ್ನ ಜೊತೆ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಅಂತಿಮ ತೀರ್ಮಾನವನ್ನು ಸರ್ಕಾರ ಸಧ್ಯದಲ್ಲೇ ಮಾಡುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ. ಇನ್ನು

Reservation for Women - 30% in all the Government Service.

ಅದು ಕೊಡಬೇಕು ಎಂದು, ಮತ್ತೆ ಅಂಗವಿಕಲರಿಗೆ ಸಂಬಂಧ ಪಟ್ಟಂತೆ ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡುತ್ತೇವೆ ಅನ್ನತಕ್ಕ ಮಾತನ್ನು ನಾವು ಹೇಳಿದ್ದೇವೆ. ಮತ್ತೊಮ್ಮೆ ನಾನು ಪುನರುಚ್ಚಾರ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಅಲ್ಲದೆ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರು ಜನ್ಮ ಶತಾಬ್ದಿ ಸಂದರ್ಭದಲ್ಲಿ ನಾವು ಒಂದು ಲಕ್ಷ ಮನೆಗಳು ಮತ್ತು ಬೇರೆ ಬೇರೆ ಕಾರ್ಯಕ್ರಮಗಳನ್ನು ಕೂಡ ನಾವು ಹಮ್ಮಿಕೊಂಡಿದ್ದೇವೆ. ಕೆಲವು ರೂಪಾಯಿಗಳನ್ನು ಇದಕ್ಕಾಗಿ ನಾವು ಇಟ್ಟುಕೊಂಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ: ಒಂದು ಲಕ್ಷ ಮನೆಗಳನ್ನು ಎಷ್ಟು ವರ್ಷದಲ್ಲಿ ಕಟ್ಟಿಸುತ್ತೀರಿ ?

ಶ್ರೀ ಎಸ್. ಬಂಗಾರಪ್ಪ : ಅದನ್ನು ಕೆಲವು ತಿಂಗಳಲ್ಲಿ ಯೋಚನೆ ಮಾಡಿ ಹೇಳುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ : ಸನ್ಮಾನ್ಯ ಅಧ್ಯಕ್ಷರೇ ಒಂದೊಂದು ತಾಲ್ಲೂಕಿಗೆ 20 ರಿಂದ 25 ಲಕ್ಷ ಸರ್ಕಾರರಿಂದ ಹುಡ್ಕೋ ಮನೆಗಳಿಗೆ ಸಂಬಂಧ ಪಟ್ಟಂತೆ ಬಾಕಿ ಬರಬೇಕಾಗಿದೆ. ಇಷ್ಟೊಂದು ಬಾಕಿ ಇಟ್ಟು ಕೊಂಡಿದ್ದೀರಿ. ಅರ್ಧ ಕಟ್ಟಿದ ಮನೆಗಳಿಗೆ ಫೌಂಡೇಷನ್ ಹಾಕಿದ ಮನೆಗಳಿಗೆ ಮೊದಲು ಹಣ ಕೊಡಿ. 20-25 ಲಕ್ಷ ರೂಪಾಯಿ ಬಾಕಿ ಇರುವುದನ್ನು ಮೊದಲು ಕೊಡಿ. ನನ್ನ ತಾಲ್ಲೂಕಿನಲ್ಲೂ 24 ಲಕ್ಷ ಬರಬೇಕು. ಅಲ್ಲಿ ತಾಲ್ಲೂಕಿನೊಳಕ್ಕೆ ಹೋಗುವುದಕ್ಕಾಗುವುದಿಲ್ಲ. ದಯವಿಟ್ಟು ಮೊದಲು ಹಣ ಕೊಡಬೇಕು. ಆ ಮೇಲೆ ನೀವು ಒಂದು ಲಕ್ಷ ಮನೆ ಕಟ್ಟಿಸಿ ಬಹಳ ಸಂತೋಷ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕರೇ, ನಾನ್ನ ತಾಲ್ಲೂಕ್ಕು ಒಂದರಲ್ಲೇ 22 ಲಕ್ಷ ರೂಪಾಯಿಗಳು ಬಾಕಿ ಬರತಕ್ಕಂಥದ್ದು ಇದೆ. ಪ್ಲಿಂಥ್ ಲೆವೆಲ್ ವರೆಗೆ ಕಟ್ಟಿರತಕ್ಕಂಥ ಮನೆಗಳು ಬಿದ್ದ ಹೋಗುತ್ತಿವೆ. 22 ಲಕ್ಷ ರೂಪಾಯಿಗಳು ಒಂದೊಂದು ತಾಲ್ಲೂಕಿಗೆ ಬರಬೇಕು. ಧಾರವಾಡ ಜಿಲ್ಲೆಗೆ ಮೂರು ಕೋಟಿ ಎಂಭತ್ತೋಳು ಲಕ್ಷ ಬಾಕಿ ಇದೆ. ಅದನ್ನಾದರೂ ಸರ್ಕಾರದವರು ಕೊಟ್ಟರೆ ಅರ್ಧಂಬರ್ಧ ಕಟ್ಟಿರತಕ್ಕಂಥ ಮನೆಗಳನ್ನು ಪೂರ್ಣಮಾಡಲು ಅವಕಾಶವಾಗುತ್ತದೆ. ಸರ್ಕಾರದವರು ಆಲೋಚನೆ ಮಾಡುತ್ತಾರೆಯೇ ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಅಧ್ಯಕ್ಷರೇ ನಮಗೆ ಬಂದಿರತಕ್ಕಂಥ ಇನ್ಫಾರ್‌ಮೇಷನ್ ್ರಕಾರ 30 ಕೋಟಿ ರೂಪಾಯಿಗಳನ್ನು ಈ ರೀತಿ ಬಾಕಿ ಕೊಡಬೇಕಾಗಿದೆ. ಇದರ ಬಗ್ಗೆ ಸ್ವಲ್ಪ ಏನಾದರು ವ್ಯವಸ್ಥೆ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ ನಿನ್ನೆ ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಸರ್ಕಾರಕ್ಕೆ ಇದನ್ನೆ ನಾನು ಒತ್ತಿ ಕೇಳಿದ್ದು. 1 ಲಕ್ಷದ 60 ಸಾವಿರ ಮನೆಗಳನ್ನು ಈ ವರ್ಷದಲ್ಲಿ ಕಟ್ಟಿಕೊಡಲಿಕ್ಕೆ ಆಗುತ್ತದೆನ್ನತಕ್ಕಂಥ ಮಾತನ್ನು ರಾಜ್ಯಪಾಲರ ಭಾಷಣ ಮೂಲಕ ತಾವು ಹೇಳಿಸಿದ್ದೀರಿ ಎಂದು ಅದು ಯಾವುದೇ ಕಾರಣದಿಂದಲೂ ಸಹಿತ ಸಾಧ್ಯವಿಲ್ಲ. ಈಗಿನ ವಸ್ತುಪರಿಸ್ಥಿತಿಯಲ್ಲಿ ಯಾವುದೇ ಸರ್ಕಾರವಿದ್ದರೂ ಕೂಡ ಇವತ್ತು ಅದು ಆಗುವುದಿಲ್ಲ. ನಾವು ಎಷ್ಟೇ ಆದ್ಯತೆ ಕೊಡುತ್ತೇವೆ. ಸರ್ಕಾರದಿಂದ ಹಣವನ್ನೆಲ್ಲಾ ಡೈವರ್ಟ್ ಮಾಡುತ್ತೇವೆಂದು ಹೇಳಿದರೂ ಕೂಡ ಅದು ಸಾಧ್ಯವಾಗುವುದಿಲ್ಲ. ಈಗ ನಾನು ತಮಲ್ಲಿ ಮನವರಿಕೆ ಮಾಡಿಕೊಳ್ಳುವುದೇನೆಂದರೆ ಅದು ನಮ್ಮ ಕಾಲದಲ್ಲಿಯೇ ಬಾಕಿ ಆಗಿರಬಹುದು. ಅದಕ್ಕೆ ಕಾರಣಗಳಿದೆ. ಹುಡ್ಕೋ ಸಂಸ್ಥೆಯಿಂದ ತೆಗೆದುಕೊಂಡ ಸಾಲ ಏನಿದೆ ಅದು ನಿರಂತರ ಆಗಿರತಕ್ಕಂಥ ಸಾಲ ನಾವು ಮನೆಯನ್ನು ಕೊಡುವಾಗ ಏನು ಹೇಳಿದ್ದೇವೆ. ಅಂದರೆ ಬೆನಿಫಿಷಿಯರ್ಗ್ಗೆ ಇದು ಪುಕ್ಕಟೆ ಎಂದು ಹೇಳಿಬಿಟ್ಟಿದ್ದೇವೆ. ಆದ್ದರಿಂದ ರೆಕವರಿ ಮಾಡಲಿಕ್ಕೆ ಸಾಧ್ಯವಿಲ್ಲ. ಯಾರು

ಹಣವನ್ನು ಕೊಡುತ್ತಾರೆ? ಯಾವ ಸರ್ಕಾರ ಬಂದರೂ ಸಹಿತ ರೆಕವರಿ ಮಾಡಲಿಕ್ಕೆ ಸಾಧ್ಯವಿಲ್ಲ ಈ ಬಗ್ಗೆ ಹುಡ್ಕೋದವರು ಮತ್ತು ಕೇಂದ್ರ ಸರ್ಕಾದವರಿಗೆ ನಿಮಗೆ ಕೇಳುತ್ತಾರೆ. ಆಗ ನೀವು ಸಚಿವ ಸಂಪುಟದ ಮುಂದೆ ಈ ದುಡ್ಡು ಕಟ್ಟುತ್ತಿರ ಬೇಕಾಗುತ್ತದೆ ಈಗ ನಿಮಗೆ ಉಳಿದಿರುವುದು ಅದೊಂದೆ ಮಾರ್ಗ. ಈಗ ವಸ್ತುಸ್ಥಿತಿ ಏನಿದೆ ತಮ್ಮ ತಾಲ್ಲೂಕ್ಕಿನ್ನು ಸೇರಿಸಿ ನನ್ನ ತಾಲ್ಲೂಕನ್ನು ಸಹಸೇರಿಸಿ ಎಲ್ಲ ತಾಲ್ಲೂಕುಗಳಲ್ಲಿ 250-300ಮನೆಗಳನ್ನು ಬೇರೆ ಬೇರೆ ರೀತಿಯಲ್ಲಿ ಹುಡ್ಕೋ ಸಂಸ್ಥೆಯಿಂದ ಸ್ಪೆಷಲ್ ಕಾಂಪೂನೆಂಟ್, ರೋಜ್ಗಾರ್ಯೋಜನೆ ಹೀಗೆ ಮುನ್ನೂರು ನಾನಾರೂ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಈಗ ಅದಕ್ಕೆಲ್ಲ ಬಾಕಿ ಬಾರದಿರುವುದರಿಂದ ಮತ್ತು ಆಕಸ್ಮಾತ್ತಾಗಿ ಇನ್ನು ಒಂದು ತಿಂಗಳಲ್ಲಿಯೋ ಎರಡು ತಿಂಗಳಲ್ಲಿಯೋ ಮಳೆ ಬಂದರೆ ಪೂರ್ತಿಯಾಗಿ ನಾಶವಾಗಿ ಹೋಗುತ್ತದೆ. ಈಗ ಕಟ್ಟಿರುವ ಮನೆಗಳು ಹಂಚುಹಾಕಿದರೆ, ಕೆಲವೊಂದು ಗೋಡೆಯನ್ನು ಕಟ್ಟಿ ಹಾಗೆಯೇ ಬಿಟ್ಟಿರುತ್ತಾರೆ ನನಗೆ ಗೊತ್ತಿದೆ ಏನೆಂದರೆ ಸರ್ಕಾರದಲ್ಲಿ 44 ಕೋಟಿ ರೂಪಾಯಿಗಳು ಬಾಕಿ ಇದೆ. ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಅದಕ್ಕೆ ಹೇಳಿದ್ದು ತಮಗೆ ಬಹುಶಃ ನನ್ನ ಭಾಷಣದ ವರದಿ ಇನ್ನೂ ಬಂದಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ತಿಂಗಳಲ್ಲಿ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದ್ದಾರೆ ಒಂದು ತಾಲ್ಲೂಕ್ಕಿಗೆ 20-22-30 ಲಕ್ಷ ರೂಪಾಯಿ ಗಳವರೆಗೆ ಬಾಕಿ ಇದ್ದರೆ ಒಂದು ಲಕ್ಷ 20 ಸಾವಿರ 30 ಸಾವಿರ ಹೀಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಅದು ಯಾವ ಕಡೆ ಸಾಲುತ್ತದೆ. ಬಾಕಿ ನಮ್ಮ ಕಾಲದಲ್ಲಿ ಆಗಿರಬಹುದು. ನೀವು ಅದನ್ನು ಮಧ್ಯದಲ್ಲೇ ಕೈ ಬಿಡುವುದಕ್ಕೂ ಆಗುವುದಿಲ್ಲ. ಅದನ್ನು ಕಂಪ್ಲೀಟ್ ಮಾಡಬೇಕಾಗುತ್ತದೆ. ಅದರೆ ಕ್ರೆಡಿಲ್ ನೀವೇ ತೆಗೆದುಕೊಳ್ಳಿ. 1ಲಕ್ಷ 66 ಸಾವಿರ ಮನೆಗಳನ್ನು ಅಷ್ಟನ್ನೂ ನಾವೇ ಕಟ್ಟಿಸಿದ್ದೇವೆಂದು ಬೇಕಾದರೆ ಹೇಳಿ ನಮ್ಮದೇನು ಭಿನ್ನಾಭಿಪ್ರಾಯವಿಲ್ಲ. ಆದರೆ ಈ 40 ಕೋಟಿ ಹಣದಲ್ಲಿ ಕನಿಷ್ಟ ಪಕ್ಷ ಈ ತಿಂಗಳಲ್ಲಿ ಐದುಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೆ, ಎಲ್ಲ ಜಾತಿಯ ಬಡವರಿಗೂ ಮನೆಗಳನ್ನು ಕಟ್ಟಿಸಿಕೊಟ್ಟರೆ ಉತ್ತಮವೆಂದು ನಾನು ಹೇಳುತ್ತೇನೆ. ಅದರ ಬಗ್ಗೆ ತಾವು ಉತ್ತರವನ್ನು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರದಲ್ಲಿ ನಮ್ಮ ಪಾಲಿನ ಹಣವನು ನನಗೆ ಬಂದಿರತಕ್ಕಂಥ ಒಂದು ವರದಿಯ ಪ್ರಕಾರ ಹುಡ್ಕೋಷೇರಿನ ಹಣ ನಮಗೆ ಬಂದಿಲ್ಲವೆನ್ನತಕ್ಕಂಥ ವಿಚಾರ ಅಲ್ಲಿರತಕ್ಕಂಥದ್ದು. ಈಗ ಏನಾಗಿದೆ ಎಂದರೆ ಹಣ ಕೂಡ ಕಟ್ಟುತ್ತಿಲ್ಲ ಅದನ್ನು ಬಾಕಿ ಎಂದು ಬರೆದು ಕುಳಿತುಕೊಳ್ಳತಕ್ಕಂಥ ಪರಸ್ಥಿತಿ ಈಗಾಗಲೇ ಬಂದುಬಿಟ್ಟಿದೆ. ಇದಕ್ಕೆ ಏನಾದರೂ ಇತಿಶ್ರೀ ಹಾಡಬೇಕಲ್ಲ ಅದನ್ನು ನಾನು ವಿಚಾರ ಮಾಡುತ್ತೇನೆ. ಈಗಲೇ ತತ್‌ಕ್ಷಣ ಹೇಳಲಾರೆ, ಏತಕ್ಕೆಂದರೆ ಹೆವಿ ಫೈನಾನ್ಶಿಯಲ್ ಆಸ್ಪೆಕ್ಟ್ ಇದರಲ್ಲಿ ಅಡಗಿದೆ. ಬಾಬಾ ಸಾಹೇಬ್ ಅಂಬೇಡ್ಕರ ಜನ್ಮ ಶತಾಬ್ದಿಯಲ್ಲಿ ತೆಗೆದುಕೊಳ್ಳುತ್ತಿರುವ ಈ ಮನೆಗಳ ಯೋಜನೆಯೇ ಬೇರೆ ಆಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಮುಗಿಯದಿರುವ ಮನೆಗಳನ್ನು ಸಹ ಇದೇ ಯೋಜನೆಯಲ್ಲಿ ಸೇರಿಸಿಕೊಂಡು ಬಿಡಿ. ಇಲ್ಲದಿದ್ದರೆ ನಿಮಗೆ ಕೆಟ್ಟ ಹೆಸರು ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ: ಬೇಡ ಬೇಡ.

ಶ್ರೀ ಬಿ.ಹೆಚ್. ಬನ್ನಿಕೋಡ್: ಮನೆಗಳು ಅಪೂರ್ಣವಾಗಿವೆ. ಮಳೆಗಾಲ ಬಂದರೆ ಬಿದ್ದು ಹೋಗುತ್ತವೆ. ಸರ್ಕಾರದವರು ದುಡ್ಡು ಕೊಡದಿದ್ದರೆ ಬಡವರಿಗೆ ತೊಂದರೆಯಾಗುತ್ತದೆ. ಅದನ್ನು ಪೂರ್ಣ ಮಾಡತಕ್ಕಂಥ ವ್ಯವಸ್ಥೆಯನ್ನು ಮೊದಲು ಮಾಡಿ.

ಶ್ರೀ ಎಸ್. ಬಂಗಾರಪ್ಪ : ಅದು ಒಳ್ಳೆಯ ಸಲಹೆ ಆದರೆ ಈ ಬಗ್ಗೆ ನಾನು ಏನು ಹೇಳುತ್ತೇನೆಂದರೆ ಆದಷ್ಟು ಕುಳಿತುಕೊಂಡು ಚರ್ಚೆ ಮಾಡಿ ಆಮೇಲೆ ತೀರ್ಮಾನ ಮಾಡೋಣ. ಅದರ ಬಗ್ಗೆ ಈಗಲೇ ವಿವರಣೆಗೆ ಹೋಗುವುದು ಬೇಡ. ತತಕ್ಷಣವೇ ತೀರ್ಮಾನ ಮಾಡಲಿಕ್ಕೆ ಬರುವುದಿಲ್ಲ.

ಆಮೇಲೆ ಇದೇ ಸಂದರ್ಭದಲ್ಲಿ ಮೆಡಿಕಲ್ ಚೆಕ್‌ಅಪ್ ಬಗ್ಗೆ ನಾವು ಏನು ಪ್ರಸ್ತಾಪ ಮಾಡಿದ್ದೇವೆ ಅದರ ಬಗ್ಗೆ ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆ. ಆ ಬಗ್ಗೆ ವಿವರಗಳನ್ನು ಇದರಲ್ಲಿ ಕೊಟ್ಟಿಲ್ಲ. ಆ ಸದನದಲ್ಲಿ ಇದಕ್ಕೆ 500 ಕೋಟಿ, ೬೦೦ ಕೋಟಿ ರೂಪಾಯಿ ಖರ್ಚಾಗುತ್ತದೆಂದು ಹೇಳಿದರು. ನಾವು ಒಂದು ಕೋಟಿ ರೂಪಾಯಿಗಳನ್ನು ಈ ಒಂದು ಕಾರ್ಯಕ್ರಮಕ್ಕಾಗಿ ನಾವು ಬಜೆಟ್ಟಿನಲ್ಲಿ ತೆಗೆದಿಟ್ಟಿದ್ದೇವೆ. ಏತಕ್ಕೆ ಇಟ್ಟಿದ್ದೇವೆಂಬುದನ್ನು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ರತಕ್ಕ ಜನರಿಗೆ ಅಲ್ಲೇ ಆಸ್ಪತ್ರೆ ತೆಗೆದು ಔಷಧಿ ಕೊಡುತ್ತೇವೆಂದು ಹೇಳಿಲ್ಲ. ಮೆಡಿಕಲ್ ಚೆಕ್‌ಅಪ್ ಅಲ್ಲೇ ಅಷ್ಟೇ ಟ್ರೀಟ್ಮೆಂಟ್ ಅಲ್ಲ. ಹಳ್ಳಿಯಲ್ಲಿರತಕ್ಕ ಜನರಿಗೆ ಕಾಯಿಲೆಗೆ ಕ್ಯಾನ್ಸರ್ ಬಂದರೆ ಅದು ಗೊತ್ತಾಗುವುದಿಲ್ಲ. ಇವತ್ತಿನ ದಿವಸ ಆ ಒಂದು ಕಾಯಿಲೆಗೆ ಎಷ್ಟೋ ಜನ ಸಿಕ್ಕಿಹಾಕಿಕೊಂಡಿದ್ದಾರೆ. ಆರು ತಿಂಗಳಿಗೊಮ್ಮೆ ಚೆಕ್ ಅಪ್ ಮಾಡಿದರೆ ಎಷ್ಟೋ ಜನ ಜೀವ ಕಳೆದುಕೊಳ್ಳುವುದನ್ನು ತಪ್ಪಿಸಬಹುದು. ಈ ಒಂದು ಚೆಕ್‌ಅಪ್ಗೆ ಅವಿದ್ಯಾವಂತರು, ನಿರ್ಗತಿಕರು ಹೆಚ್ಚಾಗಿ ಬರುತ್ತಾರೆ. ದುಡ್ಡಿದ್ದವರೇನು ಬರುವುದಿಲ್ಲ. ಯಾರು ಮುಂದೆ ಬರುತ್ತಾರೆ ಅವರನ್ನು ಚೆಕ್ ಅಫ್ ಮಾಡಿಕೊಂಡು ಬರುತ್ತಾರೆ. ಕೆಲವು ವಾಲಂಟರಿ ಆರ್ಗನೈಸೇಷನ್‌ಗಳು ಇವೆ. ರೋಟರಿ ಕ್ಲಬ್‌ಗಳು, ಲೈಯನ್ಸ್ ಕ್ಲಬ್‌ಗಳು ಮುಂತಾದವು ಇವೆ. ಅವರೇ ವಹಿಕಲ್ಸ್ ಮೆಡಿಸಿನ್ಸ್ ಎಲ್ಲಾ ಒದಗಿಸುತ್ತಾರೆ. ನಾವು ಒಂದು ಕೋಟಿ ರೂಪಾಯಿ ಇಟ್ಟಿದೇವೆ. ಅಷ್ಟೇ ಒಂದು ತಾಲ್ಲೂಕಿಗೆ ಹೋದರೆ ಬೆಳಗಿನಿಂದ ಸಂಜೆಯೊಳಗೆ ಚೆಕ್‌ಅಪ್ ಕೆಲಸ ಮುಗಿಯಬೇಕು. ವಾಲಂಟರಿ ಆರ್ಗನೈಸೇಷನ್ ವತಿಯಿಂದ ಬರತಕ್ಕ ವೈದ್ಯರು ಮತ್ತು ನಮ್ಮ ಸರ್ಕಾರೀ ವೈದ್ಯರು ಎಲ್ಲ ಸೇರಿ ಒಂದು ತಾಲ್ಲೂಕಿಗೆ ಬೆಳಿಗ್ಗೆ ಹೋಗಿ ಸಂಜೆ ವಾಪಸ್ಸು ಬರುತ್ತಾರೆ ಕ್ಯಾನ್ಸರ್, ಕಿಡ್ನಿ ಟ್ರಬಲ್ ಹಾಗೂ ಹಾರ್ಟ್ ಪೇಷಂಟ್‌ಗಳಿಗೆ ನಾನೇ ಮುಖ್ಯಮಂತ್ರಿಗಳ ಫಂಡ್‌ನಿಂದ 5-10 ಸಾವಿರ ರೂಪಾಯಿಗಳನ್ನು ಬರೆದುಕೊಟ್ಟಿದ್ದೇನೆ. ಇವತ್ತು ಹಳ್ಳಿಯಲ್ಲಿರತಕ್ಕ ಬಡಜನರಿಗೆ ಏನು ಕಾಯಿಲೆ ಇದೆ ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಅವರನ್ನು ಚೆಕ್‌ಅಫ್ ಮಾಡಿದರೆ ಗೊತ್ತಾಗುತ್ತದೆ. ಚೆಕ್ ಅಫ್ ಮಾಡಲಿಕ್ಕೆ ಒಂದು ವ್ಯಾನ್ ಸಾಲದಿದ್ದರೆ ಎರಡು ವ್ಯಾನ್‌ಗಳನ್ನು ಕಳಿಹಿಸಿಕೊಡೋಣ. ನಿಮಗೆ ಇದರಲ್ಲಿ ಅಪನಂಬಿಕೆ ಬರಬಹುದು. ಆದರೆ ನಂಬಿಕೆ ಬರತಕ್ಕ ಕಾರ್ಯಕ್ರಮಗಳು ಇವೆ. ಇದಕ್ಕೇನು ಹೆಚ್ಚು ಹಣ ಖರ್ಚಾಗುವುದಿಲ್ಲ. ಅಷ್ಟೇ ಕಾರ್ರಕ್ರಮಗಳು ಇವೆ. ಇದಕ್ಕೇನು ಹೆಚ್ಚು ಹಣ ಖರ್ಚಾಗುವುದಿಲ್ಲ. ಅಷ್ಟೇ ಹಣದಲ್ಲಿ ವ್ಯವಸ್ಥೆ ಮಾಡುತ್ತೇವೆ ಸ್ವಲ್ಪ ಹೆಚ್ಚು ಕಡಿಮೆ ಆದರೆ ಅಡ್ಜಸ್ಟ್ ಮಾಡಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಈಗಿರತಕ್ಕ ಆಸ್ಪತ್ರೆಗಳೇ ಕೊಳೆತು ನಾರುತ್ತಿವೆ. ಹಳ್ಳಿ ಹಳ್ಳಿಗೆ ಆಸ್ಪತ್ರೆಗಳನ್ನು ತೆಗೆದುಕೊಂಡು ಹೋಗುತ್ತೇವೆಂದರೆ ಏನು ಅರ್ಥ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ಇರತಕ್ಕ ಆಸ್ಪತ್ರೆಗಳನ್ನು ಸರಿ ಮಾಡಿಕೊಂಡು ಹೋಗಬೇಕು. ಇನ್ನು ಕೊನೆಯ ವಿಚಾರ ಪ್ರಸ್ತಾಪ ಮಾಡಿ ನನ್ನ ಮಾತು ಮುಗಿಸುತ್ತಿದ್ದೇನೆ. ಕನ್ನಡ ಮತ್ತು ಸಂಸ್ಕೃತಿಯ ವಿಚಾರ ಹೇಳಿವುದಾದರೆ, ಈ ಬಗ್ಗೆ ಸಂಬಂಧಪಟ್ಟ ಸಚಿವರು ನಾವು ಸೇರಿ ಬೆಂಗಳೂರಿನಲ್ಲಿ ಒಂದು ಸಭೆ ಕರೆಸಿದ್ದೆ ಅದರ ಬಗ್ಗೆ ಬಜೆಟ್ಟಿನಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇವತ್ತಿನ ದಿವಸ ಎಷ್ಟೋ ರಂಗಮಂದಿರಗಳು ಹಾಳಾಗಿವೆ. ಇವತ್ತು ಅವರ ಭಾಷೆ ಸರಿಯಿಲ್ಲ. ಇದನ್ನು ಮಾನ್ಯ ಸದಸ್ಯರು ಅರ್ಥ ಮಾಡಿ

ಕೊಳ್ಳಬೇಕು. ನಾನು ಹುಬ್ಬಳ್ಳಿ ಧಾರವಾಡದಲ್ಲಿ ಉಳಿಯುವಾಗ ನಾಟಕ ನಡೆಯುತ್ತಿದ್ದರೆ ಬೆಳಗಿನ ಜಾವ 3 ಗಂಟೆಯವರೆಗೆ ನಾಟಕ ನೋಡುತ್ತಾ ಕುಳಿತುಕೊಳ್ಳುತ್ತೇವೆ. ಅಲ್ಲಿ ಏನಾಗಿದೆ ಎಂದರೆ ನಾಟಕದ ಕಂಪನಿಗಳು ಉಳಿದುಕೊಳ್ಳುವುದೇ ಕಷ್ಟವಾಗಿದೆ. ಹಿಂದೆ ಅವು ಯಾವ ಮಟ್ಟಕ್ಕೆ ಇದ್ದವು. ಯಾವ ರೀತಿ ಭಾಷೆ ಪ್ರಯೋಗ ಮಾಡುತ್ತಿದ್ದವು ಎಂಬುದನ್ನು ವಿಚಾರ ಮಾಡಿದಾಗ ಇಂದು ಅವು ನಶಿಸಿ ಹೋಗತಕ್ಕ ಪರಿಸ್ಥಿತಿ ಉಂಟಾಗಿದೆ. ಅದನ್ನೆಲ್ಲಾ ಸರಿಪಡಿಸಬೇಕಾಗಿದೆ. ಅವರನ್ನು ಕರೆಸಬೇಕು. ನಾವು ಕುಳಿತುಕೊಳ್ಳಬೇಕು. ಕುಳಿತುಕೊಂಡು ಅವರ ಸಮಸ್ಯೆಯನ್ನು ಪರಿಹರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ತಾವು ಇತ್ತೀಚಿನ ಕನ್ನಡ ಚಿತ್ರಗಳನ್ನು ನೋಡಿರಬೇಕು. ಚಿತ್ರಗಳು ಎಷ್ಟು ಹೊಲಸಾಗಿವೆ ಎಂಬುದನ್ನು ತಾವು ಗಮನಿಸಿರಬಹುದು. ಅದನ್ನು ನೋಡಿದರೆ ಬಹಳ ಕೆಟ್ಟ ಭಾವನೆ ಬರುತ್ತದೆ. ಜನರನ್ನು ಮರಳು ಮಾಡುವುದಕ್ಕೋಸ್ಕರ ಮಾಡುತ್ತಿದ್ದಾರೆಂಬ ಭಾವನೆ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ : ಅದು ಸರಿಯಲ್ಲ. ಉದಾಹರಣೆಗೆ ಹೇಳುವುದಾದರೆ ನಾವು ಸಿಂಗಲ್ ವಿಂಡೋ ಏಜೆನ್ಸಿ ಮಾಡಿದ್ದೇವೆ. ಜನರಿಗೆ ಒಂದು ಲೈಸೆನ್ಸ್ ತೆಗೆದು ಕೊಳ್ಳಬೇಕಾದರೆ, ಒಂದು ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ ಲೋಕೋಪಯೋಗಿ ಹಾಗು ರೆವಿನ್ಯೂ ಅಧಿಕಾರಿಗಳಿಗೆ ಲಂಚ ಕೊಟ್ಟು ಕೊಟ್ಟು ಸಾಕಾಗಿದೆ ಎಂದು ಹೇಳುತ್ತಿದ್ದ ಕಾರಣದಿಂದ ಒಂದು ಯೋಜನೆಯನ್ನು ನಾವು ಅನೌನ್ಸ್ ಮಾಡಿದ್ದೇವೆ.

ಮೈಸೂರು ಸಭೆಯಲ್ಲಿ ಸೇರಿರತಕ್ಕ ತೀರ್ಮಾನಗಳಲ್ಲಿ ಇದು ಕೂಡ ಒಂದು. ನಾವು ಒಂದೇ ದಿನದಲ್ಲಿ ಎಲ್ಲಾ ಮಾಡಿದ್ದೇವೆ ಎಂದು ಹೇಳುವುದಕ್ಕೆ ತಯಾರಾಗಿಲ್ಲ. ಇನ್ನೂ ಮಾಡುವುದು ತುಂಬಾ ಇವೆ. ಈ ಬಗ್ಗೆ ಅನೇಕ ಸಲಹೆಗಳು ಬಂದಿವೆ. ಆ ಡಿಮ್ಯಾಂಡ್ ಬಂದಾಗ ಮಾಡುವುದು ಸಂಬಂಧಪಟ್ಟ ಸಚಿವರು ಅದರ ಬಗ್ಗೆ ಉತ್ತರ ಕೊಡುತ್ತಾರೆ. ಶಿಲ್ಪಕಲೆ, ಜಾನಪದ ಸಾಹಿತ್ಯ ಅಥವಾ ಭರತ ನಾಟ್ಯ ಇರಬಹುದು. ಹಿಂದೂಸ್ತಾನಿ ಸಂಗೀತ ಇರಬಹುದು. ಕರ್ನಾಟಕ ಸಂಗೀತ ಇರಬಹುದು. ಮತ್ತೆ ಹಲವಾರು ಮುಖಗಳನ್ನು ಹೊಂದಿರತಕ್ಕ ಸಮೃದ್ಧಿ ಕನ್ನಡ ಸಂಸ್ಕೃತಿ, ಲಲಿತಕಲೆಗಳು ಇತ್ಯಾದಿ ಇತ್ಯಾದಿ ನಾವು ಇದನ್ನೆಲ್ಲಾ ಬೆಳಸಲೇ ಬೇಕು. ಇದಕ್ಕೆ ಸ್ಕೂಲ್ಸ್ ಮಾಡುವುದಾಗಲೀ ಮತ್ತೊಂದು ಮಾಡುವುದಾಗಲೀ ಮಾಡಬೇಕು. ಈಗ ನಮ್ಮ ಅಮ್ಮಾವ್ರು ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಅವರು ಅಧ್ಯಕ್ಷರಾಗಿರುವ ಚಿತ್ರಕಲಾ ಪರಿಷತ್ತು ಒಳ್ಳೆಯ ಕೆಲಸ ಮಾಡುತ್ತಿದೆ. ಅಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಇಷ್ಟೊಂದು ಅಭಿಮಾನ ಇರುವ ನೀವು ಅಕಾಡೆಮಿ ಅಧ್ಯಕ್ಷರುಗಳನ್ನು ಏತಕ್ಕೆ ಎರಡು ವರ್ಷಗಳಿಂದ ನೇಮಕ ಮಾಡಿಲ್ಲ? ಒಂದು ಅಕಾಡೆಮಿ ಆಗಿಲ್ಲ. ಇಲ್ಲಿಯವರೆಗೂ ನಾವು ಪದೇಪದೇ ಹೇಳಿದ್ದೇವೆ, ಪತ್ರವನ್ನು ಬರೆದಿದ್ದೇವೆ. ಪೊಲಿಟಿಕಲ್ ಡಿಸಿಷನ್ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಇದುವರೆಗೆ ಒಬ್ಬ ಅಧ್ಯಕ್ಷರನ್ನು ಅಕಾಡೆಮಿಗೆ ಮಾಡಿಲ್ಲ. ಮಾಡಿ, ಮಾಡಿ ಎಂದು ಪದೇ ಪದೇ ಹೇಳಿದ್ದೇವೆ. ನಾನೂ ಒತ್ತಾಯ ಮಾಡಿದ್ದೇನೆ. ಯಾವಾಗ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ನಿಜಹೇಳಬೇಕೆಂದರೆ ಕೆಲವಕ್ಕೆ ಅಧ್ಯಕ್ಷರ ನೇಮಕ ಆಗಿದೆ. ಆದರೆ ಪೂರ್ತಿ ಕಾನ್ಸಿಟಿಟ್ಯೂಟ್ ಆಗಿಲ್ಲ. ತಮಗೆ ಗೊತ್ತಿರುವ ಹಾಗೆ. ಉಳಿದಿದ್ದನ್ನು ಬಹಳ ಶೀಘ್ರವಾಗಿ ಮಾಡುತ್ತೇವೆ. ಅಷ್ಟೇ ಸಾಕು.

ಶ್ರೀ ವಾಟಾಳ್ ನಾಗರಾಜ್ : ಶೀಘ್ರ ಎಂಬುದು, ಅತಿ ಶೀಘ್ರ ಎಂಬುದು ಈಗ ಬಂದಿದೆ.

ಶ್ರೀ ಎಸ್. ಬಂಗಾರಪ್ಪ : ಬೇಡ ಎಂದರೆ ಅದನ್ನು ಹಿಂದಕ್ಕೆ ತೆಗೆದುಕೊಂಡು ಬಿಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಇಷ್ಟಕ್ಕೆ ಈ ಮಾತನ್ನು ಹೇಳಿ ಕನ್ನಡ ಸಾಹಿತ್ಯ, ಸಂಸ್ಕೃತಿ ಬಗ್ಗೆ ಸರ್ಕಾರ ಗಮನ ಕೊಡುತ್ತಿದೆ ಎಂದು ಹೇಳಿ ನನ್ನ ಉತ್ತರವನ್ನು ಹೇಳಿ.......

ಶ್ರೀ ಬಸಪ್ಪ ಎಚ್. ಬನ್ನಿ ಕೋಡ್: ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಏನು?

ಅಧ್ಯಕ್ಷರು: ಮುಖ್ಯಮಂತ್ರಿಗಳು ಇನ್ನೂ ಉತ್ತರ ಮುಗಿಸಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹೈಕೋರ್ಟ್ ಪೀಠವನ್ನು ಧಾರವಾಡದಲ್ಲಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಭಾಷಣ ಮುಗಿದಿದ್ದರೆ ಒಂದು ಕಡೆಯಿಂದ ಹೋಗಬಹುದು.

ಅಧ್ಯಕ್ಷರು : ನಾನು ಯಾರಿಗೆ ಹೇಳಿಕೊಳ್ಳಲಿ?

ಶ್ರೀ ಗೋಪಿನಾಥ ಆರ್. ಸಾಂಡ್ರಾ : ಸನ್ಮಾನ್ಯ ಮುಖ್ಯಮಂತ್ರಿಗಳು ಧೀರರಿದ್ದಾರೆ. ದಿಟ್ಟ ನಿರ್ಣಯ ತೆಗೆದುಕೊಳ್ಳುತ್ತಾರೆ ಎಂಬುದನ್ನು ವಿರೋಧ ಪಕ್ಷದವರು ಸಹ ಒಪ್ಪಿಕೊಂಡಿದ್ದೇವೆ. ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ಬಹು ಜನರ ಬೇಡಿಕೆ ಅಲ್ಲಿ ಹೈಕೋರ್ಟ್ ಆಗಬೇಕು ಎಂದು. ಈ ಬೇಡಿಕೆಯನ್ನು ಬೇಡಿ ಬೇಡಿ ನಾವು ಸೊರಗುತ್ತಿದ್ದೇವೆ. ಸಾವಿರಾರು ಕಕ್ಷಿದಾರರು ಬೆಂಗಳೂರಿಗೆ ಬರುವುದಕ್ಕೆ ಆಗದೇ ತಮಗೆ ಏನು ನ್ಯಾಯ ಸಿಗಬೇಕೋ ಅದು ಪಡೆಯುವುದಕ್ಕೆ ಆಗುತ್ತಿಲ್ಲ. ಮುಖ್ಯಮಂತ್ರಿಗಳು ಈಗ ಒಳ್ಳೆಯ ಮೂಡ್‌ನಲ್ಲಿದ್ದಾರೆ. ಅವರು ಮನಸ್ಸು ಮಾಡಿದರೆ ಇವತ್ತೇ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಹುಬ್ಬಳ್ಳಿ ಧಾರವಾಡ ನಗರದಲ್ಲಿ ಹೈಕೋರ್ಟ್ ಪೀಠ ಮಾಡುತ್ತಾರೆಂಬ ವಿಶ್ವಾಸ ನನಗಿದೆ. ದಯಮಾಡಿ ಈ ಬಗ್ಗೆ ತಮ್ಮ ನಿರ್ಣಯವನ್ನು ಕೊಡಬೇಕೆಂದು ಅವರಿಗೆ ನಿಮ್ಮ ಮೂಲಕ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಹಿಂಡಸಗೇರಿ: ಸಾಂಡ್ರಾ ಸಾಹೇಬರು ಹೇಳಿದ ಹಾಗೆ ಅನೇಕ ವರ್ಷಗಳಿಂದ ನಮ್ಮ ಭಾಗದಲ್ಲಿ ಬೇಡಿಕೆ ಇದೆ.

ಅಧ್ಯಕ್ಷರು : ಕರೆಯುತ್ತೇನೆ ಕೂರ್‍ರಿ ಹಿಂಡಸಗೇರಿಯವರೆ, ಕೂತ್ಕೊಳ್ರಿ ನಿಮ್ಮನ್ನೂ ಕರೆಯುತ್ತೇನೆ ಕುನ್ನೂರ್.

ಶ್ರೀ ಡಿ.ಬಿ. ಚಂದ್ರೇಗೌಡ : ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳಿಂದ ಒಂದೆರಡು ವಿವರಗಳನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಚಂದ್ರೇಗೌಡರೆ, ನಾವು ವಿಷಯವನ್ನು ಎತ್ತಿದ್ದೇನೆ. ಈಗಾಗಲೇ ನಮ್ಮ ಬೇಡಿಕೆ ಅವರ ಮುಂದೆ ಇಟ್ಟಿದ್ದೇನೆ. ನಮ್ಮ ಬೇಡಿಕೆಗೆ ಉತ್ತರ ಹೇಳಿದನಂತರ ನೀವು ಬೇರೆ ವಿಷಯ ಮಾತನಾಡುವುದಕ್ಕೆ ಅಡ್ಡಿ ಇಲ್ಲ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಬಯಸುತ್ತೇನೆ. ಇದೇ ವಿಷಯದ ಬಗ್ಗೆ ಮಾತನಾಡಿದರೆ ನಮ್ಮ ಅಭ್ಯಂತರ ಇಲ್ಲ. ಬೇರೆ ವಿಷಯದ ಬಗ್ಗೆ ಮಾತನಾಡಿದರೆ ಮಾತನಾಡಿ....

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಅದಕ್ಕೆ ಪೂರಕವಾಗಿ ಹೇಳುತ್ತಿದ್ದೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ನಮ್ಮ ವಿಷಯದ ಬಗ್ಗೆ ಮಾತನಾಡಿದರು ಅಡ್ಡಿಯಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅದ್ಯಕ್ಷರು ಅಪ್ಪಣೆ ಕೊಟ್ಟಿದ್ದಾರೆ. ನಾನು ನಿಂತಿದ್ದೇನೆ. ನಾನು ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋಗುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಈ ವಿಷಯದ ಬಗ್ಗೆ ಮಾತನಾಡಿದರೆ ನಮ್ಮ ಅಭ್ಯಂತರವೇನೂ ಇಲ್ಲ.

ಶ್ರೀ ಕೆ.ಹೆಚ್. ಪಾಟೀಲ್ : ಅವರು ಏನು ಹೇಳಬೇಕೋ ಹೇಳುತ್ತಾರೆ. ನಂತರ ಅವರಿಗೆ ಸಪೋರ್ಟ್ ಬೇಕಾದರೆ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕಾಗಿಯೇ ಎದ್ದಿದ್ದೇನೆ. ಸರ್ವೋಚ್ಚ ನ್ಯಾಯಾಲಯದ ಒಂದು ಪೀಠವನ್ನು ದಕ್ಷಿಣ ಭಾರತದಿಂದ ಮಾಡಬೇಕು ಎಂಬುದು ಬಹಳ ದಿವಸದಿಂದ ಬೇಡಿಕೆ ಇದೆ. ಸರ್ಕಾರ ಇದರ ಬಗ್ಗೆ ಏನಾದರೂ ಸಮಾಲೋಚನೆ ಮಾಡಿದೆಯೇ?

ಹಾಗೆಯೇ ಉಚ್ಚನ್ಯಾಯಾಲಯ ಪೀಠವನ್ನು ಹುಬ್ಬಳ್ಳಿ-ಧಾರವಾಡದಲ್ಲಿ ಮಾಡಬೇಕೆಂದು. ಸರ್ವೋಚ್ಚ ನ್ಯಾಯಾಲಯ ಪೀಠ ದಕ್ಷಿಣ ಭಾರತದಲ್ಲಿ ಎಂದರೆ ವಿಶೇಷವಾಗಿ ಬೆಂಗಳೂರಿನಲ್ಲಿ ಎಂದು ನಾವು ಕೆಲವು ಸುಪ್ರೀಮ್ ಕೋರ್ಟ್ ಜಡ್ಜಸ್ ಜೊತೆ ಖಾಸಗಿಯಾಗಿ ಮಾತನಾಡಿದಾಗ ಬಹುತೇಕ ಅವರು ಬೆಂಗಳೂರು ನಗರವನ್ನೇ ಒಪ್ಪಿಕೊಳ್ಳುತ್ತಾರೆ. ಇದನ್ನು ನಾನು ಅಧಿಕೃತವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಉಚ್ಚನ್ಯಾಯಾಲಯ ಪೀಠವನ್ನು ಧಾರವಾಡ-ಹುಬ್ಬಳ್ಳಿಯಲ್ಲಿ ಮಾಡಬೇಕೆಂಬ ಬೇಡಿಕೆ ಬಹಳ ದಿವಸಗಳಿಂದ ಇದೆ ಇದಕ್ಕೆ ಸುಪ್ರೀಮ್ ಕೋರ್ಟ್ ಪರವಾನಿಗೆ ಬೇಕೆಂದು ನಿಧಾನವಾಗಿದೆಯೇ ಹೊರತು ಯಾವ ಸರ್ಕಾರಗಳೂ ಇದಕ್ಕೆ ವಿರುದ್ಧ ಇಲ್ಲ. ಈ ಬಗ್ಗೆ ಗೋಪಿನಾಥ್ ಸಾಂಡ್ರಾರವರು 77ರಿಂದ ಒತ್ತಾಯ ಮಾಡುತ್ತಿದ್ದು ಅಷ್ಟೇ ಒತ್ತಾಯವನ್ನು ಬೇರೆಯವರೂ ಮಾಡಿದ್ದಾರೆ, ನಾವೂ ಮಾಡಿದ್ದೇವೆ. ಮತ್ತೆ ಅಕಾಡೆಮಿಗಳ ಅಧ್ಯಕ್ಷರನ್ನು ಯಾವಾಗ ಮಾಡುತ್ತೀರಿ? ಹಾಗೆ ಮತ್ತೊಂದು ಮುಖ್ಯವಾದ ಪ್ರಶ್ನೆ, ಮುಖ್ಯ ಕಾರ್ಯದರ್ಶಿಯವರ ಬಗ್ಗೆ ಉಳಿದ ಕಾಂಟ್ರಾವರ್ಸೀಸ್‌ಗೆ ನಾನು ಹೋಗುವುದಿಲ್ಲ. ಏಕೆಂದರೆ ನಾನು ಹೇಳುವುದನ್ನೆಲ್ಲಾ ಹೇಳಿದ್ದೇನೆ.ಅವರ ಬಗ್ಗೆ ಎನ್‌ಕ್ವಯರಿ ಮಾಡಬೇಕೆನ್ನುವುದು ಹಿಂದೆ ನಿರ್ಣಯವಾದ ವಿಚಾರ. ಆ ಎನ್‌ಕ್ವಯರಿ ಏನಾದರೂ ಮಾಡಿದ್ದೀರೋ, ಮಾಡುತ್ತೀರೋ ಇಲ್ಲ ಹಾಗೇ ಕೈಬಿಟ್ಟಿದ್ದೀರೋ ಎಂಬುದು ನನಗೆ ಬೇಕು. ನಾನು ಅಡ್ವಕೇಟ್ ಜನರಲ್ ಬಗ್ಗೆ ಮಾತನಾಡಿದಾಗ ತಾವು ತಮ್ಮ ಉತ್ತರವನ್ನು ಕೊಟ್ಟಿದ್ದೀರಿ. ಅದರ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. ಆದರೆ ಒಂದು ಪ್ರಶ್ನೆ ಕೇಳುತ್ತೇನೆ. ಇಷ್ಟೊಂದು ದಕ್ಷತೆ ನಾನು ಪ್ರಾಮಾಣಿಕತೆ ವಿಚಾರವನ್ನು ಪ್ರಶ್ನೆ ಮಾಡಿಲ್ಲ. ದಕ್ಷತೆ ಇಷ್ಟೊಂದು ಇದ್ದರೆ ಸೆಂಟ್ರಲ್ ಅಡ್ಮಿನಿಸ್ಟೆಟಿವ್ ಟ್ರಿಬ್ಯುನಲ್ ನಲ್ಲಿ ನಮ್ಮ ವಾದ ಮಾಡುವುದಕ್ಕೆ ಅಟಾರ್ನಿ ಜನರಲ್ ಏಕೆ ಕರೆದುಕೊಂಡು ಬಂದಿರಿ? ಅವರಿಗೆ ಏಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದೀರಿ ಎಂದು ಕೇಳಿದ್ದೇನೆ. ಮತ್ತೆ ಮುಖ್ಯವಾಗಿ ಸೆಂಟ್ರಲ್ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲನಲ್ಲಿ ನೀವು ಆಳುತ್ತಿರಬಹುದು. ಸರ್ಕಾರ ನಮ್ಮದು ಈ ದೇಶದ ಜನದ್ದು ಅದನ್ನು ರಕ್ಷಣೆ ಮಾಡಬೇಕಾದ ಮನುಷ್ಯ ಜಗಳ ಮಾಡಿಕೊಂಡು ಹೊರಗೆ ಬಂದ ಮೇಲೆ ನೀವು ಕೇಂದ್ರದಿಂದ ಕರೆದುಕೊಂಡು ಬಂದಿರಿ. ಅಂದರೆ ನಾನು ಜಗಳ ದೃಷ್ಟಿಯಿಂದ ಇದನ್ನು ಹೇಳಿದ್ದು ನಾನು ಪ್ರಾಮಾಣಿಕತೆ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗಿರಲಿಲ್ಲ. ಸೆಂಟ್ರಲ್ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್, ಇವರು ಹೋಗಿ ವ್ಯಾಜ್ಯ ಮಾಡಿಕೊಂಡು ಬರುತ್ತಾರೆ. ಆಮೇಲೆ ಸೆಂಟ್ರಲ್ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್‌ನಲ್ಲಿ ಇವರಿಂದ

ಶ್ರೀ ಎಸ್. ಬಂಗಾರಪ್ಪ : ಹೊಸ ಪಾಯಿಂಟ್ ಇದು.

ಶ್ರೀ ಡಿ.ಬಿ. ಚಂದ್ರೇಗೌಡ : ಹೊಸ ಪಾಯಿಂಟ್ ಅಲ್ಲ. ಇದನ್ನು ನಾನು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಬೇಕಾದರೆ ತರಿಸಿ ನೋಡಿ. ರಾಮಸ್ವಾಮಿಯವರನ್ನು ಕರೆದುಕೊಂಡು ಬಂದು ವಾದ ಮಾಡಿಸುತ್ತೀರಿ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಮೊದಲನೇ ದಿವಸ ಟ್ರಿಬ್ಯುನಲ್, ಕಾವೇರಿ ಟ್ರಿಬ್ಯುನಲ್ ಕಾವೇರಿ ನ್ಯಾಯ ಮಂಡಲಿ ರಾಜ್ಯಕ್ಕೆ ಬಂದಾಗ ಹಿಂದಿನ ದಿವಸದಲ್ಲಿ ತಾವು ತಮ್ಮ ಹೆಸರಿನಲ್ಲಿ ಭೋಜನ

ಕೂಟ ಕೊಟ್ಟಿದ್ರೆ ನೀವು ಬರಲಿಲ್ಲ. ಕಾರಣ ಏನು ಎಂದು ಪ್ರಶ್ನೆ ಮಾಡುವುದಕ್ಕೆ ನಾನು ಹೋಗಲಿಲ್ಲ. ಅಡ್ವಕೇಟ್ ಜನರಲ್ ಬರಲಿಲ್ಲ. ಹೈಕೋರ್ಟ್ ಜಡ್ಜಸ್ ಬರಲಿಲ್ಲ. ಇದರ ವ್ಯಾಖ್ಯಾದಕ್ಕೆ ಹೋದರೆ ಅದು ದೀರ್ಘವಾಗುತ್ತದೆ. ನೀವು ಊಟ ಕೊಟ್ರೆ. ಯಾರಿಗೆ ಈ ರಾಜ್ಯದ ಒಂದು ಕೋಟಿ ಜನರ ಹಿತವನ್ನು ಕಾಪಾಡಬೇಕೆಂದು ಜವಾಬ್ದಾರಿ ವಹಿಸಿದ್ದೇವೋ ಅವರು ಅಲ್ಲಿಗೆ ಊಟಕ್ಕೆ ಬರುವುದಿಲ್ಲ. ಈ ಬಗ್ಗೆ ನಾನು ಅಬ್ಜೆಕ್ಷನ್ ತೆಗೆದಿದ್ದೆ. ಇದರ ಬಗ್ಗೆ ತಾವು ಏನನ್ನೂ ಹೇಳಿಲ್ಲ. ತಾವು ಹೇಳದೆ ಇದ್ದರೆ ವ್ಯಥೆ ಇಲ್ಲ, ಆದರೆ ನಿಮ್ಮ ಗಮನ ಸೆಳೆಯುಲು ಪ್ರಯತ್ನ ಮಾಡಿದ್ದೇನೆ. ಇನ್ನು ಬಹಳ ಮುಖ್ಯವಾದುದು ಎಂದರೆ, 1 ಲಕ್ಷ ಮನೆ ಕಟ್ಟಿಸಿ ಬಹಳ ಸಂತೋಷ. ಅಡಿಷನಲ್ಲಾಗಿ ಒಂದೊಂದು ರೂಮ್ ಕಟ್ಟಿಸಿ ಸಂತೋಷ. ಆದರೆ ಅರ್ಧ ಮನೆ ಏನು ಕಟ್ಟಿನಿಂತಿದೆ. ಅವುಗಳ ಬಗ್ಗೆ ಪ್ರತಿನಿತ್ಯ ನಿಮಗೂ ರೆಪ್ರೆಸೆಂಟೇಷನ್ ಬಂದಿರಬಹುದು. ನಮ್ಮ ತೀರ್ಥಹಳ್ಳಿ ತಾಲ್ಲೂಕಿನಲ್ಲೇ 18 ಲಕ್ಷ ರೂ ಬಾಕಿ, ಇದೆ. ಅರ್ಧ ಮನೆ ಕಟ್ಟಿದ್ದಾರೆ. ಏನಾದರೂ ಮಾಡಿ ಪೂರೈಸಬೇಕು. ಒಟ್ಟು 44 ಕೋಟಿ ಬಾಕಿ ಇದೆ. ಇದನ್ನು ಯಾವ ರೀತಿ ಬಗೆಹರಿಸುತ್ತೀರೋ ಗೊತ್ತಿಲ್ಲ. ಇನ್ನು 2-3 ತಿಂಗಳಿಗೆ ಮಳೆ ಬಂದರೆ ಎಲ್ಲಾ ನಿರ್ನಾಮವಾಗುತ್ತವೆ. ಈಗಾಗಲೇ ಎರಡೂವರೆಯಿಂದ ಮೂರು ಸಾವಿರದವರೆಗೆ ಖರ್ಚು ಮಾಡಿದ್ದಾರೆ. ಇನ್ನು ಒಂದೂವರೆ ಸಾವಿರ ಕೊಟ್ಟರೆ ಮುಗಿಯುತ್ತದೆ. ಇದನ್ನು ಆದ್ಯತೆ ಮೇಲೆ ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ಮುಖ್ಯ ವಿಚಾರ ಹೆಲಿಕಾಪ್ಟರ್ ಸರ್ಕಾರಕ್ಕೆ ಬಿಳಿಯಾನೆಯಾಗಿದ್ದು, ನಮ್ಮ ಸರ್ಕಾರದ ಮೊದಲ ಕೆಲಸ ಇದನ್ನು ಮಾರಾಟ ಮಾಡತಕ್ಕದ್ದು ಈ ಬಿಳಿಯಾನೆಯನ್ನು ಏನಾದರೂ ಮಾರಾಟ ಮಾಡುತ್ತೀರೋ ಅಥವಾ ಕರಿಯಾನೆಯೆಂದು ವಾಹನವಾಗಿ ಬಳಸುತ್ತೀರೋ?

ಶ್ರೀ ಕೆ.ಹೆಚ್. ಪಾಟೀಲ್ : ನಿಮ್ಮ ಅಭಿಪ್ರಾಯ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ: ನನ್ನ ಅಭಿಪ್ರಾಯ ಕೇಳಿ ನಿಮ್ಮ ಸರ್ಕಾರ ನಡೆಯುವುದಿಲ್ಲ ಸ್ವಾಮಿ.

ನನ್ನ ಅಭಿಪ್ರಾಯವನ್ನು ಕೇಳಿ ಸರಕಾರ ನಡೆಸುವುದಾದರೆ ನನ್ನ ಅಭಿಪ್ರಾಯವನ್ನ ಬೇರೆ ಹೇಳುತ್ತೇನೆ. ಆದರೆ ನೀವೇ ಹೇಳಿದಿರಿ ಇದು ಬಿಳಿಯಾನೆ ಇದನ್ನು ಮಾರುತೇವೆಂದು

ಶ್ರೀ ಹೆಚ್. ಏಕಾಂತಯ್ಯ : ಎಕ್ಸೈಸ್ ಬಾಬಿನಲ್ಲಿ ನಮ್ಮ ಅಭಿಪ್ರಾಯವನ್ನು ಕೇಳುತ್ತೀರಿ, ಯಾವ್ಯಾವ ಅಭಿಪ್ರಾಯಗಳು ತಮಗೆ ಬೇಕೋ ಅದನ್ನು ಕೇಳಿತ್ತೀರಿ.

ಶ್ರೀ ಕೆ.ಹೆಚ್. ಪಾಟೀಲ್ : ವಿರೋಧ ಪಕ್ಷಗಳು ಯಾವಾಗಲೂ ಆಳುವ ಪಕ್ಷದವರಿಗೆ ಅಡ್ವೈಸ್ ಮಾಡಲಿಕ್ಕೆ ಇದೆ. ಆ ಅಡ್ವೈಸ್ ಸರಿಯಿದ್ದಲ್ಲಿ ಅದನ್ನು ತೆಗೆದುಕೊಳ್ಳುತ್ತೇವೆ ಸರಿಯಿಲ್ಲದನ್ನು ಬಿಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಿಮಗೆ ಅನುಕೂಲವಿದ್ದರೆ ತೆಗೆದುಕೊಳ್ಳುತ್ತೀರಿ. ಇಲ್ಲದಿದ್ದರೆ ಬಿಡುತ್ತೀರಿ ಅದು ಅನುಕೂಲಸಿಂಧು ಕೆಲಸ.

ಶ್ರೀ ಡಿ.ಬಿ. ಚಂದ್ರೇಗೌಡ: ಹಿರಿಯ ಅನುಭವೀ ಮಂತ್ರಿಗಳಿಗೆ ನಾನು ಒಂದು ಮಾತನ್ನು ಹೇಳುತ್ತೇನೆ. ನೀವು ನಮ್ಮ ಬುದ್ಧಿ ಕೇಳಲು ಅವಕಾಶವನ್ನೇ ಕೊಡುವುದಿಲ್ಲ. ತೀರ್ಮಾನ ತೆಗೆದುಕೊಳ್ಳುತ್ತೀರಿ ಆಮೇಲೆ ಇಲ್ಲಿ ಬಂದು ನಮಗೆ ಬುದ್ಧಿ ಹೇಳಿ ಎಂದು ಬರುತ್ತೀರಿ. ತಾವು ಹಿಂದೆ ಏನು ತೀರ್ಮಾನ ತೆಗೆದುಕೊಂಡಿರಿ. ನಮ್ಮ ಸರಕಾರ ಮೊದಲು ಈ ಬಿಳಿಯಾನೆಯನ್ನು ಮಾರಾಟ ಮಾಡಬೇಕು ಎಂದು ಹೇಳಿದಿರಿ. ನಂತರ ಮಾನ್ಯ ಮುಖ್ಯಮಂತ್ರಿಗಳು ಬಹಿರಂಗ ಸಭೆಯಲ್ಲಿ ಹೋಗಿ ಇದರ ಉಪಯೋಗ ನನಗೆ ಗೊತ್ತಾಗಿದೆ. ನೀವು ಅನುಮತಿ ಕೊಟ್ಟರೆ

ಉಪಯೋಗಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ಅದಕ್ಕೆ ನಾನು ಕೇಳಿದೆ ಇಲ್ಲದಿದ್ದರೆ ಏನೂ ಕೇಳುತ್ತಿರಲಿಲ್ಲ, ಮೊದಲು ಇದನ್ನು ಬಿಳಿಯಾನೆ ಎಂದು ಹೇಳಿ ನಂತರ ಉಪಯೋಗ ಮಾಡುತ್ತೇವೆಂದು ಏಕೆ ಹೇಳಿದಿರಿ ನಾವೇನಾದರೂ ಹೇಳಿದ್ದವಾ ಮಾರಿ ಎಂದು. ನೀವೇ ತೀರ್ಮಾನ ಮಾಡಿದ್ದೀರಿ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಹೆಲಿಕ್ಯಾಪ್ಟರ್ ಕೊಳ್ಳಲಿಕ್ಕೆ ತಾವೇನಾದರೂ ಟೆಂಡರ್ ಹಾಕುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಪ್ರಯತ್ನ ಮಾಡಿಲ್ಲ. ಇದನ್ನು ಉಪಯೋಗಿಸಿ ಎಂದರೆ ಬೇಡವೆಂದು ನಾನು ಹೇಳುವವನಲ್ಲ. ಆ ಮೇಲೆ ರಾಜ್ಯದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಬಗ್ಗೆ ಇದ್ದಂತಹ ಅಕ್ಟರ್‌ವೇಕ್ಶನ್ ಬಗ್ಗೆ ತಮ್ಮ ಗಮನಕ್ಕೆ ತಂದೆ. ಈ ವಿಚಾರವನ್ನು ಸಹ ತಾವು ಪ್ರಸ್ತಾಪ ಮಾಡಲಿಲ್ಲಾ. ಕೆಎಟಿ ಯವರು ಏನು ಅಬ್ಸರ್ವೇಷನ್ ಮಾಡಿದ್ದರೆ ಡಿಜಿಪಿ ಮತ್ತು ಐಜಿಪಿ ಬಗ್ಗೆ ಅದನ್ನು ಸಹ ತಮ್ಮ ಗಮನಕ್ಕೆ ತಂದಿದ್ದೆ. ನಾನು ಏತಕ್ಕೆ ತಮ್ಮ ಗಮನಕ್ಕೆ ತಂದೆ ಎಂದರೆ ಅವರ ಉದ್ದೇಶ ಏನು ಎಂದರೆ ಯಾವ ಅಧಿಕಾರಿಯನ್ನೇ ಆಗಲೀ ಒಂದು ರೀತಿ ಅವಹೇಳನ ಮಾಡಬೇಕೆಂದಾಗಲೀ ಅಥವಾ ಇನ್ನಾವುದೇ ಕಾರಣದಿಂದ ನಾನು ಇದನ್ನು ಇಲ್ಲಿ ಹೇಳುತ್ತಿಲ್ಲ. ಅತ್ಯಂತ ಎತ್ತರವಾದಂತಹ ಶ್ರೇಷ್ಟ ವಾದಂತಹ ಹುದ್ದೆಯ ಮೇಲೆ ಇಂತಹ ಅಪಾದನೆಗಳು ಬಂದಾಗ ಒಟ್ಟಾರೆ ನಮ್ಮ ಆಡಳಿತಲ್ಲಿ ಒಂದು ರೀತಿಯ ಸ್ಥಗಿತವೆಂದು ಹೇಳುವುದಿಲ್ಲ, ಒಂದು ರೀತಿಯ ಶಂಕೆ ಬರುವುದಕ್ಕೆ ಕಾರಣವಾಗುತ್ತದೆ. ಈ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಎಲ್ಲಾ ಜವಾಬ್ದಾರಿಯನ್ನು ಹೊತ್ತು ನೀವು ಇದನ್ನು ಗಮನಿಸುವುದು ಸೂಕ್ತವೆಂದು ಹೇಳುತ್ತಿದ್ದೇನೆ. ಇದಕ್ಕೆ ತಮ್ಮ ಉತ್ತರ ಬಯಸುತ್ತೇನೆ.

ಶ್ರೀ ಎಂ.ಎಸ್. ಹಿಂಡಸಗೇರಿ: ನಾನು ಮತ್ತು ಸಾಂಡಾರವರು ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡಬೇಕೆಂದು ಪ್ರಸ್ತಾಪ ಮಾಡಿದ್ದೆವು. ಇದಕ್ಕೆ ವಿರೋಧ ಪಕ್ಷದವರೂ ಕೂಡ ಸಹಾಯ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಎರಡು ಸೆಕ್ಷನ್ ಆಗುತ್ತದೆ. ನಾಗಪುರದಲ್ಲಿ ಒಂದು ಅಸೆಂಬ್ಲಿ ಸೆಕ್ಷನ್ ಆಗುತ್ತದೆ. ಅದೇ ರೀತಿ ಉತ್ತರ ಕರ್ನಾಟಕ ಭಾಗದಲ್ಲಿ ಅಸೆಂಬ್ಲಿ ಸೆಕ್ಷನ್ ಅನ್ನು ಮಾಡಬೇಕೆಂದು ನಾನು ನಿನ್ನೆ ಮಾತನಾಡವಾಗ ಹೇಳಿದ್ದೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಹೇಳಲಿಲ್ಲ, ಅದರ ಬಗ್ಗೆ ಅವರ ಗಮನ ಸೆಳೆಯುತ್ತೇನೆ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಬೆಂಚ್‌ನ್ನು ಕೂಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಅರ್ಧ ಭಾಗ ವಿಧಾನಸೌಧವನ್ನೇ ಕೇಳುತ್ತಾರೆ ಅವರಿಗೆ ಅದನ್ನು ಕೊಡುವುದಕ್ಕಾಗುತ್ತದೆಯೇ?

ಶ್ರೀ ಗೋಪಿನಾಥ ಆರ್. [illegible] : ವಿಧಾನಸೌಧದ ಭಾಗವನ್ನು ನಾವು ಕೇಳುವುದಿಲ್ಲ. ಹುಬ್ಬಳ್ಳಿ ಧಾರವಾಡದಲ್ಲಿ [illegible] ವಿಧಾನ ಸೌಧವಾಗಬೇಕೆಂದು ಕೇಳುತ್ತಿದ್ದೇವೆ. ಇದನ್ನು ಕಸಿದುಕೊಂಡು ಹೋಗುವುದಿಲ್ಲ.

ಶ್ರೀ ಎಸ್.ಎಸ್. ಭೀಮಣ್ಣನವರು : ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಬೆಳಗಾಂನ ಕೇಸ್‌ಗಳು ಬಹಳವಾಗಿ ಹೈಕೋರ್ಟಿನಲ್ಲಿ ಪೆಂಡಿಂಗ್ ಇವೆ. ಸಿವಿಲ್ ಕೇಸಸ್ ಹಾಗೂ ಕ್ರಿಮಿನಲ್ ಕೇಸ್‌ಸಗಳು ಬಹಳ ಪೆಂಡಿಂಗ್ ಇವೆ. ಬಹಳಷ್ಟು ಹೈಕೋರ್ಟ ಜಡ್ಜಸ್ ಬೆಳಗಾಂನಿಂದ ಬಂದಿದ್ದಾರೆ. ವಕೀಲರೂ ಕೂಡ ಬೆಳಗಾಂನಲ್ಲಿ ಹೆಚ್ಚು ಇದ್ದಾರೆ. ಬೆಳಗಾಂನಲ್ಲಿ ಒಂದು ಹೈಕೋರ್ಟ್ ಬೆಂಚ್ ಸ್ಥಾಪನೆಯಾಗಬೇಕೆಂದು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಶ್ರೇಷ್ಠ ನ್ಯಾಯಾಲಯದ ಆದೇಶದ ಪ್ರಕಾರ ಸುಮಾರು 48,500 ಹುದ್ದೆಗಳನ್ನು ಖಾಯಂ ಮಾಡಿದ್ದಾರೆ. ಅದರಲ್ಲಿ ಹರಿಜನ - ಗಿರಿಜನರಿಗೆ ಬರಬೇಕಾದ 8 ಸಾವಿರ ಹುದ್ದೆಗಳನ್ನು ಇದುವರೆಗೆ ಕೊಟ್ಟಿಲ್ಲ. ಕೊಡದಿದ್ದರೆ ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಅದನ್ನು ಬ್ಯಾಕ್ಲಾಗ್ ಎಂದು ಇಟ್ಟು ಮುಂದೆ ರಿಕ್ರೂಟ್ ಮಾಡುವಾಗ ಅವರಿಗೆ ಅವಕಾಶ ಮಾಡಿಕೊಡುತ್ತೀರಾ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಭರವಸೆಯನ್ನು ಕೊಡಬೇಕು. ಡಾ: ಅಂಬೇಡ್ಕರ್‌ರವರ ಜನ್ಮ ಶತಾಬ್ದಿಯ ವರ್ಷದಲ್ಲಿ ಹರಿಜನ-ಗಿರಿಜನರಿಗೆ ಕೊಡತಕ್ಕ ಮನೆಗಳಲ್ಲಿ ಹುಡ್ಕೋ ಮನೆಗಳನ್ನು ಸೇರಿಸಿಕೊಂಡು ಕೊಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ದಯಮಾಡಿ ಇದನ್ನು ಕ್ಲಬ್ ಮಾಡಬಾರದು. ವಿಶೇಷ ಘಟಕ ಯೋಜನೆಯಲ್ಲಿರತಕ್ಕ ಹರಿಜನರಿಗೆ ಜನರ ಹಣ ಅದನ್ನು ಅವರಿಗಾಗಿಯೇ ಮೀಸಲಾಗಿಟ್ಟಿರುವುದರಿಂದ ಅದಕ್ಕೆ ಬೇರೆಯವರನ್ನು ಸೇರಿಸದೇ ಇರತಕ್ಕ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಅದರ ಬಗ್ಗೆ ಸಮರ್ಪಕವಾದ ಭರವಸೆಯನ್ನು ನಮ್ಮ ನಾಯಕರು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಸುಮಾರು 2 ಗಂಟೆಗಳ ಕಾಲ ನಾನು ಈ ಸದನದಲ್ಲಿ ಮಾತನಾಡಿದ್ದೇನೆ. ನಾನು ಮಾತನಾಡಿದ ಒಂದು ವಿಷಯಕ್ಕೂ ಅವರು ಉತ್ತರ ಹೇಳಲಿಲ್ಲ. ಎನ್‌ಜಿಇಎಫ್‌ನಲ್ಲಿ ಮೂರು ವರದಿಗಳಿವೆ. ಒಂದು ಲೋಕಾಯುಕ್ತದಿಂದ ಬಂದಿರತಕ್ಕ ವರದಿ. ಇನ್ನೊಂದು ಜಯರಾಮ್‌ರವರು ವಿಚಾರಣೆ ನಡೆಸಿರತಕ್ಕ ವರದಿ. ಮತ್ತೊಂದು ಸದನ ಸಮಿತಿಯ ವರದಿ ಈ ಮೂರು ವರಿದಿಗಳಿವೆ. ಈ ಮೂರು ವರದಿಗಳಲ್ಲೂ ಬಹಳ ಗುರುತರವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅಪಾದನೆಗಳು ಕೂಡ ಅವುಗಳಲ್ಲಿ ಇವೆ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಮೈಸೂರು ಪೇಪರ್ ಮಿಲ್ಸ್ ಅಲ್ಲಿ ನಡೆದಿರತಕ್ಕ ದುರ್ವ್ಯವಹಾರದ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದರ ಬಗ್ಗೆ ತಾವೇನು ಹೇಳುತ್ತೀರಿ? ಅಷ್ಟೆ ಅಲ್ಲದೆ ಒಂದು ಸಣ್ಣ ಕಂಪನಿ ಆದ ಕಿಯೋನಿಕ್ಸ್, ಬಗ್ಗೆ ಅಲ್ಲಿ ಇತ್ತೀಚೆಗೆ ಸದನದ ಸಮಿತಿ ಒಂದು ವರದಿಯನ್ನು ಕೊಟ್ಟಿದೆ. ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕಟರ್ ರವರು ಯಾವ ರೀತಿ ನಡೆದುಕೊಂಡಿದ್ದಾರೆ ಎಂಬ ಬಗ್ಗೆ ತಿಳಿಸಿದ್ದಾರೆ ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಮತ್ತು ಪಬ್ಲಿಕ್ ಅಂಡರ್ಟೇಕಿಂಗ್‌ನ್ನ ಆಡಳಿತ ನಡೆಸುವುದಕ್ಕೆ ಅಡ್ಮಿನಿಸ್ಟ್ರೇಟಿವ್ ಸರ್ವೀಸಸ್ ರೀತಿಯಲ್ಲಿ ಟೆಕ್ನೋಕ್ರಾಟ್ಸ್‌ನ ಒಂದು ಕೇಡರ್ ಮಾಡಿ ಅಂತಹ ಒಂದು ಟೀಮನ್ನು ಬಿಲ್ಡಪ್ ಮಾಡಿ ಅದರ ಮಾಲೀಕ ಈ ಕಾರ್ಖಾನೆಗಳನ್ನು ನಡೆಸುವುದಕ್ಕೆ ಅವರಿಗೆ ಜವಾಬ್ದಾರಿಯನ್ನು ವಹಿಸಿದರೆ ಸೂಕ್ತವಾಗುತ್ತದೆ.

ಏಕೆಂದರೆ ಇವತ್ತು ಖಾಸಗಿ ರಂಗಗಳಲ್ಲಿರತಕ್ಕ ಕಾರ್ಖಾನೆಗಳಲ್ಲಿ ಇದು ನಡೆಯುತ್ತಿದೆ. ಮತ್ತು ಖಾಸಗಿರಂಗದಲ್ಲಿ ಅನೇಕ ಉದ್ಯಮಗಳು ಲಾಭದಾಯಕವಾಗಿ ನಡೆಯುತ್ತಿವೆ. ನಮ್ಮ ಉದ್ಯಮಗಳು ಏನಾಗಿವೆ ಅಂದರೆ 2 ಸಾವಿರ ಕೋಟಿ ಚಿಲ್ಲರೆ ಬಂಡವಾಳವಿರತಕ್ಕ ಸಾರ್ವಜನಿಕ ಉದ್ಯಮಗಳಲ್ಲಿ ಕೇವಲ 40 ಲಕ್ಷ ರೂಪಾಯಿ ಮಾತ್ರ ಲಾಭ ಬಂದಿದೆ. ಕೆಲವು ಕಂಪನಿಗಳಲ್ಲಿ ಷೇರು ಬಂಡವಾಳವೇ ನಾಪತ್ತೆಯಾಗಿರತಕ್ಕದ್ದು ಇದೆ. ಆದ್ದರಿಂದ ತಾವು ಟೆಕ್ನೋಕ್ರಾಟ್ಸ್ ಒಂದು ಕೇಡರ್‌ನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ದಯವಿಟ್ಟು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ಕುನ್ನೂರು: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಧಾರವಾಡ ಜಿಲ್ಲೆಯ ಬಗ್ಗೆ ಮಾನ್ಯ ಗೋಪಿನಾಥ ಸಾಂಡ್ರಅವರು ಮತ್ತು ಹಿಂಡಸಗೇರಿಯವರು

ಹೇಳಿದ್ದಾರೆ ಅದೇ ರೀತಿಯಲ್ಲಿ ವಿರೋಧಪಕ್ಷದ ನಾಯಕರು ಕೂಡ ಹುಬ್ಬಳ್ಳಿಯಲ್ಲಿ ಶ್ರೇಷ್ಠ ನ್ಯಾಯಾಲಯದ ಪೀಠವನ್ನು ತೆಗೆಯಲಿಕ್ಕೆ ಅಡ್ಡಿಯಿಲ್ಲವೆನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ಹುಬ್ಬಳ್ಳಿ ಉತ್ತರ ಕರ್ನಾಟಕದ ಮಧ್ಯವರ್ತಿ ಸ್ಥಳವಾಗಿದೆ. ಕೇಂದ್ರ ಸರ್ಕಾರ ನೇಮಿಸಿದ ಜಸವಂತ್‌ಸಿಂಗ್ ಕಮಿಷನ್ ಸಹ ಹುಬ್ಬಳ್ಳಿಯಲ್ಲಿ ಉಚ್ಚನ್ಯಾಯಾಲಯದ ಪೀಠವನ್ನು ತೆಗೆಯಲಿಕ್ಕೆ ಅಡ್ಡಿಯಿಲ್ಲವೆಂದು ಶಿಫಾರಸು ಮಾಡಿದ್ದಾರೆ. ಆ ಕಾರಣದಿಂದ ನಾನು ತಮ್ಮ ಮುಖಾಂತರ ಮುಖ್ಯಮಂತ್ರಿಗಳಲ್ಲಿ ಹುಬ್ಬಳ್ಳಿಯಲ್ಲಿ ಉಚ್ಚ ನ್ಯಾಯಾಲಯವನ್ನು ತೆಗೆಯಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಜೊತೆಗೆ ಒಂದು ತಾಲ್ಲೂಕಿನಲ್ಲಿ ಜನತಾ ಮನೆಗಳನ್ನು ಕಟ್ಟಲಿಕ್ಕೆ 1 ಸಾವಿರ ಮನೆ ನಿವೇಶನವನ್ನು ಕೊಡುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಆರ್ಥಿಕವಾಗಿ ಹಿಂದುಳಿದವರಿಗೂ ಸಹ ಕೆಲವು ಪರ್ಸೆಂಟೇಜ್ ನಿಗದಿಪಡಿಸಿ ಅವರಿಗೂ ಮನೆಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕೆ ಬೇಕಾದ ಭೂಮಿಯನ್ನು ದಾನಿಗಳು ಕೊಡಲಿಕ್ಕೆ ಮುಂದೆ ಬರಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಸಲಹೆ ಮಾಡಿದ್ದಾರೆ. ಅಂತಹ ದಾನಿಗಳು ಉತ್ತರ ಕರ್ನಾಟಕ ಭಾಗದಲ್ಲಿದ್ದಾರೆ. ಅಂತಹ ದಾನಿಗಳು ಮುಂದೆ ಬರಲಿಕ್ಕೆ ನಾವು ಕೂಡ ವ್ಯವಸ್ಥೆ ಮಾಡುತ್ತೇವೆ. ಜನತಾ ಕಾಲೋನಿಗಳನ್ನು ಏನು ಮಾಡುತ್ತೀರೀ ಅದಕ್ಕೆ ಯಾರೂ ಭೂಮಿಯನ್ನು ದಾನವಾಗಿ ಕೊಟ್ಟಿರುತ್ತಾರೆ. ಅಂತಹವರ ಹೆಸರನ್ನು ಆ ಕಾಲೋನಿಗೆ ನಾಮಕರಣ ಮಾಡಲಿಕ್ಕೆ ಅಡ್ಡಿಯಿಲ್ಲ ಎಂದು ಸರ್ಕಾರ ಅದರ ಬಗ್ಗೆ ಒಂದು ಆದೇಶವನ್ನು ಮಾಡಿದರೆ ಒಳ್ಳೆಯದಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀಮತಿ ಮೋಟಮ್ಮ: ನಿನ್ನೆ ನಾನು ಮಾತನಾಡಬೇಕಾದರೆ ಈಗ ಡಾ. ಅಂಬೇಡ್ಕರ್ ಅವರ ಜನ್ಮಶತಾಬ್ಧಿಯನ್ನು ಆಚರಿಸತಕ್ಕಂಥ ಸಂದರ್ಭದಲ್ಲಿ ಈಗೇನು ಮುಕ್ತ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತಿದ್ದೇವೆ. ಅದಕ್ಕೆ ಡಾ. ಅಂಬೇಡ್ಕರ್ ಅವರ ಹೆಸರನ್ನು ಇಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡಿದ್ದೇನೆ. ಇದರ ಜೊತೆಗೆ, ಇದೇ ಸಂದರ್ಭದಲ್ಲಿ ನಾವು ಸುಮ್ಮನೆ ಹಾಸ್ಟೆಲ್‌ಗಳನ್ನು ತೆರೆಯುತ್ತೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಇದರಿಂದ ಏನೂ ಪ್ರಯೋಜನ ಇಲ್ಲ. ಕೊನೆಯ ಪಕ್ಷ ಡಿವಿಜನಲ್ ಲೆವಲ್‌ನಲ್ಲಿ ಒಂದೊಂದು ಸೈನಿಕ ಶಾಲೆ ಟೈಪ್‌ನಲ್ಲಿ ಅಂಬೇಡ್ಕರ್‌ರವರ ಹೆಸರಿನಲ್ಲಿ ರೆಸಿಡೆನ್ಶಿಯಲ್ ಶಾಲೆಯನ್ನು ತೆರೆಯಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಷಫಿ ಅಹಮ್ಮದ್ : ಮಾನ್ಯ ಅಧ್ಯಕ್ಷರೇ, ತುಮಕೂರಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಹನ್ನೆರಡುವರೆ ಕೋಟಿ ರೂಪಾಯಿಗಳ ಎಸ್ಟಿಮೇಟನ್ನು ಸರ್ಕಾರಕ್ಕೆ ಸಬ್‌ಮಿಟ್ ಮಾಡಿದ್ದಾರೆ. ಇದರ ಬಗ್ಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ನ್ನು ಕೊಡುವ ಬಗ್ಗೆ

ಅಧ್ಯಕ್ಷರು: ಗವರ್ನರ್ ಅಡ್ರೆಸ್‌ನಲ್ಲಿ ಇದೆಲ್ಲ ಎಲ್ಲಿ ಬರುತ್ತದೆ? ಬಜೆಟ್ ಚರ್ಚೆಯಲ್ಲಿ ನಿಮ್ಮನ್ನು ಕರೆಯುತ್ತೇನೆ. ಆಗ ಇದನ್ನು ಹೇಳಿ.

ಶ್ರೀ ಷಫಿ ಅಹಮ್ಮದ್ : ವಿದ್ಯುಚ್ಛಕ್ತಿ ವೋಲ್ಟೇಜ್ ಇಂಪ್ರೂವ್‌ಮೆಂಟ್ ಬಗ್ಗೆ ಹೇಳಿದ್ದೇನೆ. ಕೂಡಲೇ ಸ್ಟೆಬಿಲೈಜರ್ಸ್ ಸಂಪರ್ ಆಗಬೇಕೆಂದು ಹೇಳುತ್ತೇವೆ. ಇದರಿಂದ ಸರಿಯಾಗಿ ವಿದ್ಯುತ್ ಸರಬರಾಜು ಮಾಡಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಮಾಜಿ ಮುಖ್ಯಕಾರ್ಯದರ್ಶಿಯವರ ಬಗ್ಗೆ ಪ್ರಸ್ತಾಪ ಮಾಡಿದ್ದೆ ಅದರ ಬಗ್ಗೆ ಸ್ವಲ್ಪ ಹೇಳಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ : ಕಳೆದ 15-20 ವರ್ಷಗಳಿಂದ ರಾಜ್ಯದಲ್ಲಿ ಒಂದಲ್ಲ ಒಂದು ಭಾಗದಲ್ಲಿ ಕ್ಷಾಮ ಬರುತ್ತಿದೆ.

ಅಧ್ಯಕ್ಷರು : ಅದನ್ನು ಚರ್ಚೆ ಮಾಡಿದ್ದೇವಲ್ಲ?

ಶ್ರೀ ಕೆ.ಹೆಚ್. ಹನುಮೇಗೌಡ : ಒಂದು ನಿಮಿಷ ಸ್ವಾಮಿ, ಒಂದು ಪಾಯಿಂಟ್ ಕೇಳಿಬಿಡುತ್ತೇನೆ. ಕಳೆದ ಆರೇಳು ವರ್ಷಗಳಿಂದ ನಿರಂತರವಾಗಿ ಈ ಕ್ಷಾಮ ಬರುತ್ತಿದೆ. ಕ್ಷಾಮ ಬಂದಾಗ ಒಂದಿಷ್ಟು ದುಡ್ಡು ಕೊಡುತ್ತಾರೆ ಬಡವರಿಗೆ ಒಂದಿಷ್ಟು ಕೆಲಸ ಸಿಗುತ್ತದೆ. ಕೆಲವರು ದನಕರುಗಳನ್ನು ಮಾರಿ ಬೇರೆ ಕಡೆಗೆ ಹೋಗುವ ಪರಿಸ್ಥಿತಿ ಕೂಡ ಉಂಟು. ಇಂತಹ ನಿರಂತರವಾಗಿ ಕಾಡತಕ್ಕಂಥ ಈ ಸಮಸ್ಯೆಗೆ ಯಾವುದಾದರೂ ಒಂದು ಶಾಶ್ವತವಾದ ಪರಿಹಾರ ಕಂಡು ಹಿಡಿಯುವುದಕ್ಕೆ ಕೊನೆಪಕ್ಷ ಕ್ಷಾಮ ಪರಿಹಾರದ ಬೋರ್ಡ್ ಅಂತ ಏನಾದರೂ ಮಾಡಿ ಅಲ್ಲಿಗೆ ತಜ್ಞರನ್ನು ಹಾಕಿ, ಈ ನಿರ್ಭಾಗ್ಯ ಜನರನ್ನು ಈ ಕ್ಷಾಮದ ದವಡೆಯಿಂದ ಬಿಡುಗಡೆ ಮಾಡುವುದಕ್ಕೆ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈ ದೇಶದ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಇದನ್ನು ಮಾಡಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಗಡಿಭಾಗದ ಪ್ರದೇಶಗಳ ಅಭಿವೃದ್ಧಿಗಾಗಿ ಎಂದು ಹೇಳಿ ಹಿಂದಿನ ಆಯವ್ಯಯದಲ್ಲಿ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಇದನ್ನು ಜಾಸ್ತಿ ಮಾಡಿ ಕನಿಷ್ಟ 25 ಕೋಟಿಯಾದರೂ ಕೊಡಬೇಕು. ಮುಂದಿನ ವರ್ಷಕ್ಕೆ 10 ಕೋಟಿ ಎಂದು ಬಿಡುಗಡೆ ಮಾಡಿದ್ದೀರಿ. ನಮ್ಮಲ್ಲಿ ಒಟ್ಟು 37 ಗಡಿ ಪ್ರದೇಶಗಳು ಇದ್ದು ಈ ಹತ್ತು ಕೋಟಿ ಏನೂ ಸಾಕಾಗುವುದಿಲ್ಲ. ಆದ್ದರಿಂದ ಕಳೆದ ವರ್ಷ ಖರ್ಚಾಗದೆ ಉಳಿದದ್ದನ್ನು ಸೇರಿಸಿ 25 ಕೋಟಿಯಾದರೂ ತಾವೂ ಕೊಡಬೇಕು. ಆಮೇಲೆ ಬೆಳಗಾವಿ ಬಗ್ಗೆ ಎಲ್ಲರೂ ಮಾತನಾಡುತ್ತೇವೆ. ಬೆಳಗಾವಿ ನಗರ ಮತ್ತು ಆ ಜಿಲ್ಲೆಗೆ ವಿಶೇಷವಾದಂಥ ಗಮನ ಕೊಡಬೇಕು. ತಮಗೆ ಹೇಳುವುದಾರೆ, ಕನ್ನಡ ಬಲ್ಲಂಥ ಅಧಿಕಾರಿಗಳು ಅಲ್ಲಿಗೆ ಹೋದರೆ ಆರಾರು ತಿಂಗಳಿಗೆ ಬದಲಾವಣೆಯಾಗುತ್ತಾರೆ. ಮೊನ್ನೆ ಒಬ್ಬರು ಕನ್ನಡಾಭಿಮಾನಿ ಅಧಿಕಾರಿ, ಕುಲಕರ್ಣಿ ಅಂತ ಇದ್ದರು, ಅವರನ್ನು ಆರು ತಿಂಗಳಿಗೇ ಬದಲಾವಣೆ ಮಾಡಿದರು. ಆ ಪ್ರದೇಶದಲ್ಲಿ ಹಿಂದೆ ಶ್ರೀ ನಾರಾಯಣ ಅಂತ ಡಿ.ಸಿ.ಪಿ. ಇದ್ದರು. ಇವರು ಯಾವುದೋ ಕೇಸಿನಲ್ಲಿ ಸಿಕ್ಕಿಕೊಂಡಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ನಿಜವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದಂಥ ವ್ಯಕ್ತಿ ಇವರು. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಈ ಭಾಗಕ್ಕೆ ಯಾರೇ ಆಗಲಿ ಕನ್ನಡದ ಬಗ್ಗೆ ಅಭಿಮಾನ ಇರತಕ್ಕಂಥ ಅಧಿಕಾರಿಗಳನ್ನು ಹಾಕತಕ್ಕದ್ದು ತಮ್ಮ ಕರ್ತವ್ಯ. ಇದರ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆಯೇ ಎನ್ನುವುದು ಒಂದು ಮತ್ತು ಉಚ್ಚ ನ್ಯಾಯಾಲಯ ಹುಬ್ಬಳ್ಳಿ-ಧಾರವಾಡದಲ್ಲಿ ಕೇಳುತ್ತಿದ್ದಾರೆ. ನಾನು ಇದನ್ನು ಬೆಳಗಾವಿಯಲ್ಲಿ ಮಾಡಿ ಎಂದು ಹೇಳುತ್ತೇನೆ. ಏಕೆಂದರೆ ಇದು ಗಡಿಪ್ರದೇಶ ಮತ್ತು ಅಲ್ಲಿ ಆದರೆ ಗಡಿಭಾಗದ ಭದ್ರತೆ ಉಳಿಯುತ್ತದೆ ಮತ್ತು ಜನತೆಗೆ ಒಂದು ನಂಬಿಕೆ ಇರುತ್ತದೆ. ಇದಕ್ಕೆ ನನ್ನ ಸ್ನೇಹಿತರು ಒಪ್ಪಲಿ ಎಂದು ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ಕೊನೆಯದಾಗಿ, ಆಗಸ್ಟ್ 15ನೇ ತಾರಿಖು ಸ್ವಾತಂತ್ರೋತ್ಸವ ದಿನಾಚರಣೆ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಈ ಧ್ವಜಾರೋಹಣ ಮಾಡತಕ್ಕಂಥಾದ್ದು.

ಅಧ್ಯಕ್ಷರು: ಸ್ವಾಮಿ ವಾಟಾಳ್ ನಾಗರಾಜ್ ಸಾಹೇಬರೇ, ನಿಮ್ಮದು ಭಾಷಣ ಆಯಿತು. ಏನಾದರೂ ಕೊನೆಯಲ್ಲಿ ಕ್ಲಾರಿಫಿಕೇಶನ್ ಕೇಳುತ್ತಾರೆ ಎಂದರೆ, ಇದು ಮರಿ ಭಾಷಣ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಇದು ಇಡೀ ರಾಜ್ಯದ ಎಲ್ಲ ಶಾಸಕರಿಗೆ ಸಂಬಂಧಪಟ್ಟಿದ್ದು. ಒಂದೇ ಮಾತಲ್ಲಿ ಮುಗಿಸುತ್ತೇನೆ ಸ್ವಾಮಿ.

ಈಗ ತಹಶೀಲ್ದಾರ್ ರವರು ಧ್ವಜಾರೋಹಣ ಮಾಡುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಏನಾದರೂ ವ್ಯವಸ್ಥೆಯಾಗಬೇಕು. ಅಲ್ಲಿ ಚುನಾಯಿತ ಪ್ರತಿನಿಧಿಗಳು ಇದ್ದರೂ, ತಹಶೀಲ್ದಾರ್‌ರವರು ಧ್ವಜಾರೋಹಣ ಮಾಡುವುದು ಸರಿಯೇ?

ಅಧ್ಯಕ್ಷರು : ಮುಂದೆ ಈ ಧ್ವಜಕ್ಕೆ ಸಂಬಂಧಪಟ್ಟ ಬಿಲ್ ಬರುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾನು ಒಂದು ರೆಸುಲ್ಯೂಷನ್ ಕಳುಹಿಸಿದ್ದೆ ಅದನ್ನು ಇಲಾಖೆಯವರು ತಕರಾರು ಮಾಡಿ ಕಳುಹಿಸಿದ್ದಾರೆ. ಪ್ರತಿ ತಾಲ್ಲೂಕಿನಲ್ಲಿ ಶಾಸಕರು ಧ್ವಜರೋಹಣ ಮಾಡಬೇಕು. ಈ ಬಗ್ಗೆ ನಿಯಮ ತಿದ್ದುಪಡಿಯಾಗಬೇಕೆಂದು ನಿರ್ಣಯ ಕಳಿಸಿಕೊಟ್ಟಿದೆ. ಅದು ಏನಾಯಿತು?

ಶ್ರೀ ಎಂ.ಪಿ. ವೆಂಕಟೇಶ್ : ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲ್ಲೂಕನ್ನು ಮಹಿಳಾ ಸ್ವಂಸ್ಥೆಯವರು ಗಡಿ ಅಭಿವೃದ್ಧಿಗಾಗಿ ತೆಗೆದುಕೊಂಡಿದ್ದಾರೆ. ಈ ಗಡಿ ಅಭಿವೃದ್ಧಿಗೋಸ್ಕರ ತಾವು 9 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಮೈಸೂರು ಮಹಿಳಾ ಸಂಸ್ಥೆಯವರು ಈ ಗಡಿ ಅಭಿವೃದ್ಧಿಗಾಗಿ, 25ಲಕ್ಷ ರೂಪಾಯಿ ಕೊಡುತ್ತೇವೆಂದು ಕಳೆದ ಸಾರಿ ಅವರ ಬಜೆಟ್ ನಲ್ಲಿ ಪ್ರಾವಿಷನ್ ಮಾಡಿದ್ದಾರೆ. ನಾನು ಈ ವಿಚಾರದಲ್ಲಿ ಮುಖ್ಯಮಂತ್ರಿಗಳಿಗೂ ಪತ್ರ ಬರೆದಿದ್ದೇನೆ. ಮೈಸೂರಿನ ಮಹಿಳಾ ಸಂಸ್ಥೆಯವರು. ಹೆಗ್ಗಡದೇವನ ಕೋಟೆ ತಾಲ್ಲೂಕನ್ನು ಆಯ್ಕೆ ಮಾಡಿಕೊಂಡು 25 ಲಕ್ಷ ರೂಪಾಯಿಗಳ ಪ್ರಾವಿಷನ್ ಮಾಡಿಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರೂ 25 ಲಕ್ಷ ಕೊಟ್ಟರೆ, ಅವರು 25 ಲಕ್ಷ ಹಾಕಿ, ಒಟ್ಟು 50 ಲಕ್ಷ ಆಗುತ್ತದೆ. ಇದರಿಂದ ಹೆಗ್ಗಡದೇವನ ಕೋಟೆ ತಾಲ್ಲೂಕಿಗೆ ಅನುಕೂಲವಾಗುತ್ತದೆ. ಈ ಸ್ಕೀಮಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕು ಒಂದೇ ಇರುವುದರಿಂದ, ಈ ಸಾಲಿಗೆ, ಗಡಿ ಅಭಿವೃದ್ಧಿಗಾಗಿ 25 ಲಕ್ಷ ಹಣವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ನಮ್ಮ ಸಚಿವರು ಕೆಲವು ಸಲ ಸ್ಟೇಟ್‌ಮೆಂಟ್ ಕೊಡುತ್ತಾರೆ. ಎ.ಪಿ.ಸಿ. ಫಂಡ್‌ನಿಂದ ಒಂದು ಕ್ಷೇತ್ರಕ್ಕೆ 18 ಲಕ್ಷ ಕೊಡುತ್ತೇವೆ. ಪಿ.ಡಬ್ಲ್ಯು.ಡಿ. ಹೆಡ್ಸ್‌ನಿಂದ 12 ಲಕ್ಷ ಕೊಡುತ್ತೇವೆಂದು ಹಾಸನದಲ್ಲಿ ಮಾಜಿ ಹಣಕಾಸಿನ ಮಂತ್ರಿಗಳು ಪ್ರಕಟ ಮಾಡಿದ್ದರು. ಆಗ ಮಾನ್ಯ ಪುಟ್ಟಸ್ವಾಮಿಗೌಡರು ಲೋಕೋಪಯೋಗಿ ಮಂತ್ರಿಗಳಾಗಿದ್ದರು. ಆದರೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದರೆ, ಸ್ವಲ್ಪ ಹಣ ಕೊಡುತ್ತಾರೆ. ಸ್ವಲ್ಪ ಹಣ ಕೊಡುವುದಿಲ್ಲ. ಎ.ಪಿ.ಎಂ.ಸಿ. ಅಮೌಂಟ್‌ನಲ್ಲಿ 18 ಲಕ್ಷ ಒಂದೊಂದು ಕ್ಷೇತ್ರಕ್ಕೆ ಕೊಡುತ್ತೇವೆಂದು ಅನೌನ್ಸ್ ಮಾಡಿದ್ದಾರೆ. ಮತ್ತು ಈ ಸಭೆಯಲ್ಲೂ ಹೇಳಿದ್ದಾರೆ. ಬೇರೆ ಬೇರೆ ಕಡೆ ಬಹಿರಂಗ ಸಭೆಗಳಲ್ಲೂ ಹೇಳಿದ್ದಾರೆ. ಮತ್ತು ಪಿ.ಡಬ್ಲ್ಯು.ಡಿ ಹೆಡ್ಸ್‌ನಲ್ಲಿ 12 ಲಕ್ಷ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಈಗ ಫೈನಾನ್ಸ್ ಡಿಪಾರ್ಟ್ ಮೆಂಟ್ ಕನ್ಕರೆನ್ಸಿ ಸಿಕ್ಕಿಲ್ಲವೆಂದು ತಡೆಹಿಡಿದ್ದಿದ್ದಾರೆ. 10 ಕೋಟಿ ರೂಪಾಯಿ ಬಾರ್ಡರ್ ಡೆವಲಪ್‌ಮೆಂಟ್‌ಗೆ ನಿಗದಿ ಮಾಡಿದ್ದಾರೆ, ಅದರಲ್ಲಿ ಈಗ ಮುಂದೆ ಕೊಡತಕ್ಕ 12 ಲಕ್ಷ ರೂ.ಗಳನ್ನು ಸಹ ಬಾರ್ಡರ್ ಡೆವಲಪ್‌ಮೆಂಟಿಗೆ ಸೇರಿಸುತ್ತೇವೆಂದು ಕೆಲವು ಅಧಿಕಾರಿಗಳು ಹೇಳಿರುವುದು ನಮಗೆ ಮಾಹಿತಿ ಸಿಕ್ಕಿದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕ್ಲಾರಿಫಿಕೇಶನ್ ಹೇಳಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ದೇವರಾಜ ಅರಸು ಮುಖ್ಯಮಂತ್ರಿಗಳಾಗಿದ್ದಾಗ ಬೆಳಗಾವಿ ಅಭಿವೃದ್ಧಿ ಸಲುವಾಗಿ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಪ್ರಕಾರ, ಅಲ್ಲಿಗೆ ಡಿವಿಜನಲ್ ಹೆಡ್ ಕ್ವಾರ್ಟರ್, ರೆವಿನ್ಯೂ ಡಿಪಾರ್ಟ್‌ಮೆಂಟ್ ಪೋಲೀಸ್ ಡಿಪಾರ್ಟ್‌ಮೆಂಟ್ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್, ಇನ್‌ಕಂಟ್ಯಾಕ್ಸ್ ಹಾಗೂ ಇರಿಗೇಷನ್ ನಾರ್ತ್ ಇದನ್ನೆಲ್ಲಾ ಟ್ರಾನ್ಸ್ಫರ್ ಮಾಡಿದರು.

ಅದೇ ಕಾಲಕ್ಕೆ ಹೈಕೋರ್ಟ್ ಬೆಂಚ್ ಮಾಡುವ ಸಲುವಾಗಿ, ಕ್ರಮ ಕೈಗೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಜಸ್ವಂತ್‌ಸಿಂಗ್ ಆಯೋಗದವರೂ ಕೂಡ ಬೆಳಗಾಂನಲ್ಲಿ ಹೈಕೋರ್ಟ್ ಬೆಂಚ್ ಮಾಡಬೇಕೆಂದು ಅವರ ವರದಿಯಲ್ಲಿ ನಮೂದು ಮಾಡಿದ್ದರು. ಅಲ್ಲದೆ ಕೇಂದ್ರ ಸರ್ಕಾರದವರು ಬೆಂಗಳೂರು ಬಿಟ್ಟು, ಬೇರೆ ಕಡೆಗೆ ಹೈಕೋರ್ಟ್ ಬೆಂಚ್ ಸ್ಥಾಪನೆ ಮಾಡಬೇಕೆಂಬುದನ್ನು ಒಪ್ಪಿದ್ದಾರೆಂದು ನನಗೆ ತಿಳಿದು ಬಂದಿದೆ. ಅದಕಾರಣ, ದಯಮಾಡಿ, ಗಡಿ ಪ್ರದೇಶದಲ್ಲಿರುವ ಬೆಳಗಾಂನಲ್ಲಿ ಉಚ್ಚನ್ಯಾಯಾಲಯ ಪೀಠವನ್ನು ಸ್ಥಾಪನೆ ಮಾಡಬೇಕೆಂದೂ, ಸರ್ಕಾರದವರು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದೂ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಭೀಮಣ್ಣನವರು : ಮಹಾತ್ಮಗಾಂಧಿ ಶತಮಾನೋತ್ಸವ ವರ್ಷದಲ್ಲಿ ಆ ಜೀವ ಕಾರಾಗೃಹವಾಸದಲ್ಲಿದ್ದ ಕೆಲವು ಖೈದಿಗಳನ್ನು ಬಿಡುಗಡೆ ಮಾಡಿದರು. ಅದೇ ಪ್ರಕಾರ, ಈ ವರ್ಷ ಬಾಬಾಸಾಹೇಬ ಅಂಬೇಡ್ಕರ್ ಅವರ ಶತಮಾನೋತ್ಸವವನ್ನು ಆಚರಿಸುತ್ತಿದ್ದು, ಈ ವರ್ಷದಲ್ಲಿ ಇಂತಹ ಖೈದಿಗಳ ಶಿಕ್ಷೆ ಕಡಿಮೆ ಮಾಡಿ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ಕಳೆದ 20 ವರ್ಷಗಳಿಂದ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ನೆನೆಗುದಿಗೆ ಬಿದ್ದಿದ್ದು ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ ನಮ್ಮ ಮುಖ್ಯಮಂತ್ರಿಗಳು, ಅದಕ್ಕೆ ಒಂದು ಲೈಫ್ ಕೊಟ್ಟು ಕಾರ್ಯರೂಪಕ್ಕೆ ತಂದಿರುವುದಕ್ಕಾಗಿ, ನಮ್ಮ ಬಳ್ಳಾರಿ ಜನತೆಯ ಪರವಾಗಿ ಮತ್ತು ಬಳ್ಳಾರಿ ಶಾಸಕರ ಪರವಾಗಿ ಅವರಿಗೆ ಅಭಿನಂದಿಸುತ್ತೇನೆ.

ಅದೇ ರೀತಿ ವಿದ್ಯಾಮಂತ್ರಿಗಳೂ ಕೂಡ ಹಂಪೆಯಲ್ಲಿ ಕನ್ನಡ ಯೂನಿವರ್ಸಿಟಿ ಮಾಡಬೇಕೆಂದು ಸಿದ್ಧತೆ ನಡೆಸುತ್ತಿದ್ದಾರೆ. ಅತಿ ಮುಖ್ಯವಾಗಿ ಬಳ್ಳಾರಿ ತಾಲ್ಲೂಕು ಅಥವಾ ಸಿರಗುಪ್ಪ ತಾಲ್ಲೂಕಿನಲ್ಲಿ ತುಂಗಭದ್ರಾ ಡ್ಯಾಮ್ ಇರುವುದಕೋಸ್ಕರ ಬಹಳ ನೀರು ವೇಸ್ಟ್ ಆಗಿ ಆಂಧ್ರಪ್ರದೇಶಕ್ಕೆ ಹೋಗುತ್ತಿದೆ. ನಮ್ಮಲ್ಲಿಯೇ ಬಹಳಷ್ಟು ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಈ ವರ್ಷದ ಬಜೆಟ್ ನಲ್ಲಿ 10-15 ಕೋಟಿ ಹಣವನ್ನು ಇಟ್ಟರೆ, 15-20 ಸಾವಿರದಲ್ಲಿ ದಲ್ಲಿ ಒಂದೊಂದು ಇರಿಗೇಷನ್ ಸ್ಕೀಮುಗಳನ್ನು ಮಾಡಬಹುದು. ಇದು ಬಹಳ ಮಹತ್ವವಾದ ವಿಷಯ ಸನ್ಮಾನ್ಯ ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಂಡು ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಅಧ್ಯಕರೇ. ಸಾರ್ವಜನಿಕ ಉದ್ಯಮಗಳಲ್ಲಿ ಅಧ್ಯಕ್ಷರುಗಳು ಮತ್ತು ವ್ಯವಸ್ಥಾಪಕ ನಿರ್ದೇಶಕರುಗಳು ಏನು ಭ್ರಷ್ಟಾಚಾರ ಮಾಡುತ್ತಾರೆ ಅದನ್ನು ತಡೆಗಟ್ಟುವುದಕ್ಕೆ ಈಗಿರತಕ್ಕಂಥ ಕಾನೂನಿನಲ್ಲಿ ಯಾವುದೇ ರೀತಿಯಾದ ಬಿಗಿ ಇಲ್ಲ. ಇದೆಲ್ಲವನ್ನೂ ನೋಡಲಿಕ್ಕೆ ಸಾರ್ವಜನಿಕ ಉದ್ದಿಮೆಗಳ ಸಮಿತಿ ಎಂದು ಒಂದು ಸಮಿತಿ ಮಾಡಿದ್ದೀರಿ. ಆ ಸಮಿತಿಗೆ ಇಟ್ಟಿರತಕ್ಕಂಥ ಕಾಲಮಿತಿ ಕೇವಲ ಒಂದು ವರ್ಷ ಆ ಒಂದು ವರ್ಷದ ಕಾಲಮಿತಿಯಲ್ಲಿ ಯಾವ ಉದ್ಯಮಗಳಲ್ಲಿ ಏನು ತಪ್ಪು ಮಾಡಿದ್ದಾರೆ. ಎಂದು ನೋಡುವುದಕ್ಕೆ ಆಗವುದಿಲ್ಲ. ಆ ಸಮಿತಿಯ ಕಾಲಮಿತಿಯನ್ನು ಜಾಸ್ತಿ ಮಾಡಬೇಕೆಂಬ ವಿಚಾರವನ್ನು ನಾನು ನನ್ನ ಭಾಷಣದಲ್ಲಿ ಹೇಳಿದ್ದೆ. ಮಾನ್ಯ ಸಭಾನಾಯಕರು ಉತ್ತರ ಹೇಳಬೇಕೆಂದು ಹೇಳುತ್ತೇನೆ. ಈ ಸಾರ್ವಜನಿಕ ಉದ್ದಿಮೆಗಳ ಬಗ್ಗೆ ನಾನು ಸಂಕ್ಷಿಪ್ತವಾಗಿ ಹೇಳಿದ್ದೇನೆ. ಇವುಗಳಲ್ಲಿ ಏನು ಭ್ರಷ್ಟಾಚಾರ ಬಹಳವಾಗಿ ನಡೆಯುತ್ತಿದೆ.ನ್ನು ಹೀಗಿರುವಂತಹ ವ್ಯವಸ್ಥೆಯಲ್ಲಿ ಯಾರಿಂದಲೂ ತಡೆಗಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅದಕ್ಕೆ ಪ್ರತ್ಯೇಕವಾದ ಒಂದು ಕಾನೂನನ್ನು ಮಾಡಿ ಅದನ್ನು ಬಿಗಿ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರುಗಳು ಅನೇಕ ವಿವರಗಳನ್ನು ಕೇಳಿದ್ದಾರೆ. ಇದನ್ನು ಹೇಳುವುದಕ್ಕೆ ಮತ್ತೊಂದು ಗಂಟೆ ಬೇಕಾಗುತ್ತದೆ. ಬರೀ ಚುಟುಕದಲ್ಲಿ ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ನೀವು ಸುಸ್ತಾಗಿದ್ದೀರಿ ನಿಮ್ಮನ್ನು ಸದ್ಯ ಬಿಡುಗಡೆ ಮಾಡಿದರೆ ಸಾಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಪರಿಶೀಲನೆ ಮಾಡುತ್ತೇನೆಂದು ಹೇಳಿರಿ.

ಶ್ರೀ ಎಸ್. ಬಂಗಾರಪ್ಪ : ಅಷ್ಟು ಅಂದರೆ ಈಗ ಸಾಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೂ ಸುಸ್ತಾಗಿದ್ದಾರೆಂದು ನಮಗೆ ಕಾಣಿಸುತ್ತಿದೆ.

ಶ್ರೀ ಎಸ್. ಬಂಗಾರಪ್ಪ : ವಿರೋಧ ಪಕ್ಷದ ನಾಯಕರು ಶ್ರೀಯುತರುಗಳಾದ ಹಿಂಡಸಗೇರಿಯವರು ಕುನ್ನೂರ್‌ರವರು, ಸಿಂಧ್ಯಾರವರು. ಚಿಕ್ಕೋಡಿ ಸದಸ್ಯರಾದ ಭೀಮಣ್ಣನವರು, ಶಿವಾನಂದ ಕೌಜಲಗಿರವರು ಎಲ್ಲಾ ಸೇರಿ ಕರ್ನಾಟಕ ಹೈಕೋರ್ಟಿನ ಒಂದು ಬೆಂಚ್ ಬೆಂಗಳೂರು ಜೊತೆಗೆ ಮತ್ತೊಂದು ಆ ಕಡೆ ಭಾಗದಲ್ಲಿ ಇರಬೇಕೆಂದು ಹೇಳಿದ್ದಾರೆ. ಒಬ್ಬಿಬ್ಬರು ಬೆಳಗಾಂನಲ್ಲಿ ಮಾಡಬೇಕೆಂದರೆ, ಉಳಿದವರೆಲ್ಲರೂ ಧಾರವಾಡದಲ್ಲಿ ಮಾಡಬೇಕೆಂದರು.

QUMARAL ISLAM :-Gulbarga is also one of the serious contenders.

ಶ್ರೀ ಎಸ್. ಬಂಗಾರಪ್ಪ : ತಮ್ಮನ್ನೂ ಸಹ ಇದರಲ್ಲಿ ಸೇರಿಸಿಕೊಂಡಿದ್ದೇನೆ. ಈ ರೀತಿ ಸಲಹೆ ಕೊಟ್ಟಿದ್ದರೆ. ಇದರ ಜೊತೆಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮುಖ್ಯವಾದ ಒಂದು ವಿಚಾರ ಹೇಳಿದ್ದಾರೆ. ಸುಪ್ರೀಂ ಕೋರ್ಟಿನ ಒಂದು ಬೆಂಚ್ ದಕ್ಷಿಣ ಭಾರತದಲ್ಲಿ ಇರಬೇಕು. ಅದರಲ್ಲೂ ಬೆಂಗಳೂರಿನಲ್ಲಿ ಆಗಬೇಕೆಂಬ ವಿಚಾರ ಹೇಳಿದ್ದಾರೆ. ಇತ್ತೀಚೆಗೆ ಕೇಂದ್ರದ ಕಾನೂನು ಸಚಿವರಾದ ಸುಬ್ರಹ್ಮಣ್ಯ ಸ್ವಾಮಿಯವರು ಮದ್ರಾಸ್‌ನಲ್ಲಿ ಹೇಳಿಕೆ ಕೊಟ್ಟಿರತಕ್ಕಂಥ ವಿಚಾರ ತಮ್ಮ ಗುಮನದಲ್ಲಿದೆ ಎಂದು ನಾನು ಭಾವಿಸುತ್ತೇನೆ. ಅದರ ವಿವರಗಳಿಗೆ ಹೋಗದೇ ನಮ್ಮ ರಾಜ್ಯಸರಕಾರದ ಒತ್ತಡವನ್ನು ಕೇಂದ್ರ ಸರಕಾರದ ಮೇಲೆ - ಹಾಗೂ ಸುಪ್ರೀಂ ಕೋರ್ಟ್ ಮೇಲೆ ತರುತ್ತೇವೆ. ತಂದು ತಕ್ಷಿಣ ಭಾರತದಲ್ಲಿ ಒಂದು ಬೆಂಚ್ ಮಾಡಬೇಕು.ಅದೂ ಕೂಡ ಬೆಂಗಳೂರಿನಲ್ಲಿ ಮಾಡಬೇಕೆಂಬ ಒತ್ತಡವನ್ನು ತರುತ್ತೇವೆ ಈ ಬಗ್ಗೆ ಹಿಂದೆ ಹೇಳಿದ್ದೇನೆ. ಮುಂದೆಯೂ ಹೇಳುತ್ತೇವೆ, ಒತ್ತಡವನ್ನು ತರುತ್ತೇವೆ. ಅನಂತರ ಕರ್ನಾಟಕ ಹೈಕೋರ್ಟಿನ ಒಂದು ಬೆಂಚನ್ನು ಉತ್ತರ ಕರ್ನಾಟಕದ ಭಾಗದಲ್ಲಿ ಮಾಡುವುದಕ್ಕೆ ನಾವು ಅಂದರೆ ಸರಕಾರದವರು ಸಿದ್ಧವಾಗಿದ್ದೇವೆ. ಆದರೆ ಕರ್ನಾಟಕ ಹೈಕೋರ್ಟಿನವರು ಮತ್ತು ಸುಪ್ರೀಂ ಕೋರ್ಟಿನವರು ಇದಕ್ಕೆ ಒಪ್ಪಬೇಕೆಂಬ ವಿಚಾರಕ್ಕೆ ನಾವು ಕಾದಿದ್ದೇವೆ. ಉತ್ತರ ಕರ್ನಾಟಕದಲ್ಲಿ ಎಲ್ಲಿ ಮಾಡಬೇಕೆಂಬ ವಿಚಾರ ಅನಂತರದ ಪ್ರಶ್ನೆ. ಆದರೆ ಅಲ್ಲಿ ಮಾಡಬೇಕು. ಏಕೆಂದರೆ ಬೆಂಗಳೂರು ನಗರ ಗುಲ್ಬರ್ಗಾ, ಬೆಳಗಾಂ, ಧಾರವಾಡ ಕಡೆಗೆ ತುಂಬಾ ದೂರವಾಗುತ್ತದೆ. ಮಹಾರಾಷ್ಟ್ರದಲ್ಲಿ, ಉತ್ತರ ಪ್ರದೇಶದಲ್ಲಿ ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿ ಕೂಡಾ ಈ ರೀತಿ ಇದೆ ಎಂಬ ವಿಚಾರ ಕೇಳಿದ್ದೇವೆ. ಈ ರೀತಿ ನಮ್ಮಲ್ಲೂ ಮಾಡಿ ಜನರಿಗೆ ಅನುಕೂಲ ಆಗತಕ್ಕಂಥ ಅವಶ್ಯಕತೆ ಬಹಳವಾಗಿದೆ. ಅದನ್ನು ಸರಕಾರ ಮನಗಂಡಿದೆ. ನಾವು ಕರ್ನಾಟಕ ಹೈಕೋರ್ಟ್ ಮತ್ತು ಸುರ್ಪಿಂ ಕೋರ್ಟ್ ಮೇಲೆ ಒತ್ತಡವನ್ನು ಸಾಕಷ್ಟು ಪ್ರಮಾಣದಲ್ಲಿ ತರುತ್ತೇವೆ. ಅಷ್ಟರಮಟ್ಟಿಗೆ ಇದಕ್ಕೆ ಉತ್ತರ ಕೊಡುತ್ತೇನೆ. ಅನಂತರ ಮಾನ್ಯ ಕರಿಯಣ್ಣನವರು ಎಸ್.ಸಿ.ಎಸ್.ಟಿ. ಬ್ಯಾಕ್ಲಾಗ್ ತುಂಬಬೇಕೆಂಬ ವಿಚಾರ ಹೇಳಿದ್ದಾರೆ. ಅದು ಸರಕಾರದ ನೀತಿ ಆಗಿದೆ. ಅದರ ಬಗ್ಗೆ ಕಾರ್ಯಕ್ರಮ ನಾವು ಹ್ಹಾಕುತ್ತೇವೆ. ಅನಂತರ ಶ್ರೀಮತಿ

ಮೋಟಮ್ಮನವರು ಒಪನ್ ಯೂನಿವರ್ಸಿಟಿ ಮಾಡಬೇಕೆನ್ನತಕ್ಕಂಥ ವಿಚಾರವನ್ನು ನಾವು ಏನು ಪ್ರಕಟಣೆ ಮಾಡಿದ್ದೇವೆ. ಅದಕ್ಕೆ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರು ಇಡಬೇಕೆನ್ನುವ ಮಾತು ಹೇಳಿದ್ದಾರೆ. ಅದರ ಜೊತೆಗೆ ಬೇರೆ ಬೇರೆ ಸಲಹೆಗಳನ್ನು ಕೂಡ ಕೆಲವರು ಕೊಟ್ಟಿದ್ದಾರೆ. ಇನ್ನು ಕೆಲವರು ಅದಕ್ಕೆ ಯಾವುದೇ ಹೆಸರು ಇಡುವುದು ಬೇಡ ಎಂದು ಹೇಳಿದ್ದಾರೆ ಕೆಲವರು ಹೆಸರು ಬೇಕು ಹಾಗೆ ಹೀಗೆ ಇವೆಲ್ಲಾ ಸಲಹೆಗಳು ಬಂದಿವೆ. ಇದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಇಷ್ಟು ಮಾತ್ರ ಇದಕ್ಕೆ ಉತ್ತರ ಸಾಕು ಎಂದು ನಾನು ಈ ಸಂದರ್ಭದಲ್ಲಿ ಹೇಳಿ ಇನ್ನು ನಮ್ಮ ಮಾನ್ಯ ಸದಸ್ಯರಾದ ಕುನ್ನೂರ್‌ರವರು ಮತ್ತು ಕೌಜಲಗಿಯವರು ಜಾಗ ದಾನವಾಗಿ ಜನರು ಕೊಡುತ್ತಾರೆ. ಬಡವರಿಗೆ ಸೈಟ್ ಕೊಡುವುದಕ್ಕೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ಅದಕ್ಕೆ ಅವರ ಹೆಸರನ್ನು ಇಡಿ ಎಂದು ಹೇಳಿದ್ದಾರೆ ಬಹಳ ಒಳ್ಳೆಯ ಸಲಹೆ. ಅವರ ಹೆಸರನ್ನು ಇಡೋಣ. ಅದರ ಬಗ್ಗೆ ನಾವು ಒಂದು ಸುತ್ತೋಲೆ ಕಳುಹಿಸಿಕೊಡುತ್ತೇವೆ. ಸರ್ಕಾರದ ಆಜ್ಞೆ ಹೊರಡಿಸುತ್ತೇವೆ. ಬಹಳ ಒಳ್ಳೆಯ ಸಲಹೆ. ಸರ್ಕಾರ ಇದನ್ನು ಒಪ್ಪುತ್ತದೆ. ಸ್ವಲ್ಪ ದಾನ ಚೆನ್ನಾಗಿ ಕೊಟ್ಟರೆ ಒಂದು ಹತ್ತತ್ತು ಎಕರೆ ಅವರ ಹೆಸರನ್ನು ಆ ಕಾಲೋನಿಗೆ ಇಡೋಣ. ಇನ್ನು ಗಡಿ ಪ್ರದೇಶದ ಅಭಿವೃದ್ಧಿ ಬಗ್ಗೆ ನಮ್ಮ ಮಾನ್ಯ ವಾಟಾಳ್ ನಾಗರಾಜರಾಯರು ಮತ್ತು ವೆಂಕಟೇಶ್‌ರವರು.....

ಶ್ರೀ ಬಸವರಾಜರಾಯರೆಡ್ಡಿ : ನಾಗರಾಜರಾಯರು ಯಾರು.....

ಶ್ರೀ ವಾಟಾಳ್ ನಾಗರಾಜ್ : ಏನೇನು ಬದಲಾವಣೆ ಮಾಡಬೇಕೆಂದು ಹೊರಟಿದ್ದೀರೋ. ಮಾಡಿ.

ಶ್ರೀ ಎಸ್. ಬಂಗಾರಪ್ಪ : ನಾನು ಅದನ್ನು ಬೇಕೆಂದು ಹೇಳಿದ್ದೆ. ಮಾನ್ಯ ಸದಸ್ಯರಾದ ಶ್ರೀ ವೆಂಕಟೇಶ್‌ರವರು ತಿಳಿಸಿದ್ದಾರೆ. ಗಡಿ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚು ಹಣ ಇಡಬೇಕೆಂದು ಈಗ ನಾವು 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಅದು ಸಾಲದು ಎಂದು ಹೇಳಿದ್ದಾರೆ. ಸಧ್ಯದಲ್ಲಿ ಆ ಹಣವನ್ನು ಖರ್ಚು ಮಾಡೋಣ, ಮುಂದೆ ಈ ಬಗ್ಗೆ ವಿಚಾರ ಮಾಡೋಣ. ಇದೇ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಕೆ.ಹೆಚ್. ಹನುಮೇಗೌಡರು ಮಾತನಾಡುತ್ತಾ ಕ್ಷಾಮದ ಬಗ್ಗೆ ಹೇಳಿದ್ದಾರೆ, ಬಜೆಟ್‌ನಲ್ಲಿ ನಾವು ಹಣ ಇಟ್ಟಿದ್ದೇವೆ. ಅದು ತುಂಬಾ ದೊಡ್ಡ ವ್ಯಾಪ್ತಿಯಲ್ಲಿದೆ. ಅದು ದಿನೇ ದಿನೇ ಹೆಚ್ಚಾಗುತ್ತಿದೆ. ನಾವು ಆ ಬಗ್ಗೆ ಮುಂದೆ ಕಾರ್ಯಕ್ರಮ ಹಾಕಿಕೊಳ್ಳೋಣ ಇನ್ನು ಮಾನ್ಯ ಸದಸ್ಯರಾದ ಶ್ರೀ ನಾರಾಯಣಸ್ವಾಮಿ, ಬೇತಮಂಗಲದ ಶಾಸಕರು ಹಣ ಜಾಸ್ತಿ ಇಡಬೇಕು ಎಂದು ಹೇಳಿ ಈಗ ಏನು 12 ಲಕ್ಷ ರೂಪಾಯಿಗಳನ್ನು ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ ಆ ಹಣ ಬಿಡುಗಡೆ ಆಗಿಲ್ಲ ಎಂದು ಹೇಳಿದ್ದಾರೆ.

ಶ್ರೀ ಬಸವರಾಜರಾಯರೆಡ್ಡಿ : ಈ ಸದನದಲ್ಲಿ ಹೇಳಿದ್ದು. ಒಂದು ಕ್ಷೇತ್ರಕ್ಕೆ 12 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು. ಇಲ್ಲಿಯವರೆಗೆ ಒಂದು ನಯಾಪೈಸೆ ಸಹ ಬಿಡುಗಡೆ ಆಗಿಲ್ಲ.

ಶ್ರೀ ಎಸ್.ಬಂಗಾರಪ್ಪ : ತಾವು ಕುಳಿತುಕೊಳ್ಳಿ ನನಗೆ ಅರ್ಥ ಆಯಿತು. ಈ ಸದನದಲ್ಲಿ ಹೇಳಿದ್ದು ನಿಜ. ಹಿಂದಿನ ಹಣಕಾಸಿನ ಸಚಿವರಾದ ಶ್ರೀ ರಾಜಶೇಖರಮೂರ್ತಿಯವರು ಹೇಳಿದ್ದಾರೆ ನಿಜ ಹೇಳ ಬೇಕೆಂದರೆ ಒಂದು ಸಾರಿ ಒಂದು ಮಟ್ಟದಲ್ಲಿ ಏನು ಬಂತೆಂದರೆ ಒಂದೊಂದು ಕ್ಷೇತ್ರಕ್ಕೆ 12 ಲಕ್ಷ ರೂಪಾಯಿಗಳನ್ನು ರಸ್ತೆಗಳಿಗೆ ಕೊಡುತ್ತಾ ಹೋದರೆ ರಸ್ತೆಗಳಿಗೆ ಹಣ ಎಲ್ಲಿಂದ ತರಬೇಕು, ಅದಕ್ಕೆ 5 ಲಕ್ಷ ರೂಪಾಯಿಗಳು ಸಾಕು ಎನ್ನುವ ಅಭಿಪ್ರಾಯ ಬಂತು. ಅದಕ್ಕೆ ನಾನು ಒಪ್ಪಲಿಲ್ಲ. ಒಂದು ಸಾರಿ

ಒಂದು ಮಾತು ಕೊಟ್ಟ ಮೇಲೆ ಅದಕ್ಕೆ ಅಂಟಿಕೊಳ್ಳತಕ್ಕದ್ದು ಸರಿ ಎಂದು ನಾವು ಈಗಾಗಲೇ ಜಿ.ಓ. ಇಶ್ಯೂ ಮಾಡಿದ್ದೇವೆ. ಹಣ ಇನ್ನೂ ರಿಲೀಫ್ ಆಗಿಲ್ಲ. ತಾವು ಹೇಳಿದ ಹಾಗೆ ಜಿ.ಓ. ಇಶ್ಯೂ ಆಗಿದೆ. ಅದು ಮೊನ್ನೆ ಮೊನ್ನೆ ಆಗಿದೆ. ಹಣ ರಿಲೀಸ್ ಮಾಡುತ್ತೇವೆ. 12ಲಕ್ಷ ರೂಪಾಯಿಗಳು ಒಂದೊಂದು ಕ್ಷೇತ್ರಕ್ಕೆ, ಸಂಪೂರ್ಣವಾಗಿ ಹಣ ಇಶ್ಯೂ ಮಾಡುತ್ತೇವೆ.

(ಗೊಂದಲ)

ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟನ್ನು ಗಮನದಲ್ಲಿಟ್ಟುಕೊಂಡು ಏನು ತೀರ್ಮಾನ ಮಾಡಬೇಕೋ ಅದನ್ನು ಮಾಡೋಣ. ಅದಕ್ಕೆ ಇಷ್ಟು ಉತ್ತರ ಸಾಕು. ಇನ್ನು ಹೆಲಿಕ್ಯಾಪ್ಟರ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀಮತಿ ಮೋಟಮ್ಮ: ರಸ್ತೆ ಮತ್ತು ಸೇತುವೆ ಕೆಲಸಗಳಿಗೆ ಒಂದೊಂದು ಕ್ಷೇತ್ರಕ್ಕೆ ಇಂತಿಷ್ಟು ಹಣ ಎಂದು ನಿಗದಿ ಮಾಡಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ: ಒಳ್ಳೆಯ ಸಲಹೆ. ನಿಮ್ಮ ಸಲಹೆಯನ್ನು ನಮ್ಮ ಪರಿಶೀಲನಾ ಬುಟ್ಟಿಯಲ್ಲಿಟ್ಟುಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೇ, ನಾನು ಹೆಲಿಕ್ಯಾಪ್ಟರ್ ವಿಚಾರ ಹೇಳುತ್ತಿದ್ದೆ, ಇದರ ಬಗ್ಗೆ ಒಂದು ಸಾರಿ ಇಟ್ಟುಕೊಳ್ಳಬೇಕೋ, ಕೊಡಬೇಕೋ ಎನ್ನತಕ್ಕಂಥದ್ದರ ಬಗ್ಗೆ ಚರ್ಚೆ ಕೂಡ ನಡೆದಿದೆ. ಅದರ ಅವಶ್ಯಕತೆ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಕೂಡ ಚರ್ಚೆ ಆಗಿದೆ. ಮಹಾರಾಷ್ಟ್ರದಲ್ಲಿ ಇದು 3-4ರಲ್ಲಿ ಒಂದನ್ನು ಈಗ ಉಳಿಸಿಕೊಂಡಿದ್ದಾರಂತೆ. ನಾನು ನಮ್ಮಲ್ಲಿ ಇಟ್ಟುಕೊಳ್ಳಬೇಕೆನ್ನುವ ದೃಷ್ಟಿಯಿಂದ ಮಾತನಾಡುತ್ತಿಲ್ಲ. ಅಥವಾ ಕೊಡಬೇಕು ಎಂಬ ದೃಷ್ಟಿಯಿಂದ ಅಲ್ಲ. ಅದೇ ಯು.ಪಿ.ಯಲ್ಲಿ 3-4 ವಿಮಾನಗಳನ್ನು ಮತ್ತು ಒಂದೆರಡು ಹೆಲಿಕ್ಯಾಪ್ಟರ್‌ಗಳನ್ನು ಇಟ್ಟುಕೊಂಡಿದ್ದಾರೆ. ಹರಿಯಾಣ ರಾಜ್ಯದಲ್ಲೂ ಕೂಡಾ ಇಟ್ಟುಕೊಂಡಿದ್ದಾರೆ. ದೆಹಲಿಗೆ ಹತ್ತಿರ ಇರುವ ರಾಜ್ಯಗಳವರೆಲ್ಲಾ ಹೆಲಿಕ್ಯಾಪ್ಟರ್‌ಗಳನ್ನು ಇಟ್ಟುಕೊಂಡಿದ್ದಾರೆ. ನಮ್ಮಲ್ಲಿರುವ ಒಂದು ಹೆಲಿಕ್ಯಾಪ್ಟರ್‌ನ್ನು ಏಕೆ ಕೊಡುತ್ತೀರೆಂದು ಕೆಲವರು ಹೇಳುತ್ತಾರೆ. ಅದನ್ನು ಕೊಡಬೇಕೆನ್ನುವ ವಿಚಾರದಲ್ಲಿ ಟೆಂಡರ್ ಕರೆದಿದ್ದು ತಮಗೆಲ್ಲರಿಗೂ ಗೊತ್ತಿರುವ ವಿಚಾರ. ಆಮೇಲೆ, ಅದು ಮಾರುವುದು ಸರಿಯಲ್ಲ ಹಾಗೂ ಮಾರಿದರೆ ಸರ್ಕಾರಕ್ಕೆ ಲಾಸ್ ಆಗುತ್ತದೆ ಎನ್ನುವ ವಿಚಾರ ಬಂದಿದ್ದರಿಂದ ಆ ವಿಷಯ ಹಾಗೇ ಇದೆ. ಮುಂದೆ ಏನು ಮಾಡಬೇಕೆಂಬ ಬಗ್ಗೆ ವಿಚಾರ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಮಾಡುವುದೇನಿದೆ? ಅದರಲ್ಲಿ ಓಡಾಡುವುದು. ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಬರಗಾಲ ಪ್ರದೇಶವನ್ನು ವೀಕ್ಷಣೆ ಮಾಡುವ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಮತ್ತು ನಾವು 3-4 ಕಿಲೋಮೀಟರ್ ನಡೆದುಕೊಂಡು ಹೋಗಿದ್ದೆವು. ನೀವು ಹೆಲಿಕ್ಯಾಪ್ಟರ್‌ನಲ್ಲಿ ಬಂದು ಹೋಗಿಬಿಟ್ರಿ. ಈ ರೀತಿಯ ತಾರತಮ್ಯ ಏತಕ್ಕೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಗುರುಪಾದಪ್ಪನವರೇ, ಸುಮ್ಮನೇ ತಿಳಿದುಕೊಳ್ಳದೆ ಮಾತನಾಡಬೇಡಿ. ಅವರು ಎಂದಾದರೂ ಹೆಲಿಕ್ಯಾಪ್ಟರ್‌ನ್ನು ಕೇಳಿದ್ದಾರಾ? ಅವರು ಕೇಳಿದರೆ ಅವರಿಗೆ ಕೊಡತಕ್ಕಂಥ ವಿಚಾರವನ್ನು ಸರ್ಕಾರ ಮಾಡುತ್ತದೆ. ಅವರೂ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿಬರಲಿ. ವಿರೋಧ ಪಕ್ಷದ ನಾಯಕರಿಗೆ ಆಸೆಯಿದ್ದರೆ ನಾನು ಏಕೆ ಬೇಡವೆಂದು ಹೇಳಲಿ. ಅದನ್ನು ಅವರು ಕೇಳುವುದರಲ್ಲಿ ತಪ್ಪೇನೂ ಇಲ್ಲ. ಅವರಿಗೂ ಕಳುಹಿಸಿಕೊಡೋಣ. ತಾವುಗಳು ಸಹ ಹೋಗಿ ಬನ್ನಿ. ತುರ್ತು ಕೆಲಸವಿದ್ದಾಗ ಅದರಲ್ಲಿ ಹೋಗಿ ಬರುವುದರಲ್ಲಿ ತಪ್ಪಿಲ್ಲ.

ಒಂದು ಮಾತು ಕೊಟ್ಟ ಮೇಲೆ ಅದಕ್ಕೆ ಅಂಟಿಕೊಳ್ಳತಕ್ಕದ್ದು ಸರಿ ಎಂದು ನಾವು ಈಗಾಗಲೇ ಜಿ.ಓ. ಇಶ್ಯೂ ಮಾಡಿದ್ದೇವೆ. ಹಣ ಇನ್ನೂ ರಿಲೀಫ್ ಆಗಿಲ್ಲ. ತಾವು ಹೇಳಿದ ಹಾಗೆ ಜಿ.ಓ. ಇಶ್ಯೂ ಆಗಿದೆ. ಅದು ಮೊನ್ನೆ ಮೊನ್ನೆ ಆಗಿದೆ. ಹಣ ರಿಲೀಸ್ ಮಾಡುತ್ತೇವೆ. 12ಲಕ್ಷ ರೂಪಾಯಿಗಳು ಒಂದೊಂದು ಕ್ಷೇತ್ರಕ್ಕೆ, ಸಂಪೂರ್ಣವಾಗಿ ಹಣ ಇಶ್ಯೂ ಮಾಡುತ್ತೇವೆ.

(ಗೊಂದಲ)

ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟನ್ನು ಗಮನದಲ್ಲಿಟ್ಟುಕೊಂಡು ಏನು ತೀರ್ಮಾನ ಮಾಡಬೇಕೋ ಅದನ್ನು ಮಾಡೋಣ. ಅದಕ್ಕೆ ಇಷ್ಟು ಉತ್ತರ ಸಾಕು. ಇನ್ನು ಹೆಲಿಕ್ಯಾಪ್ಟರ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀಮತಿ ಮೋಟಮ್ಮ: ರಸ್ತೆ ಮತ್ತು ಸೇತುವೆ ಕೆಲಸಗಳಿಗೆ ಒಂದೊಂದು ಕ್ಷೇತ್ರಕ್ಕೆ ಇಂತಿಷ್ಟು ಹಣ ಎಂದು ನಿಗದಿ ಮಾಡಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ: ಒಳ್ಳೆಯ ಸಲಹೆ. ನಿಮ್ಮ ಸಲಹೆಯನ್ನು ನಮ್ಮ ಪರಿಶೀಲನಾ ಬುಟ್ಟಿಯಲ್ಲಿಟ್ಟುಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೇ, ನಾನು ಹೆಲಿಕ್ಯಾಪ್ಟರ್ ವಿಚಾರ ಹೇಳುತ್ತಿದ್ದೆ, ಇದರ ಬಗ್ಗೆ ಒಂದು ಸಾರಿ ಇಟ್ಟುಕೊಳ್ಳಬೇಕೋ, ಕೊಡಬೇಕೋ ಎನ್ನತಕ್ಕಂಥದ್ದರ ಬಗ್ಗೆ ಚರ್ಚೆ ಕೂಡ ನಡೆದಿದೆ. ಅದರ ಅವಶ್ಯಕತೆ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಕೂಡ ಚರ್ಚೆ ಆಗಿದೆ. ಮಹಾರಾಷ್ಟ್ರದಲ್ಲಿ ಇದು 3-4ರಲ್ಲಿ ಒಂದನ್ನು ಈಗ ಉಳಿಸಿಕೊಂಡಿದ್ದಾರಂತೆ. ನಾನು ನಮ್ಮಲ್ಲಿ ಇಟ್ಟುಕೊಳ್ಳಬೇಕೆನ್ನುವ ದೃಷ್ಟಿಯಿಂದ ಮಾತನಾಡುತ್ತಿಲ್ಲ. ಅಥವಾ ಕೊಡಬೇಕು ಎಂಬ ದೃಷ್ಟಿಯಿಂದ ಅಲ್ಲ ಅದೇ ಯು.ಪಿ.ಯಲ್ಲಿ 3-4 ವಿಮಾನಗಳನ್ನು ಮತ್ತು ಒಂದೆರಡು ಹೆಲಿಕ್ಯಾಪ್ಟರ್‌ಗಳನ್ನು ಇಟ್ಟುಕೊಂಡಿದ್ದಾರೆ. ಹರಿಯಾಣ ರಾಜ್ಯದಲ್ಲೂ ಕೂಡಾ ಇಟ್ಟುಕೊಂಡಿದ್ದಾರೆ. ದೆಹಲಿಗೆ ಹತ್ತಿರ ಇರುವ ರಾಜ್ಯಗಳವರೆಲ್ಲಾ ಹೆಲಿಕ್ಯಾಪ್ಟರ್‌ಗಳನ್ನು ಇಟ್ಟುಕೊಂಡಿದ್ದಾರೆ. ನಮ್ಮಲ್ಲಿರುವ ಒಂದು ಹೆಲಿಕ್ಯಾಪ್ಟರ್‌ನ್ನು ಏಕೆ ಕೊಡುತ್ತೀರೆಂದು ಕೆಲವರು ಹೇಳುತ್ತಾರೆ. ಅದನ್ನು ಕೊಡಬೇಕೆನ್ನುವ ವಿಚಾರದಲ್ಲಿ ಟೆಂಡರ್ ಕರೆದಿದ್ದು ತಮಗೆಲ್ಲರಿಗೂ ಗೊತ್ತಿರುವ ವಿಚಾರ. ಆಮೇಲೆ, ಅದು ಮಾರುವುದು ಸರಿಯಲ್ಲ ಹಾಗೂ ಮಾರಿದರೆ ಸರ್ಕಾರಕ್ಕೆ ಲಾಸ್ ಆಗುತ್ತದೆ ಎನ್ನುವ ವಿಚಾರ ಬಂದಿದ್ದರಿಂದ ಆ ವಿಷಯ ಹಾಗೇ ಇದೆ. ಮುಂದೆ ಏನು ಮಾಡಬೇಕೆಂಬ ಬಗ್ಗೆ ವಿಚಾರ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಮಾಡುವುದೇನಿದೆ? ಅದರಲ್ಲಿ ಓಡಾಡುವುದು. ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಬರಗಾಲ ಪ್ರದೇಶವನ್ನು ವೀಕ್ಷಣೆ ಮಾಡುವ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಮತ್ತು ನಾವು 3-4 ಕಿಲೋಮೀಟರ್ ನಡೆದುಕೊಂಡು ಹೋಗಿದ್ದೆವು. ನೀವು ಹೆಲಿಕ್ಯಾಪ್ಟರ್‌ನಲ್ಲಿ ಬಂದು ಹೋಗಿಬಿಟ್ರಿ. ಈ ರೀತಿಯ ತಾರತಮ್ಯ ಏತಕ್ಕೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಗುರುಪಾದಪ್ಪನವರೇ, ಸುಮ್ಮನೇ ತಿಳಿದುಕೊಳ್ಳದೆ ಮಾತನಾಡಬೇಡಿ. ಅವರು ಎಂದಾದರೂ ಹೆಲಿಕ್ಯಾಪ್ಟರ್‌ನ್ನು ಕೇಳಿದ್ದಾರಾ? ಅವರು ಕೇಳಿದರೆ ಅವರಿಗೆ ಕೊಡತಕ್ಕಂಥ ವಿಚಾರವನ್ನು ಸರ್ಕಾರ ಮಾಡುತ್ತದೆ. ಅವರೂ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿಬರಲಿ. ವಿರೋಧ ಪಕ್ಷದ ನಾಯಕರಿಗೆ ಆಸೆಯಿದ್ದರೆ ನಾನು ಏಕೆ ಬೇಡವೆಂದು ಹೇಳಲಿ. ಅದನ್ನು ಅವರು ಕೇಳುವುದರಲ್ಲಿ ತಪ್ಪೇನೂ ಇಲ್ಲ. ಅವರಿಗೂ ಕಳುಹಿಸಿಕೊಡೋಣ. ತಾವುಗಳು ಸಹ ಹೋಗಿ ಬನ್ನಿ. ತುರ್ತು ಕೆಲಸವಿದ್ದಾಗ ಅದರಲ್ಲಿ ಹೋಗಿ ಬರುವುದರಲ್ಲಿ ತಪ್ಪಿಲ್ಲ.

ಇದನ್ನು ತಾವೂ ಕೂಡಾ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ಏಕೆಂದರೆ ಅದು ಬಹಳ ಮಿತಿಮೀರಿ ಆಡಿರತಕ್ಕಂಥ ಮಾತು. ಇದನ್ನು ಯಾರು ಒಪ್ಪುವುದಿಲ್ಲವೆಂಬ ಮಾತನ್ನು ಅವರು ಕೂಡಾ ಹೇಳಿದ್ದಾರೆ. After all whether you are here of I am here or anybody else is here on this chair.....

ನಾನು ಒಂದನ್ನು ಹೇಳುತ್ತೇನೆ. ಇವತ್ತು ಸರ್ಕಾರವನ್ನು ಟೀಕೆ ಮಾಡುವುದು ಮುಖ್ಯ ಮಂತ್ರಿಗಳನ್ನು ಟೀಕೆ ಮಾಡುವುದು, ಸರ್ಕಾರದ ಅಧಿಕಾರಿಗಳನ್ನು ಟೀಕೆ ಮಾಡುವುದು....

(ಗೊಂದಲ)

Please don't mix up.

ಶ್ರೀ ಎಸ್.ಬಂಗಾರಪ್ಪ: ನೀವು ವಿಷಯವನ್ನು ಶಿಫ್ಟ್ ಮಾಡುವ ಪ್ರಯತ್ನ ಬೇಡ. ಕುಳಿತುಕೊಳ್ಳಿ ನಾನು ಹೇಳುತ್ತೇನೆ. ಇಲ್ಲಿ ಮನಸ್ಸಿಗೆ ಬಂದ ಹಾಗೆ ಟೀಕೆ ಮಾಡುವುದು. As the chief minister,as the head of government it is my responsiblility. In fact, after i had a lengthy consulatation with all my cabinet colleagues, I had a lengthy consultation with all my cabinet colleagues, I took a decision. It is not an individusl decision even. ಇವತ್ತು ಕ್ಯಾಬಿನೆಟ್ ಡಿಸಿಷನ್ ಕೂಡ ಮಾಡಿದ್ದೇವೆ. It is all unanimous decision for your information. ತಮಗೆ ಗೊತ್ತಿರುವ ಹಾಗೆ ತೆಗೆದುಹಾಗತಕ್ಕಂಥ ವಿಚಾರವಿರಬಹುದು, ವರ್ಗ ಮಾಡತಕ್ಕ ವಿಚಾರವಿರಬಹುದು. ಸಸ್ಪೆನ್ಷನ್ ಇರಬಹುದು, ಹೊಸ ಚೀಫ್ ಸೆಕ್ರೆಟರಿ ನೇಮಕ ಮಾಡಿರತಕ್ಕ ವಿಚಾರ ಇರಬಹುದು, ಪ್ರತಿ ಒಂದು ಕೂಡ ಯುನಾನಿಮಸ್‌ಆಗಿ ತೀರ್ಮಾನ ಆಗಿದೆ ಕ್ಯಾಬಿನೆಟ್‌ನಲ್ಲಿ ಎನ್ನತಕ್ಕದ್ದನ್ನು ತಾವು ಯಾರೂ ಮರೆಯಬಾರದು. He should know thet he has got his own limitation. After all, he is a part and parcel of the administration there.

ಸುಮ್ಮನೇ ಸ್ಟ್ರೇಸ್ ಮಾಡಿಕೊಳ್ಳುತ್ತಾ ಹೋದರೆ ಏನು ಗತಿ ಆಗುತ್ತದೆ?

In fact, I am very, very proud of telling that we have got very good officers in our administration.

ತಾವೂ ಕೂಡ ಹೇಳಿದ್ದೀರಿ, ಎಷ್ಟೋ ಸಾರಿ. ಎಲ್ಲ ಡಿಪಾರ್ಟ್‌ಮೆಂಟ್‌ನಲ್ಲಿ ಎಲ್ಲರೂ ಕೆಟ್ಟವರು ಇದ್ದಾರೆ ಎಂದು ಹೇಳುವ ಮಾತನ್ನು ನಾವು ಯಾರೂ ಆಡಿಲ್ಲ. ಪೋಲೀಸ್ ಇರಬಹುದು, ಐಪಿಎಸ್, ಐಎಎಸ್, ಕೆಎಎಸ್ ಇರಬಹುದು. ಅಥವಾ ಎನ್ಜಿಓಗಳು ಇರಬಹುದು. ಒಳ್ಳೆಯ ಅಧಿಕಾರಿಗಳನ್ನಿಟ್ಟು ಕೊಂಡೇ ನಾವು ಅಡ್ಮಿನಿಸ್ಟ್ರೇಷನ್ ನಡೆಸುತ್ತಾ ಬಂದಿದ್ದೇವೆ. ಕೆಟ್ಟ ಅಧಿಕಾರಿಗಳು ಕೂಡ ಇದ್ದಾರೆನ್ನುವ ವಿಚಾರವನ್ನು, ತಾವೂ ಕೂಡ ಹೇಳಿದ್ದೀರಿ. ನಾವೂ ಕೂಡ ಹಿಂದೆ ಹೇಳಿದ್ದೇವೆ. ಇವತ್ತು ಚೀಫ್ ಸೆಕ್ರೆಟರಿ ಆಗಿರತಕ್ಕವರು ಬಾಯಿಗೆ ಬಂದ ಹಾಗೆ ಮಾತನಾಡಬಹುದಾ?.. ಇವತ್ತು ಈ ಮ್ಯಾಟರ್ ಸಬ್ ಜುಡಿಸ್ ಆಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಇದನ್ನು ವ್ಯಾಖ್ಯಾನಕ್ಕೆ ಕೂಡ ಹೋಗುವುದಿಲ್ಲ. Since the matter is still sub-judice, ಯಾಕೆ ನಾನು ಕೂಡ ಬೇರೆ ಬೇರೆ ವಿಚಾರಕ್ಕೆ ಹೋಗುವುದಿಲ್ಲ. ಸದನದಲ್ಲಿ ಈ ಬಗ್ಗೆ ಹಕ್ಕುಚ್ಯುತಿ ತರುವುದಕ್ಕೆ ಆಸೆ ಇಲ್ಲ, ಇದು ಬೇಡ. ಆದರೆ ಎಲ್ಲರೂ ಸೇರಿ ಈ ಬಗ್ಗೆ ವಿಚಾರ ಮಾಡೋಣ. ನನ್ನನ್ನು Pressನವರು ಬಂದು ಕೇಳಿದರು. I said 'No reaction.' ಯಾಕೆಂದರೆ ಅವರ ಮಟ್ಟಕ್ಕೆ ನಾನು ಹೋಗಬಾರದು. ನನಗೆ ಹೇಳವುದಕ್ಕೆ ಬರಲ್ಲ ಎಂತಲ್ಲ, 25 ವರ್ಷದಿಂದ ರಾಜಕಾರಣ ಮಾಡಿ ಸದನದ ಸದಸ್ಯರಾಗಿ ಬಂದಿರತಕ್ಕವರಿಗೆ, ಒಬ್ಬ ಅಧಿಕಾರಿ ಹೇಳಿದ್ದಕ್ಕೆ ಉತ್ತರ ಕೊಡಲು ನಮಗೆ

ನಿಮಗೆ ಬರುವುದಿಲ್ಲವೇ? ಉತ್ತರ ಹೇಳುವುದಕ್ಕೆ ಬರುತ್ತದೆ. ಸ್ವತಃ ಅವರು ಹೇಳಿರತಕ್ಕ ಮಾತು, ಆಡಿದಂತಹ ಪದ ಪ್ರಯೋಗ ಇದನ್ನು ವಿಚಾರ ಮಾಡೋಣ. ನಾನು ಕೂಡ ಆಡಿ ನನ್ನ ಆಸೆ ತೀರಿಸಿಕೊಳ್ಳಬಹುದಿತ್ತು. ಆದರೆ ಆ ಮಟ್ಟಕ್ಕೆ ಹೋಗಬಾರದು ಎಂಬ ದೃಷಿಯಿಂದ ತಡೆ ಹಿಡಿದುಕೊಂಡಿದ್ದೇನೆ. ಅವರು ನ್ಯಾಯಾಲಯಕ್ಕೆ ಹೋದಾಗ, ಅಲ್ಲಿ ನಾವು ವಿಚಾರ ಹೇಳೋಣ. ನಿಜ ಹೇಳಬೇಕೆಂದರೆ ಅವರೂ ಕೂಡ ವ್ಯಾಖ್ಯಾನ ಮಾಡಿದ್ದಾರಂತೆ. ಇದೇನಿದು, 'This is,I think ,too much.' ಎನ್ನತಕ್ಕ ಮಾತನ್ನು ಅವರು ಆಡಿದ್ದಾರಂತೆ ತಮಗೆ ಗೊತ್ತಿದೆ. ಸೆಂಟ್ರಲ್ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಇರಬಹುದು ಹೈಕೋರ್ಟ್ ಇರಬಹುದು, ಸುಪ್ರೀಂ ಕೋರ್ಟ್ ಇರಬಹುದು. After all they are all our own creations ಅಪಾರವಾದ ನಂಬಿಕೆ ನಾವೇ ನಿರ್ಮಾಣ ಮಾಡಿರತಕ್ಕ ಈ ಸಂಸ್ಥೆಗಳ ಬಗ್ಗೆ ಇದೆ. ಇದರ ಬಗ್ಗೆ ನಂಬಿಕೆ ಕಳೆದು ಕೊಂಡರೆ ಹೇಗೆ ಆಗುತ್ತದೆ. ಅದು ಸರಿಯಲ್ಲ ಎನ್ನುವುದಾದರೆ ಸರಿಪಡಿಸುವ ಬಗ್ಗೆ ವಿಚಾರ ಮಾಡೋಣ. ಆ ನಂಬಿಕೆ ಇದೆ. ಈಗಲೂ ಸಹ ಸಿಎಟಿ ಬಗ್ಗೆ ನಂಬಿಕೆ ಇದೆ, ಮತ್ತೊಂದರ ಬಗ್ಗೆಯೂ ಇದೆ. ಅ ನಂಬಿಕೆ ಇಟ್ಟುಕೊಂಡು ಹೋಗೋಣ. ಹಾಗೆಂದು ಹೇಳಿ ನಮ್ಮ ಅಧಿಕಾರಿ ಇರಲೀ ಯಾರೇ ಇರಲಿ, ಮನಸೋ ಇಚ್ಛೆ ಇವತ್ತಿನವರೆಗೆ ಕೂಡ ಒಂದು ಮಾತನ್ನು ಸಹ ಆಡಬಾರದು. ಇವತ್ತು ಕ್ಲಾಸ್ 4 ಸರ್ವೆಂಟ್ ಇರಬಹುದು. ನಾನು ಮುಖ್ಯಮಂತ್ರಿಯಾಗಿ ಇರಬಹುದು, ಯಾರಿಗೂ ನಾವು ಗೌರವ ಕಡಿಮೆ ಮಾಡಬಾರದು. ತಾವೂ ಕೂಡ ಅವರ ಬಗ್ಗೆ ಬೇರೆ ಆಗಿಲ್ಲ, ಮಾತನಾಡಿಲ್ಲ, ನಾನು ಓದಿ ನೋಡಿದ್ದೇನೆ. ಇದರ ಬಗ್ಗೆ ತಾವು ಎತ್ತರದಲ್ಲಿ ಮಾತನಾಡಿದ್ದೀರಿ. ಅದರ ಬಗ್ಗೆ ವ್ಯತ್ಯಾಸವಿಲ್ಲ. ಆದರೆ ಅಧಿಕಾರದಲ್ಲಿ ಇದ್ದವರು ಉದ್ಧಟತನ ಮಟ್ಟಕ್ಕೆ ಹೋದರೆ, ಪೊಲಿಟಿಕಲ್ ಫೀಲ್ಡ್‌ನಲ್ಲಿರತಕ್ಕ ನಾವು ಮಾತನಾಡಬೇಕಾಗಿತ್ತು. ಆದರೆ ನಾವು ಯಾರೂ ಮಾತನಾಡಿಲ್ಲ. ಒಬ್ಬ ಅಧಿಕಾರಿ ಮಾತನಾಡುವಾಗ, he must know his limitation first.

ಈ ರೀತಿ ಮಾತನಾಡಿದರೆ ಯಾವ ಸರ್ಕಾರ, ಯಾವ ಮುಖ್ಯಮಂತ್ರಿಗಳು ತಡೆದುಕೊಳ್ಳುತ್ತಾರೆ ಎನ್ನುವುದನ್ನು ಕೂಡ ವಿಚಾರ ಮಾಡಬೇಕಾಗುತ್ತದೆ. ಇದು ಇಷ್ಟು ಸಾಕು. Still the matter is sub-judice ಎಂದು ಹೇಳುವುದು ಬೇಡ ಎನ್ನತಕ್ಕ ದೃಷ್ಟಿಯಿಂದ ನಾನು ಸುಮ್ಮನಿದ್ದೇನೆ. It is pending before the CAT.

ಇನ್ನು ಮಾನ್ಯ ಬೈರೇಗೌಡರು ಎನ್.ಜಿ.ಇ.ಎಫ್. ಬಗ್ಗೆ ಹೇಳಿದ್ದಾರೆ.

ಈ ವಿಚಾರದಲ್ಲಿ ನಾನು ತಿಳಿದುಕೊಂಡ ಹಾಗೆ ಅಲ್ಲಿ ಜಯರಾಮನ್ ಅವರು ಯಾರೋ, ಪ್ರೈವೇಟ್ ಆಡಿಟರ್ ಏನೋ ಇರಬಹುದೆಂದು ಕಾಣುತ್ತದೆ.

SRI. C.BYREGOWDA : He is retired officer of the Indian Audit and Account Service.

SRI. S.BANGARAPPA : Government never appointed him to make and enquiry. It is subject to verification.

ಅಲ್ಲಿ ಅವರು ಮಾಡಿಕೊಂಡಿರತಕ್ಕಂಥದ್ದು ಇಂಟರ್‌ನಲ್. ಹೆಚ್ಚಿಗೆ ಅಂದರೆ ಅಕೌಂಟ್ಸ್, ಆಡಿಟಿಂಗ್ ಭಾಗ ಮಾತ್ರ ನೋಡಿದ್ದಾರೆ. The other aspects of the matter, ಮತ್ತೊಂದು ನೋಡಿ ಅವರು ಎನ್ಕ್ವಯಿರಿ ಮಾಡಿಕೊಂಡಿರತಕ್ಕಂಥ ರಿಪೋರ್ಟ್ ಅಲ್ಲ.

ಶ್ರೀ ಸಿ. ಬೈರೇಗೌಡ: ಇದಕ್ಕೆ ಸಂಬಂಧಪಟ್ಟ ಕೇಸ್ ಮತ್ತು ಹೆಸರುಗಳನ್ನು ಕೂಡ ಹೇಳಿದ್ದಾರೆ. ಯಾರ್ಯಾರು ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ: ಅದನ್ನು ಹೇಳಿದ್ದು ಹಿಂದೆ ಎನ್‌ಕ್ವಯರಿ ಆಗಿರತಕ್ಕಂಥ ವಿಚಾರದಲ್ಲಿ ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಆಗ ತಾವು ಇಲ್ಲಿ ಸರಕಾರದಲ್ಲಿದ್ದಿರಿ ಎಂದು ನನಗೆ ನೆನಪು. ಶ್ರೀ ಪ್ರಭಾಕರ್‌ರಾವ್‌ರವರು ಎನ್‌ಜಿಎಫ್‌ನಲ್ಲಿದ್ದಂಥ ಕಾಲದಲ್ಲಿ ಇಲ್ಲಿ ಪ್ರಸ್ತಾಪ ಮಾಡಿದ್ದಾಗ, ಆಗಿದ್ದಂಥ ಮಾನ್ಯ ಸಚಿವರಾದ ಜೆ.ಹೆಚ್. ಪಟೇಲ್‌ರವರು ಅವರ ವಿಚಾರದಲ್ಲಿ ಇದನ್ನು ಎನ್ಕ್ವಯರಿ ಮಾಡಿದ್ದೇವೆ. ಅದರಲ್ಲಿ ಏನೇನು ಹುರುಳಿಲ್ಲ, ಎನ್ನತಕ್ಕಂಥ Clean chit ಅನ್ನು ಅವರೇ ಕೊಟ್ಟಿರತಕ್ಕಂಥಾದ್ದು ಈ ಸದನದ ದಾಖಲೆಗಳಲ್ಲಿ ಇದ್ದಾವೆ. ಇಷ್ಟು ಈ ಬಗ್ಗೆ ಹೇಳಿದರೆ ಸಾಕು ಎಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ: ಜೆ. ಹೆಚ್. ಪಟೇಲರು ಹೇಳಿರತಕ್ಕಂಥ ವಿಚಾರದ ಬಗ್ಗೆಯೂ ಈಗ ಪ್ರಸ್ತಾಪವಾಗಿರತಕ್ಕಂಥ ವಿಚಾರಕ್ಕೂ ಸಂಬಂಧವಿಲ್ಲ. ಇಲ್ಲಿ ಬಂದಿರತಕ್ಕಂಥಾದ್ದು ಅಲ್ಲಿಯ ಅಕೌಂಟಿಂಗ್ ಪ್ರೋಸೀಜರ್ ಬಗ್ಗೆ ಆಗಿರತಕ್ಕದ್ದು ಪಟೇಲರು ಹೇಳಿರತಕ್ಕಂಥದ್ದು ಟಾರ್ಪೆಡೋ ಸಪ್ಲೈ ಮಾಡಿದ್ದರಲ್ಲ. ಆ ಬಗ್ಗೆ ಇದರ ಬಗ್ಗೆ ನಾನು ಉತ್ತರ ಹೇಳುವುದಕ್ಕಿಂತಲ್ಲೂ ಹೆಚ್ಚಾಗಿ ಮಾನ್ಯ ಮೊಯಿಲಿಯವರು ಇಲ್ಲಿಯೇ ಹೇಳಿದ್ದಾರೆ. ಅದನ್ನು ನಾನು ಹೇಳಬೇಕಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ನನಗೆ ಗೊತ್ತಿರುವ ಹಾಗೆ ಇದರಲ್ಲಿ ಇವೆಲ್ಲಾ ವಿಷಯಗಳೂ ಸೇರಿಕೊಂಡಿವೆ. ವಿವರಗಳು ದಾಖಲೆಯಲ್ಲಿ ಕಡತದಲ್ಲಿ ಇವೆ. ನನಗೆ ಗೊತ್ತಿರುವ ಹಾಗೆ ಈಗ ಇರತಕ್ಕಂಥ ಮುಖ್ಯ ಕಾರ್ಯದರ್ಶಿಯವರು ಎನ್‌ಜಿಇಎಫ್‌ನಲ್ಲಿ ಇದ್ದಂಥ ಕಾಲದಲ್ಲಿ ಅವರ ಬಗ್ಗೆ ಒಳ್ಳೆಯ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅವರ ಬಗ್ಗೆ ಆರೋಪಗಳು ಇಲ್ಲ ಎಂದು ಹೇಳಿದ್ದಾರೆ. There ends the Matter

ಜೆ.ಹೆಚ್. ಪಾಟೀಲರ್‌ವರು : ಇನ್ನೂ ಏನಾದರೂ ಇದ್ದರೆ ಅದನ್ನು ಕೂಡ ವಿಚಾರ ಮಾಡೋಣ. Still if you say that somethings is there, let me look into the matter. Government will look into the matter.

SRI. C. BYRE GOWDA : What has happened to Lok Ayukta report on submersiblie pump deal?

ಶ್ರೀ ಎಸ್. ಬಂಗಾರಪ್ಪ: ನಾನು ಉತ್ತರವನ್ನು ಕೊಡುತಿದ್ದೇನೆ. ಒಂದು ವೇಳೆ ಹಾಗೇನಾದರೂ ಇದ್ದರೆ ನಾವು ವಿಚಾರ ಮಾಡೋಣ. ಒಂದು ಸರಕಾರವೇ ಒಂದು ಒಳ್ಳೆಯ ಸರ್ಟಿಫಿಕೇಟ್ ಅನ್ನು ಕೊಟ್ಟಮೇಲೆ ಅದು ವಿಶ್ವಾಸಕ್ಕೆ ಪಾತ್ರ ಅಲ್ಲವೆ?

ಶ್ರೀ ಸಿ. ಬೈರೇಗೌಡ : ನಾನು ಮೂರನ್ನು ಉಲ್ಲೇಖ ಮಾಡಿದ್ದೇನೆ. ಇದಾದ ಮೇಲೆ ಲೋಕಾಯುಕ್ತದಿಂದ ವರದಿ ಬಂದಿದೆ. ಅದರಲ್ಲಿ He has abused his position ಎಂಬ ಒಂದು ಪದವನ್ನು ಉಪಯೋಗಿಸಿದ್ದಾರೆ. ಅದನ್ನು ತಾವುಗಳು ನೋಡಬೇಕು.

ಶ್ರೀ ಎಸ್. ಬಂಗಾರಪ್ಪ : ಆಯಿತು. ಅದನ್ನೂ ನೋಡೋಣ.

ಶ್ರೀ ಸಿ. ಬೈರೇಗೌಡ: ಅದನ್ನು ತಾವುಗಳು ಈಗಾಗಲೇ ನೋಡಿದ್ದೀರಿ. ನೋಡಿದ ಮೇಲೆ ಅದನ್ನು ತಿರುಗಿಸತಕ್ಕಂಥ ಪ್ರಯತ್ನ ಆಗಿತ್ತು. ಅದನ್ನು ಅಡ್ವೋಕೇಟ್ ಜನರಲ್‌ರವರಿಗೆ ಕಳುಹಿಸಬೇಕೆಂದು ಆಗಿತ್ತು. ಆದರೆ ಅದೇನಾಯಿತು ಎಂದು ಗೊತ್ತಿಲ್ಲ. ಅವರಿಗೆ ಕಳುಹಿಸಿದ್ದಾರೆಯೇ? ಕಳುಹಿಸಿದ್ದರೆ ಅವರು ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂಬುದನ್ನು ದಯಮಾಡಿ ತಾವು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ; ಯಾವುದೇ ಸರಕಾರದಲ್ಲಿ ಇಂಥ ವಿಚಾರಗಳನ್ನು ನೋಡಬಾರದು ಎಂಬ ವಿಚಾರವನ್ನು ನಾನು ಎಂದಿಗೂ ಹೇಳಬಾರದು. ಆದರೂ

ಕೂಡ I will get the report of the Lok Ayukta in respect of submersible pumps.ಸಬ್‌ಮರ್ಸಿಬಲ್ ಪಂಪ್ಸ್‌ನ ವಿಚಾರದಲ್ಲಿ ನೋಡೋಣ. ಜೆ.ಹೆಚ್. ಪಟೇಲ್‌ರವರು ಯಾವ ಯಾವ ವಿಚಾರಗಳಲ್ಲಿ ಏನೇನು ಉತ್ತರ ಕೊಟ್ಟಿದ್ದಾರೆ ಎಂಬುದನ್ನು ಇಟ್ಟುಕೊಳ್ಳೋಣ ಮೊಯಿಲಿಯವರು ಕೊಟ್ಟ ಉತ್ತರವನ್ನು ನೋಡೋಣ. ಎಲ್ಲಾ ವಿಚಾರಗಳನ್ನು ಕೂಡ ಪರಿಶೀಲನೆ ಮಾಡಿ ಆ ಬಗ್ಗೆ ಸರಕಾರ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ಎಂದು ಹೇಳಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇಷ್ಟು ಹೊತ್ತಿನವರೆಗೆ ಬಹಳ ಅಭಿಮಾನದಿಂದ ವಿರೋಧಪಕ್ಷದ ನಾಯಕರು, ಉಪನಾಯಕರು ಮತ್ತು ಎಲ್ಲಾ ಮಾನ್ಯ ಸದಸ್ಯರು ಮತ್ತು ಆಡಳಿತ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ನನ್ನ ಉತ್ತರವನ್ನು ಸಮಾಧಾನದಿಂದ ಕೇಳಿದ್ದಾರೆ. ಮತ್ತು ಉತ್ತರ ಕೊಡಲು ಸದಾವಕಾಶವನ್ನು ಒದಗಿಸಿಕೊಟ್ಟ ತಮಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ನನ್ನ ಪರವಾಗಿ ಮತ್ತು ನನ್ನ ಸರಕಾರದ ಪರವಾಗಿ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಎರಡು ತಿದ್ದುಪಡಿಗಳು ಇವೆ. ಒಂದು ಪ್ರೊ: ನಂಜುಂಡ ಸ್ವಾಮಿಯವರ ಹೆಸರಿನಲ್ಲಿರುವುದು ಮತ್ತು ಇನ್ನೊಂದು ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಹೆಸರಿನಲ್ಲಿ ಇರುವುದು. ಪ್ರೊ. ನಂಜುಂಡಸ್ವಾಮಿಯವರೇ ತಾವು ತಮ್ಮ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸಿ.

ಶ್ರೀ ಎಸ್. ಬಂಗಾರಪ್ಪ : ನಿಮ್ಮ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಂಡರೆ........

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ನನ್ನ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಂಡರೆ ನಿಮ್ಮ ಸರ್ಕಾರದ ಒಂದು ಕಾರ್ಯಕ್ರಮವೂ ಯಶಸ್ವಿಯಾಗುವುದಿಲ್ಲ. ಬಹಳ ಮುಖ್ಯವಾದ ತಿದ್ದುಪಡಿ ಇದು. ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದರೆ ತೆಗೆದುಕೊಳ್ಳುತ್ತೇನೆ. ಅಂದರೆ ನಿಮ್ಮ ಕಾರ್ಯಕ್ರಮಗಳು ಸಂಪೂರ್ಣ ಕೆಟ್ಟುಹೋಗುತ್ತವೆ. ಈಗಾಗಲೇ ಕೆಟ್ಟಿವೆ. ಇನ್ನೂ ಹೆಚ್ಚು ಹಣ ಖರ್ಚು ಮಾಡುತ್ತೀರಿ, ಅದೂ ಸಹ ಹಾಳಾಗುತ್ತದೆ. ಆ ಕಾರಣ ನಾನು ಎರಡು ತಿದ್ದುಪಡಿ ಮಂಡಿಸಿದ್ದೇನೆ. ಅವುಗಳ ಬಗ್ಗೆ ಮಾತನಾಡಿ ಸಭೆಯ ಒಪ್ಪಿಗೆಗಾಗಿ ಇಡುತ್ತಿದ್ದೇನೆ. ಮತಕ್ಕೆ ಹಾಕುತ್ತಿದ್ದೇನೆ. ಮೊದಲನೇ ತಿದ್ದುಪಡಿ ನಮ್ಮ ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ನೀತಿಯನ್ನು ಏನು ಬದಲಾವಣೆ ಮಾಡಲಾಗುವುದೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕೆ ಸಂಬಂಧಿಸಿದ್ದು. ಎರಡನೇ ತಿದ್ದುಪಡಿ ನಮ್ಮ ರಾಜ್ಯದ ಜಲಸಂಪತ್ತಿಗೆ ಸಂಬಂಧಿಸಿದ್ದು. ರಾಜ್ಯಪಾಲರ ಭಾಷಣದ 9ನೇ ಪ್ಯಾರಾದಲ್ಲಿ ಒಂದು ವಿಷಯ ಇದೆ. ಏನೆಂದರೆ ರಾಜ್ಯದಲ್ಲಿ ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿವೆ. ಈ ಸಂಪನ್ಮೂಲವನ್ನು ಸೂಕ್ತವಾಗಿ ಬಳಸಿಕೊಂಡಲ್ಲಿ ಜನತೆಗೆ ನಿರಂತರ ಉದ್ಯೋಗಾವಕಾಶ ದೊರಕುವುದಲ್ಲದೆ ಅವರ ಜೀವನ ಮಟ್ಟವನ್ನೂ ಉತ್ತಮ ಪಡಿಸುವ ಸರಕುಗಳು ಮತ್ತು ಸೇವೆಗಳೂ ದೊರಕುತ್ತವೆ. ಆದ್ದರಿಂದ ಕಷ್ಟ ಸಾಧ್ಯವಾದ ಈ ಗುರಿಯನ್ನು ಸಾಧಿಸುವ ಸಲುವಾಗಿ ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ನೀತಿಯನ್ನು ಪುನಃ ರೂಪಿಸಬೇಕಾಗಿದೆ. ಸಾಕಷ್ಟು ಮೂಲಭೂತ ಸೌಲಭ್ಯಗಳ ನಿರ್ಮಾಣ ತರಬೇತಿಗೆ ಏರ್ಪಾಡು ಕಚ್ಚಾಸಾಮಗ್ರಿಗಳ ಸರಬರಾಜು ಮತ್ತು ಸರಕುಗಳ ಮಾರಟಕ್ಕೆ ಹಾಗೂ ಸೇವೆ ಒದಗಿಸುವುದಕ್ಕೆ ನೆರವು ನೀಡಿಕೆ ಇವು ಈ ಕಾರ್ಯನೀತಿಯ ಮುಖ್ಯ ಅಂಶಗಳಾಗಿರುತ್ತವೆ. ಲಕ್ಷಾಂತರ ಜನರಿಗೆ ಫಲದಾಯಕ ಉದ್ಯೋಗ ನೀಡುವ ಮತ್ತು ಸ್ಥಳೀಯ ಸಂಪನ್ಮೂಲಗಳು ಹಾಗೂ ಪ್ರತಿಭೆಯನ್ನು ಬಳಸಿಕೊಂಡು ತಯಾರಿಸಲಾದ ಮತ್ತು ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲದೆ ದೇಶದಾದ್ಯಂತ ಹಾಗೂ ಹೊರದೇಶಗಳಲ್ಲೂ ಮಾರಾಟವಾಗ ಬಹುದಾದಂಥ ಸರಕುಗಳನ್ನು ತಯಾರಿಸಬಲ್ಲ ಹಾಗೂ ಸೇವೆ ಒದಗಿಸಬಲ್ಲ ಒಂದು ಕೈಗಾರಿಕಾ ವ್ಯವಸ್ಥೆಯನ್ನು ಸ್ಥಾಪಿಸುವ ದಿಶೆಯಲ್ಲಿ ನನ್ನ ಸರ್ಕಾರವು ಮೊದಲನೆಯ ಹಾಗೂ

ದೃಢವಾದ ಹೆಜ್ಜೆಯನ್ನಿಡಲು ಉದ್ದೇಶಿಸಿದೆ. ಈ ಉದ್ದೇಶಕ್ಕಾಗಿ ನನ್ನ ಸರ್ಕಾರವು ಕುಟೀರ ಕೈಗಾರಿಕೆಗಳಿಗೆ ವಿಶೇಷ ಗಮನಕೊಟ್ಟು ಗ್ರಾಮೀಣ ಕೈಗಾರಿಕೀರಣಕ್ಕಾಗಿ ನಮ್ಮ ದೇಶದಲ್ಲಿ ಇನ್ನೂ ಎಲ್ಲೂ ಕೈಗೊಳ್ಳದಿರುವಂತಹ ಒಂದು ಬೃಹತ್ ಯೋಜನೆಯನ್ನು ರೂಪಿಸಲು ಉದ್ದೇಶಿಸಿದೆ. ಈ ವಿಷಯದಲ್ಲಿ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕಾಗಿ ಕೋರುತ್ತೇನೆ.

ಶ್ರೀ ಕೆ. ಭೀಮಣ್ಣ : ರಾಜ್ಯಪಾಲರೇ ಅದನ್ನೇ ಓದಿದ್ದಾರೆ, ಮತ್ತೆ ಇವರ್‍ಯಾಕೆ ಓದಬೇಕು?

ಅಧ್ಯಕ್ಷರು : ಪ್ರೊಫೆಸರ್‌ರವರೇ, ಹಸಿದ ಹೊಟ್ಟೆ ಯಾವುದನ್ನೂ ಲೆಕ್ಕಿಸದು. ತಾವು ಹೇಳಿ? ಪ್ರೊ ಎಂ.ಡಿ. ನಂಜುಂಡಸ್ವಾಮಿ ಬೇಕಿದ್ದರೆ ಸೋಮವಾರಕ್ಕೆ ಇದನ್ನು ತೆಗೆದುಕೊಳ್ಳೋಣ. ಓದಿಯಾಗಿದೆ ಎಂದರೆ ನಮ್ಮ ಸದಸ್ಯರು ಓದಿಲ್ಲ ಎಂದು ಅರ್ಥ. ಈ ವಿಷಯದಲ್ಲಿ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ತಮ್ಮ ಆಮೂಲ್ಯ ಸಲಹೆಗಳನ್ನು ನೀಡಬೇಕೆಂದು ಕೊರುತ್ತೇನೆ. ಎಂದಿದೆ ಆ ಕೆಲಸ ನಾನು ಮಾಡುತ್ತಿದ್ದೇನೆ.

ಅಧ್ಯಕ್ಷರು: ಭೀಮಣ್ಣನವರೇ ಇದನ್ನು ಓದಿದ್ದೀರಾ?

ಪ್ರೋ. ಎಂ.ಡಿ. ನಂಜುಂಡಸ್ವಾಮಿ : ಅವರ ಪರವಾಗಿ ನಾನು ಓದಿದೆ. ಇದು ಬಹಳ ಮುಖ್ಯವಾದ ಕಾರ್ಯಕ್ರಮ. ಕರ್ನಾಟಕದಲ್ಲಿ ಮೊದಲ ಬಾರಿಗೆ ಕರ್ನಾಟಕದ ಆರ್ಥಿಕ ಮತ್ತು ಕೈಗಾರಿಕಾನೀತಿಯನ್ನು ಪುನಃ ರೂಪಿಸುವಂಥ ಒಂದು ಪ್ರಯತ್ನ ಇಲ್ಲಿ ಪ್ರಕಟವಾಗಿದೆ.

ಆ ಕಾರಣದಿಂದ ನಾನು ಮಂಡಿಸುತ್ತಿರುವಂಥ ಮೊದಲನೇ ತಿದ್ದುಪಡಿ, ಅತ್ಯಂತ ಅವಶ್ಯಕವಾಗಿ ಆಗಬೇಕು ಎನ್ನುವ ಭಾವನೆಯಿಂದ ಈ ತಿದ್ದಪಡಿಯನ್ನು ಈ ಸಭೆಯ ಮುಂದೆ ಇಡುತ್ತಿದ್ದೇನೆ. ಇದಕ್ಕೆ ಮೊದಲ ಕಾರಣ ತಿದ್ದುಪಡಿ ಹೇಗಿದೆ ಎಂದರೆ ಒಂದು, ಉದ್ಯೋಗ ಭರವಸೆಯ ಕಾನೂನು ಆಗಬೇಕು. ಯಾವ ಕಾರಣಕ್ಕಾಗಿ ಆಗಬೇಕು ಎಂದು ನಾನು ಹೇಳುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ತಾವು ನಿನ್ನೆ ಇದೇ ವಿಷಯ ಪ್ರಸ್ತಾಪಕ್ಕೆ ಬಂದಾಗ ನಾವೆಲ್ಲಾ ನೋಡಿದೆವು. ಕಾರ್ಮಿಕ ಮಂತ್ರಿಗಳು ಯಾವುದೇ ಸರ್ಕಾರ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಅಭಿಪ್ರಾಯವನ್ನು ಈ ಸದನದಲ್ಲಿ ವ್ಯಕ್ತಪಡಿಸಿದರು. ಆ ಕಾರಣಕ್ಕಾಗಿ ಈ ಸದನದಲ್ಲಿ ಪೀಠಿಕೆಯಾಗಿ ಒಂದೆರಡು ಮಾತುಗಳನ್ನು ಈ ಸರ್ಕಾರಕ್ಕೆ ನಾನು ಹೇಳಬೇಕಾಗುತ್ತದೆ. ಎಂಪ್ಲಾಯಿಮೆಂಟ್ ಗ್ಯಾರಂಟಿ ಆಕ್ಟ್ ಎಂದಕೂಡಲೇ ಬೆಚ್ಚಿಬೀಳಬೇಕಾಗಿಲ್ಲ. ಮತ್ತೆ ನಮ್ಮ ಕಾರ್ಮಿಕ ಮಂತ್ರಿಗಳು ಯಾವಿದೇ ಸರ್ಕಾರದಿಂದ ಸಾಧ್ಯವಿಲ್ಲ ಎನ್ನತಕ್ಕಂಥ ಅವಿಶ್ವಾಸವನ್ನು ಬೆಳೆಸಿಕೊಳ್ಳಬೇಕಾಗಿಲ್ಲ. ನನಗೆ ಸಂಪೂರ್ಣ ವಿಶ್ವಾಸ ಇದೆ. ನಾವು ಈಗ ಏನು ಉದ್ಯೋಗ ಭರವಸೆ ಕಾರ್ಯಕ್ರಮ ಎಂದು ಹೇಳಿ ಮಾಡುತ್ತಿದ್ದೇವೆಯೋ ಏನು ಹಣವನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದೇವೇಯೋ ಅಷ್ಟೋ ಹಣದಲ್ಲಿ ಒಂದು ಕಾನೂನಿನ ಚೌಕಟ್ಟಿನೊಳಗೆ ಫಲಾನುಭವಿಗಳು ಎಂದು ಏನು ಒಂದು ಭಾಷೆಯನ್ನು ಉಪಯೋಗಿಸುತ್ತಿದ್ದೇವೆಯೋ ಆ ಭಾಷೆ ಬಗ್ಗೆ ನನ್ನ ವಿರೋಧ ಇದೆ. ಅದು ಬೇರೆ ವಿಚಾರ. I would like to call them as participants rather than beneficiaries.

ಆದರೂ ತಮ್ಮ ಭಾಷೆಯನ್ನು ಉಪಯೋಗಿಸಿ ಹೇಳಬೇಕು ಈಗ. ಆ ಬೆನಿಫಿಸಿಯರೀಸ್ ಕೈಗೆ ಒಂದು ಹಕ್ಕನ್ನು ಕೊಡತಕ್ಕಂಥ ಕೆಲಸವನ್ನು ಮಾಡುವಂಥ ಕಾನೂನು ಇದು. ಅದನ್ನು ಮಾಡಿಲ್ಲದೇ ಇರುವುದರಿಂದಲೇ ನಮ್ಮ ಅಭಾವ ಪರಿಹಾರ ಕಾರ್ಯಕ್ರಮವಾಗಲಿ ಬರಗಾಲ ಪರಿಹಾರ ಕಾರ್ಯಕ್ರಮವಾಗಲೀ ಮಿಕ್ಕ ಯಾವುದೇ ರೋಜ್‌ಗಾರ್ ಕಾರ್ಯಕ್ರಮ ವಾಗಲೀ ಅದರಲ್ಲಿ ನೂರಕ್ಕೆ 12 ಆಣೆ ಭಾಗ ಭ್ರಷ್ಟಾಚಾರಕ್ಕೇ ಹೋಗುತ್ತಿದೆ. ನಾಲ್ಕಾಣೆ ಭಾಗ ಮಾತ್ರ ಕೆಲಸವಾಗುತ್ತಿದೆ. ಈ ಒಂದು ಅಂಶವನ್ನು

ತಾವು ಸೇರಿಸುವಂಥ ಒಂದು ಪ್ರಯತ್ನ ಈ ಎಂಪ್ಲಾಯ್ಮೆಂಟ್ಗ್ಯಾರಂಟಿಲಾ. ಇದನ್ನು ಮಹಾರಾಷ್ಟ್ರ ಸರ್ಕಾರದವರು 1977ನೇ ಇಸವಿಯಲ್ಲಿ ಮಾಡಿದ್ದಾರೆ. ಕರ್ನಾಟಕ ಸರ್ಕಾರಕ್ಕಿಂತ ಅದು ದಕ್ಷಣಾದ ಸರ್ಕಾರ ಎಂದು ನಾನೇನೂ ಹೇಳುತ್ತಿಲ್ಲ. ಕರ್ನಾಟಕ ಸರ್ಕಾರಕ್ಕಿಂತ ಸ್ವಲ್ಪ ವೈಜ್ಞಾನಿಕವಾಗಿ ಆಲೋಚನೆಮಾಡಿದಂಥ ಸರ್ಕಾರ ಮಹಾರಾಷ್ಟ್ರ ಸರ್ಕಾರ ಎಂದು ಹೇಳುತ್ತೇನೆ ಅಷ್ಟೆ. ಅಷ್ಟೇ ವೈಜ್ಞಾನಿಕವಾಗಿ ತಾವು ಆಲೋಚನೆಯನ್ನು ಮಾಡಿದರೆ ಕರ್ನಾಟಕದಲ್ಲೂ ಈ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಕಾನೂನನ್ನು ಮಾಡುವುದಕ್ಕೆ ಅಸಾಧ್ಯವೇನೂ ಇಲ್ಲ, ಇದನ್ನು ಅತ್ಯವಶ್ಯಕವಾಗಿ ಮಾಡಬೇಕು. ಈಗ ಒಂದು ಉದಾಹರಣೆ ಜ್ಞಾಪಕಕ್ಕೆ ಬರುತ್ತಿದೆ. ಯಾವ ರೀತಿ ನಮ್ಮ ದಲಿತರಿಗೋಸ್ಕರ ಉದ್ಯೋಗಭರವಸೆ ಕಾರ್ಯಕ್ರಮ ಅಥವಾ ಬೇರೆ ಕಾರ್ಯಕ್ರಮಗಳು ಇವೆಯೋ ಅವು ಜಾರಿಗೆಬಂದಿಲ್ಲ. ಉದಾಹರಣೆಗೆ ಈ ಇಪ್ಪತ್ತು ಅಂಶಗಳ ಕಾರ್ಯಕ್ರಮ, ಉದಾಹರಣೆಗೆ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಪೌಷ್ಟಿಕ ಆಹಾರ ಕೊಡುವಂಥ ಒಂದು ಕಾರ್ಯಕ್ರಮ ಇದೆ. ಬಹಳ ದಿವಸಗಳಿಂದ ನಮ್ಮ ದೇಶದಲ್ಲಿ ಆದರೆ ನನ್ನ ಕಣ್ಣಿಗೆ ಇವತ್ತಿಗೂ ಅದು ಬಿದ್ದಿಲ್ಲ. ಯಾವುದೇ ಗರ್ಭಿಣಿಯರಿಗೆ, ಯಾವ ಬಾಣಂತಿಯರಿಗೆ ಅದು ಸಿಕ್ಕಿಲ್ಲ. ಆ ಪೌಷ್ಟಿಕ ಆಹಾರವೆಲ್ಲಾ ನಮ್ಮ ರಾಜ್ಯದ ಎಲ್ಲಾ ಬಿ.ಡಿ.ಓ.ಗಳೇ ತಿಂದು ಹಾಕುತ್ತಿದ್ದಾರೆ. ನಮ್ಮ ಬಿ.ಡಿ.ಓ.ಗಳೇ ನಿತ್ಯ ಗರ್ಭಿಣಿಯರು ಮತ್ತು ನಿತ್ಯ ಬಾಣಂತಿಯರು. ಇದನ್ನು ಕೇವಲ ಒಂದು ಉದಾಹರಣೆಯಾಗಿ ಹೇಳುತ್ತಿದ್ದೇನೆ ಅಷ್ಟೆ. ಇನ್ನು ಯಾವುದೇ ಕೆಲಸ ವಾದರೂ ಅಷ್ಟೆ. ಕಾಗದದ ಮೇಲೆ ಕೆಲಸಗಳಾಗುತ್ತಿವೆ. ಅದಕ್ಕೆ ಕಾರಣ ಫಲಾನುಭವಿಗಳಿಗೆ ಕಾರ್ಯಕ್ರಮ ಏನು ಇದೆ ಎನ್ನುವುದು ಮೊದಲು ಗೊತ್ತಿಲ್ಲ ಮತ್ತೆ ಫಲಾನುಭವಿಗಳು ಭಿಕ್ಷುಕರಾಗಿ ಈ ಇಂಪ್ಲಿಮೆಂಟಿಂಗ್ ಏಜನ್ಸಿಯ ಮುಂದೆ ನಿಲ್ಲುವಂಥ ಒಂದು ದುಸ್ಥಿತಿ. ಇದನ್ನು ತಪ್ಪಿಸುವುದಕ್ಕೋಸ್ಕರ ಈ ಕಾನೂನನ್ನು ಮಾಡಿರುವುದು ಈ ಸರ್ಕಾರ ಭಯ ಬೀಳಬೇಕಾಗಿಲ್ಲ. ಇದರ ಒಂದು ಅನುಕರಣೆ ಮಾಡಿದರೆ ಸಾಕು. ಮಹಾರಾಷ್ಟ್ರದಲ್ಲಿ ಆಗಿರತಕ್ಕಂಥಹ ಎಂಪ್ಲಾಯ್‌ಮೆಂಟ್ ಗ್ಯಾರೆಂಟಿ ಆಕ್ಟ್, ಆದರಲ್ಲೂ ಇಡೀ ರಾಜ್ಯದ 19 ಜಿಲ್ಲೆಗೂ ಈ ಕಾನೂನನ್ನು ಏಕಕಾಲಕ್ಕೆ ಅನ್ವಯಿಸಬೇಕಾಗಿಲ್ಲ. ತಾವು ಬೇಕಿದ್ದರೆ ಬಾಗಶಃ ಅನ್ವಯ ಮಾಡಿ ನಾಲ್ಕು ವರ್ಷದೊಳಗೆ ಈ ಕರ್ನಾಟಕದ ಯಾವುದೇ ಪ್ರದೇಶ ಬಿಟ್ಟು ಹೋಗುದ ರೀತಿ ನೋಡಿಕೊಳ್ಳುವಂತಹ ಒಂದು ವ್ಯವಸ್ಥೆಗೆ ನಾವು ಬರಬಹುದು. ಈಗ ನಾವು ಕೋಟ್ಯಂತರ ರೂಪಾಯಿಯನ್ನು ಖರ್ಚು ಮಾಡುತ್ತಿದ್ದೇವೆ. ಮತ್ತೆ ಈಗ ಹೊಸ ಕಾರ್ಯಕ್ರಮವನ್ನು ಹಾಕಬೇಕೆಂದಿದ್ದಾರೆ. ಆ ಕಾರಣ ಹಣದ ಕೊರತೆ ಏನೂ ಬರುವುದಿಲ್ಲ. ಈ ಕಾನೂನು ಒಳಗಡೆ ನೈಸರ್ಗಿಕ ಸಂಪನ್ಮೂಲಗಳನ್ನು ಸೂಕ್ತವಾಗಿ ಬಳಸಿಕೊಂಡಲ್ಲಿ ಎನ್ನುವ ಒಂದು ವಾಕ್ಯವಿದೆ. ಇದನ್ನು ಯಾವ ರೀತಿ ಬಳಸಬೇಕೆಂದು ಈ ಸರ್ಕಾರದವರು ಆಲೋಚನೆ ಮಾಡಿದ್ದೀರೆಂದು ನಾನು ತಿಳಿದುಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ನೈಸರ್ಗಿಕ ಸಂಪನ್ಮೂಲಗಳನ್ನು ಸೂಕ್ತವಾಗಿ ಉಪಯೋಗಿಸಿ ಆಯಾ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಂತಹ ಯೋಜನೆ ಇದೆಯೋ? ಅಥವಾ ನೈಸರ್ಗಿಕ ಸಂಪತ್ತಿಗೆ ಸಂಬಂಧಿಸಿದಂತೆ ಈಗ ಏನೇನು ಕಾನೂನುಗಳು ಇವೆ. ಕರ್ನಾಟಕದ ನೈಸರ್ಗಿಕ ಸಂಪಂತ್ತು, ತಮಿಳುನಾಡಿನ ಗುತ್ತಿಗೆದಾರ ತೆಗೆದುಕೊಂಡು ಹೋಗಬಹುದು. ಅಥವಾ ಮಹಾರಾಷ್ಟ್ರದ ಗುತ್ತಿಗೆ ದಾರ ತೆಗೆದುಕೊಂಡು ಹೋಗಬಹುದು ಅಥವಾ ಬಿಜಾಪುರದಲ್ಲಿರುವ ನೈಸರ್ಗಿಕ ಸಂಪತ್ತು ಅನ್ನು ಮೈಸೂರಿನಲ್ಲಿರುವ ಗುತ್ತಿಗೆದಾರ ಕೊಂಡುಕೊಳ್ಳಬಹುದು ಅನ್ನುವಂತಹ ಕಾನೂನಿನ ಚೌಕಟ್ಟಿನಲ್ಲಿ ತಾವು ಸೂಕ್ತವಾಗಿ ಬಳಸುತ್ತಿರೋ ಅಥವಾ ತಾವು ಇಲ್ಲಿ ಗಾಂಧೀಜಿಯವರ ಭಾವ ಚಿತ್ರವನ್ನು ಮೇಲೆ ಹಾಕಿದ್ದೀರಿ. ಆ ವಿಚಾರದ ಆಧಾರದ ಮೇಲೆ ಮಾಡುತ್ತಿರೋ? ಗ್ರಾಮ ಸ್ವರಾಜ್ಯದ ಕಲ್ಪನೆಗೆ ಬರುವ ಸರ್ಕಾರ ಅಲ್ಲ ಇದು. ಇದು ನನಗೆ ಗೊತ್ತಿದೆ ಆದರೆ ಕನಿಷ್ಟ ನಾವು ಈ ಚೌಕಟ್ಟಿನಲ್ಲಿ ಬರಬಹುದು. ಕನಿಷ್ಟ ಆಯಾ ಜಿಲ್ಲೆಯಲ್ಲಿರತಕ್ಕ ನೈಸರ್ಗಿಕ ಸಂಪತ್ತು, ಆಯಾ ಜಿಲ್ಲಾಪರಿಷತ್ತಿನ ಸ್ವತ್ತು

ಅನ್ನುವಂತಹ ಒಂದು ತೀರ್ಮಾನಕ್ಕಾದರೂ ಬಂದು ನಾವು ಕೆಲಸಮಾಡಿದರೆ ಆಯಾ ಜಿಲ್ಲೆಯ ನೈಸರ್ಗಿಕ ಸಂಪತ್ತನ್ನು ಸಂಪೂರ್ಣವಾಗಿ ನಾವು ಉಪಯೋಗಿಸಿಕೊಂಡು ಅಲ್ಲಿ ಉದ್ಯೋಗಗಳನ್ನು ಸೃಷ್ಟಿಮಾಡುವಂತಹ ಒಂದು ಪರಿಸ್ಥಿತಿಗೆ ಬರುತ್ತೇವೆ. ಇದನ್ನು ಬದಲಾವಣೆಗೆ ಅಳವಡಿಸಿರುವಂತಹ ಕಾನೂನು ಮಹಾರಾಷ್ಟ್ರದಲ್ಲಿರುವ ಆ ಕಾನೂನ್ನು ಮಾಡಿದ್ದಾರೆ. ಮಹಾರಾಷ್ಟ್ರದ ಕಾನೂನಿಗಿಂತಲೂ ಉತ್ತಮವಾದಂತಹ ತಿದ್ದುಪಡಿ ಇರುವಂತಹ ಕಾನುನುಗಳನ್ನು ನಾವು ಜಾರಿಗೆ ತರಬಹುದು. ಮತ್ತೆ ಕುಟೀರ ಕೈಗಾರಿಕೆಗಳು ಇತ್ಯಾದಿ ಬಗ್ಗೆ ಚರ್ಚೆ ಆಗಿದೆ. ಮತ್ತೆ ಲಕ್ಷಾಂತರ ಜನರಿಗೆ ಫಲದಾಯಕ ಉದ್ಯೋಗಗಳನ್ನು ಈ ಹೊಸ ಆರ್ಥಿಕನೀತಿಯಲ್ಲಿ ಸೃಷ್ಟಿ ಮಾಡುತ್ತೇವೆಂದು' ಈ ಸರ್ಕಾರದವರು ಹೇಳುತ್ತಿದ್ದಾರೆ. ಇದನ್ನು ಯಾವರೀತಿ ಮಾಡಬೇಕು ಅಂತ ಇದ್ದಾರೆಂದು ನಾನು ಕೇಳುತ್ತಿದ್ದೇನೆ. ಈ ಬಗ್ಗೆ ನಾನು ,ಸಣ್ಣ ಕೈಗಾರಿಕಾ ಮಂತ್ರಿಯವರ ಜೊತೆ ಚರ್ಚೆ ಮಾಡಿದ್ದೆ, ಆದರೆ ಅನುಭವದ ಮೇಲೆ ನಾನು ಮಾತನಾಡುತ್ತಿದ್ದೇನೆ. ಸ್ವಯಂ ಉದ್ಯೋಗದ ಒಂದು ಕಾರ್ಯಕ್ರಮ ಏನಿದೆ ಅದರ ಚೌಕಟ್ಟಿನಲ್ಲಿ ಮಾಡುತ್ತೀರೋ ಅಥವಾ ಈ ಸಣ್ಣ ಕೈಗಾರಿಕೆಗಳನ್ನು ಖಾಸಗಿ ಉದ್ಯಮಿಗಳಿಗೆ ನೆರವು ಕೊಡುವುದರ ಮೂಲಕ ಮೂಡಿಸುತ್ತೀರೋ ಅಥವಾ ಈ ಸಣ್ಣ ಕೈಗಾರಿಕೆಗಳನ್ನು ಸಹಕಾರಿ ಕ್ಷೇತ್ರದಲ್ಲಿ ಮಾಡಿಸುತ್ತೀರೋ ಅಥವಾ ಈ ಸಣ್ಣ ಕೈಗಾರಿಕೆಗಳ ಸ್ಥಾಪನೆ ಮತ್ತು ನಿರ್ವಹಣೆಯನ್ನು ಜಿಲ್ಲಾ ಪರಿಷತ್ತಿನ ಮೂಲಕ ಮಾಡುತ್ತಿರೋ ಅಥವಾ ತಾಲ್ಲೂಕು ಪಂಚಾಯಿತಿ ಮೂಲಕ ಮಾಡುತ್ತೀರೋ ಎಂಬುದು ಬಹಳ ಮುಖ್ಯವಾದಂಥ ವಿಚಾರ. ಏಕೆಂದರೆ ಈಗಿರುವಂತಹ ಯಾವುದೇ ಕಾರ್ಯಕ್ರಮ 'ಅದು ಸ್ವಯಂ ಉದೋಗ ಸ್ಕೀಮ್ ಇರಬಹುದು ಅಥವಾ ಖಾಸಗಿಯವರಿಗೆ ಕೊಟ್ಟು ನಾವು ಹಣ ಹಾಳುಮಾಡಿದ್ದೇವಲ್ಲಾ ಅದು ಇರಬಹುದು ಅಥವಾ ಈಗಿನ ಕಾರ್ಯಕ್ರಮ ಏನಿದೆ, ಈ ಎಲ್ಲಾ ಜನರ ಹಣವನ್ನು ದುರುಪಯೋಗ ಮಾಡಿಕೊಳ್ಳುವಂತಹ ಕಾರ್ಯಕ್ರಮಗಳು ಆಗಬಹುದು. ಆಕಾರಣ ಮಹಾರಾಷ್ಟ್ರದವರು ಮಾಡಿರುವಂತಹ ಒಂದು ಚೌಕಟ್ಟಿಗೆ ನಾವು ಬಂದರೆ the implementing agencies are Zilla Parishads and Taluk Panchayats. ನಾವು ಅದೇ ಒಂದು ಚೌಕಟ್ಟಿಗೆ ಬಂದರೆ ಹಣವನ್ನು ಸದುಪಯೋಗ ಮಾಡಿ ನೈಸರ್ಗಿಕ ಸಂಪತ್ತು ಮತ್ತು ಬೇರೆ ಎಲ್ಲಾ ಸಂಪನ್ಮೂಲಗಳನ್ನು ಸಾಮೂಹಿಕ ಒಡೆತನದೊಳಗೆ ಇಟ್ಟುಕೊಂಡು ನಾವು ನಮ್ಮ ಉದ್ಯೋಗ ಭರವಸೆಯ ಕಾರ್ಯಕ್ರಮವನ್ನು ನಾವು ಕಾನೂನಿನ ಚೌಕಟ್ಟಿನೊಳಗೆ ಮಾಡಬಹುದು. ಈ ಮೊದಲನೆಯ ತಿದ್ದುಪಡಿಯ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟವಿಲ್ಲ. ಏಕೆಂದರೆ ತಾವು ಹೇಳಿದ ಹಾಗೆ ಇದು ಸೂಕ್ತ ಸಮಯ ಅಲ್ಲ. ಎರಡನೆಯದು ಬಹಳ ಮುಖ್ಯವಾದಂತಹ ಒಂದು ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು 17ನೇ ಪ್ಯಾರಾಗ್ರಾಫ್‌ನಲ್ಲಿ ಪ್ರಕಟಣೆ ಮಾಡಿದ್ದಾರೆ. ಭೂಸಾರ ಮತ್ತು ತೇವಾಂಶ ಸಂರಕ್ಷಣೆ ಬೆಳೆ ಪದ್ಧತಿಯಲ್ಲಿ ಬದಲಾವಣೆ ಮತ್ತು ಹೆಚ್ಚು ಪ್ರದೇಶಗಳಲ್ಲಿ ಮರಗಳನ್ನು ಬೆಳೆಸುವುದರಲ್ಲಿ ಈ ಕ್ರಮಗಳನ್ನು ಇದು ಜಲ ವಿಭಾಗದ ಪ್ರದೇಶಗಳಲ್ಲಿ ಕೈಗೊಂಡ ಒಣ ಭೂಮಿಯ ಅಭಿವೃದ್ಧಿ ಕಾರ್ಯಕ್ರಮ ವಾಟರ್‌ಷೆಡ್ ಮ್ಯಾನೇಜ್‌ಮೆಂಟ್ ಇದು ಬಹಳ ಅತ್ಯುತ್ತಮವಾದ ಕಾರ್ಯಕ್ರಮ. ಆದರೆ ನಮ್ಮ ಬೆಂಗಳೂರಿನಲ್ಲಿ ಸ್ಥಾಪನೆಯಾಗಿರುವಂಥ ನ್ಯಾಷನಲ್ ಸೆಂಟರ್ ಫಾರ್ ವಾಟರ್‌ಷೆಡ್ ಮ್ಯಾನೇಜ್‌ಮೆಂಟ್ ಇದರ ಕಾರ್ಯಕ್ರಮ ಕೇವಲ ಒಣ ಭೂಮಿ ಮೇಲೆ ಬೀಳುವಂಥ ನೀರನ್ನು ಅದೇ ಭೂಮಿಯಲ್ಲಿ ಹಿಡಿದು ನಿಲ್ಲಿಸುವಂಥ ಒಂದುಕೆಲಸ ಮಾತ್ರ ಅಧ್ಯಕ್ಷರೆ, ಇದನ್ನು ಸೋಮವಾರ ಬೇಕಾದರೆ ಮುಂದುವರೆಸೋಣ. ಇದರ ಬಗ್ಗೆ ನಿಜ ಹೇಳಬೇಕಾದರೆ, ಇವು ಇನ್ನೂ ವಿವರವಾಗಿ ಮಾತನಾಡತಕ್ಕ ತಿದ್ದುಪಡಿಗಳು. ಈಗ ನಾನು ಎಲ್ಲಾ ಸದಸ್ಯರ ಪರಿಸ್ಥಿತಿ ತಿಳಿದುಕೊಂಡು ನಾನು ಮೊಟಕು ಮಾಡುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ: ಅಧ್ಯಕ್ಷರೇ, ಮಾನ್ಯ ನಂಜುಂಡಸ್ವಾಮಿಯವರು ವಿಷಯವನ್ನು ಬಹಳ ಒಳ್ಳೆಯ ರೀತಿಯಲ್ಲಿ ಇಟ್ಟಿದ್ದಾರೆ. ಏಕೆಂದರೆ ಕುಟೀರ ಕೈಗಾರಿಕೆ, ಎಂಪ್ಲಾಯ್‌ಮೆಂಟ್

ಗ್ಯಾರೆಂಟಿ ವಿಚಾರಗಳು, ಇವು ಸಣ್ಣ ವಿಚಾರಗಳು ಅಲ್ಲ. ಇದರ ಬಗ್ಗೆ ಬಹಳ ದೊಡ್ಡ ವ್ಯಾಖ್ಯಾನ ತಮ್ಮಿಂದ ಆಗಲೇಬೇಕು. ಅದನ್ನು ನಾವು ಕೇಳಲೇಬೇಕು. ಬಹಳ ಜನರು ಇದರಲ್ಲಿ ಭಾಗವಹಿಸುವುದಕ್ಕೆ ಸಿದ್ಧರಾಗಿರುವಂಥ ವಿಚಾರ ಇದಕ್ಕೆ ಸೆಪರೇಟ್ ಆಗಿ ಸಬ್ಜೆಕ್ಟ್‌ನ್ನು ನಾವು ಬಜೆಟ್‌ನಲ್ಲಿ ಕೂಡ ಹಾಕಿದ್ದೇವೆ. ಆ ಸಂದರ್ಭದಲ್ಲಿ ಬಹಳ ವಿವರವಾಗಿ ಮಾತನಾಡಬೇಕೆಂದು ತಮ್ಮ ಆಸೆ. ಈ ವಿಷಯ ಪ್ರತ್ಯೇಕವಾಗಿಯೇ ಇದೆ, ಆಗ ಅದನ್ನು ತೆಗೆದುಕೊಳ್ಳೋಣ. ಈಗ ಎಲ್ಲಾ ಸದಸ್ಯರು ಬೆಳಿಗ್ಗೆಯಿಂದ ಇಲ್ಲಿಯೇ ಇರುವುದು ತಮಗೆ ಗೊತ್ತಿದೆ. ಎಲ್ಲರಿಗೂ ಊಟದ ಕಡೆ ನೆನಪು ಆಗಿದೆ. ಆಮೇಲೆ ತಾವು ಗ್ರೌಂಡ್‌ವಾಟರ್ ವಿಚಾರ ಹೇಳಿದ್ದಿರಿ. ಇರಿಗೇಷನ್ ವಿಚಾರ ಬಂದಾಗ ಈ ಗ್ರೌಂಡ್ ವಾಟರ್ ವಿಚಾರ ತೆಗೆದುಕೊಳ್ಳಬಹುದು. ಇವುಗಳ ಬಗ್ಗೆ ಬಜಟ್‌ನಲ್ಲಿ ಮಾತನಾಡಲಿಕ್ಕೆ ಅವಕಾಶ ಇದೆ ಆದ್ದರಿಂದ ಅವುಗಳ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಇಟ್ಟುಕೊಳ್ಳೋಣ ಎಂದು ನಾನು ಸಲಹೆ ಮಾಡುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಈ ಜಲಸಂಪತ್ತಿನ ಬಗ್ಗೆ ನಾನು ಒಂದೆರಡು ಮಾತನಾಡಿದ ಮೇಲೆ ನಮ್ಮ ಎಲ್ಲ ಸದಸ್ಯರನ್ನು ಬಿಡುಗಡೆ ಮಾಡಬಹುದು ಎಂದು ಕಾಣುತ್ತದೆ. ವಾಟರ್‌ಷೆಡ್ ಮ್ಯಾನೇಜ್‌ಮೆಂಟಿನ ಒಂದು ರಾಷ್ಟ್ರೀಯ ಸಂಸ್ಥೆ ಬೆಂಗಳೂರಿನಲ್ಲಿದೆ. ಆದರೆ ಅದು ಕೇವಲ ಒಣ ಬೇಸಾಯದ ಭೂಮಿ ಮೇಲೆ ಬೀಳುವ ನೀರನ್ನು ಅದೇ ಭೂಮಿಯಲ್ಲಿ ಹಿಡಿದು ನಿಲ್ಲಿಸುವಂಥ ಒಂದ ಕಾರ್ಯಕ್ರಮ ಮಾಡುತ್ತದೆ. ಆದರೆ ನಮ್ಮ ಸಲಹೆ ಏನೆಂದರೆ ಈ ವಾಟರ್‌ಷೆಡ್ ಮ್ಯಾನೇಜ್‌ಮೆಂಟ್ ಕಾರ್ಯಕ್ರಮ ಮಾಡುತ್ತದೆ. ಆದರೆ ನಮ್ಮ ಸಲಹೆ ಏನೆಂದರೆ ಈ ವಾಟರ್‌ಷೆಡ್ ಮ್ಯಾನೇಜ್‌ಮೆಂಟಿಗೂ ಕೆರೆಗಳಿಗೂ ಮತ್ತು ಬಾವಿಗಳಿಗೂ ನಾವು ಸಂಬಂಧವನ್ನು ಕಲ್ಪಿಸಬೇಕು. ಮೊನ್ನೆ ನಮ್ಮ ವೆಂಕಟಪ್ಪನವರು ನೀರು ಇಲ್ಲ, ನೀರು ಇಲ್ಲ ಎಂದು ಮಾತನಾಡುತ್ತಿದ್ದರು. ಈಗ ಅವರರು ನಮಗೆ ಹೊಟ್ಟೆ ಹಸಿವು ಎಂದು ಹೇಳುತ್ತಾರೆ. ನಮಗೆ ಸಮಸ್ಯೆ ಬಂದಿರುವುದು ಬಿಕಾಸ್ ಆಪ್ ಓವರ್‌ಡ್ರಾಪ್ಟ್ ಆಫ್ ಗ್ರೌಂಡ್ ವಾಟರ್ಸ್ ಈ ಓವರ್ ಡ್ರಾಪ್ಟಿನ ಬಗ್ಗೆ ನಾವು ಇನ್ನೂ ಕಾನೂನು ಮಾಡಿಲ್ಲ. ನಮ್ಮ ನೀರಿನ ಸಮಸ್ಯೆಗೆ ಮೊದಲ ಕಾರಣ ಏವೆರಿ ಸ್ಪೀಡಿ ಓವರ್ ಗ್ರಾಪ್ಟ್ ಆಫ್ ದಿ ಗ್ರೌಂಡ್ ವಾಟರ್ ಅದರ ಬಗ್ಗೆ ಬೇರೆ ದೇಶಗಳಲ್ಲಿ ಕಾನೂನು ಆಗಿವೆ. ನನಗೆ ನೆನಪಿರುವ ಪ್ರಕಾರ ಮಾನ್ಯ ಅಧ್ಯಕ್ಷರು ಟೆಕ್ಸಾಸ್‌ನಲ್ಲಿ ವ್ಯಾಸಂಗ ಮಾಡಿದವರು. ಟೆಕ್ಸಾಸ್ ಅಕ್ಕ ಪಕ್ಕ ಅರಿಜೋನ್ ಇದೆ. ಅರಿಜೋನ್‌ನ ಮಾಹಿತಿಗಳನ್ನು ನಾನು ತಿಳಿಸಿದ್ದೇನೆ. ಅದಕ್ಕೆ ಕಾರಣ ಒಂದು ಇದೆ. ಕರ್ನಾಟಕ ಯಾವ ಹೈಟ್‌ನಲ್ಲಿದೆ ಎಬವ್ ಸೀ ಲೆವೆಲ್ ಆರಿಜೋನ್ ಕೂಡ ಅಷ್ಟೇ ಹೈಟ್‌ನಲ್ಲಿದೆ. ಆ ಕಾರಣ ಅರಿಜೋನ್ ಸ್ಟೇಟ್‌ನವರು ಎದುರಿಸುತ್ತಿರುವಂಥ ಸಮಸ್ಯೆಗಳು ಏನಿವೆ ಅವರು ಏನೇನು ಕಾನೂನು ಮಾಡಿದ್ದಾರೆ ಎನ್ನುವುದನ್ನು ನಾನು ತರಿಸಿ ಓದಿದಮೇಲೆ ಈ ತೀರ್ಮಾನಕ್ಕೆ ಬಂದಿದ್ದೇನೆ. ಅಲ್ಲಿ ಯಾವ ರೀತಿ ವಾಟರ್‌ಮ್ಯಾನೇಜ್‌ಮೆಂಟ್ ಮಾಡುತ್ತಿದ್ದಾರೆ. ದೆ ಹ್ಯಾವ್ ಮೇಡ್ ಅ ಕ್ರಾಂಪ್ರೆಹೆನ್ಸೀವ್ ವಾಟರ್ ರಿಸೋರ್‌ಸಸ್. ನೀವು ನಮ್ಮಲ್ಲಿ ಅದನ್ನು ಮಾಡದೇ ಇದ್ದರೆ ನಾವು ನಮ್ಮ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ದಿಕ್ಕಿನಲ್ಲಿ ಕರ್ನಾಟಕ ಸರ್ಕಾರ ಏನೂ ಹಿಂದೆ ಬಿದ್ದಿಲ್ಲ. ಕರ್ನಾಟಕ ಸರ್ಕಾರ 1987ರಲ್ಲಿ ಒಂದು ಗ್ರೌಂಡ್‌ವಾಟರ್ ಬಿಲ್ ಮಾಡಿದೆ. ಗ್ರೌಂಡ್ ವಾಟರ್ ಬಿಲ್ ಮಾಡಿಯೂ ಕೂಡ ಮತ್ತೆ ಎಂಪ್ಲಾಯ್‌ಮೆಂಟ್ ಗ್ಯಾರೆಂಟಿ ಆಕ್ಟ್ ಅಂದಕೂಡಲೇ ಎಷ್ಟು ಭಯ ಬೀಳುತ್ತಾರೋ ಆ ಗ್ರೌಂಡ್ ವಾಟರ್ ಬಿಲ್ಲನ್ನು ಸದನಕ್ಕೆ ತಂದು ಕಾನೂನು ಮಾಡುವುದಕ್ಕೆ ಅಷ್ಟೇ ಭಯ ಬಿದ್ದರು ಎಂದು ಕಾಣುತ್ತದೆ. ಏಕೆಂದರೆ, ರೈತರು ಬೇಜಾರು ಮಾಡಿಕೊಳ್ಳಬಹುದು ಎನ್ನುವ ಕಾರಣದಿಂದ ಆದರೆ ರೈತರ ಪರವಾಗಿ ನಾನೇ ಇಲ್ಲಿ ನಿಂತು ಮಾತನಾಡುತ್ತಿದ್ದೇನೆ. ರೈತರಿಗೆ ನಾವು ಸಮಾಧಾನ ಹೇಳಬಹುದು. ಅವರಿಗೆ ಶಿಕ್ಷಣ ಕೊಡಬಹುದು. ಇದು ಎಷ್ಟು ಮುಖ್ಯವಾದಂಥ ವಿಚಾರ. ನಮ್ಮ ಗ್ರೌಂಡ್ ವಾಟರ್ ರಿಸೋರ್ಸಸ್ ಮತ್ತು ಸರಫೇಸ್ ವಾಟರ್

ರಿಸೋರ್ಸ್‌ಸನ್ನು ಎಷ್ಟು ಜೋಪಾನವಾಗಿ ನಾವು ಕಾಪಾಡಿಕೊಳ್ಳಬೇಕು ಮತ್ತು ಅದಕ್ಕೆ ಏನು ಸಮಗ್ರ ಕಾನೂನು ಆಗಬೇಕು ಎನ್ನುವುದರ ಬಗ್ಗೆ ನಾವು ರೈತರಿಗೆ ತಿಳುವಳಿಕೆ ಕೊಟ್ಟು ಮಾಡಬಹುದು. ಆದುದರಿಂದ ನಾನು ಈ ಸದನದಲ್ಲಿ ತಮ್ಮಮೂಲಕ ವಿನಂತಿಮಾಡಿಕೊಳ್ಳುವುದೇನಂದರೆ ಈ ಎರಡೂ ಕಾನೂನುಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸೇರಿಸಿದರೆ ನಮ್ಮ ರಾಜ್ಯಕ್ಕೆ ಕಲ್ಯಾಣವಾಗುತ್ತದೆ. ಇದಕ್ಕೆ ಸರ್ವಾನುಮತದಿಂದ ನಮ್ಮ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ಅಧ್ಯಕ್ಷರು: ಮಾನ್ಯ ಪ್ರೊ. ನಂಜುಂಡಸ್ವಾಮಿಯವರು ಮಂಡಿಸಿದ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ. ಈ ಪ್ರಸ್ತಾವನೆಯ ಕೊನೆಯಲ್ಲಿ ಇಲ್ಲಿ ನಮೂದಿಸಿವುದನ್ನು ಸೇರಿಸುವುದು ಏನೆಂದರೆ ಮಾನ್ಯ ರಾಜ್ಯಪಾಲರ ಬಾಷಣದಲ್ಲಿ ಈ ಅಧಿವೇಶನದಲ್ಲಿಯೇ ರಾಜ್ಯದ ಎಲ್ಲ ವಯಸ್ಕರಿಗೂ ಉಪಯೋಗವಾಗುವ ಉದ್ಯೋಗ ಬರವಸೆ ನೀಡುವ ಉದ್ಯೋಗ ಖಾತರಿ ಕಾಯಿದೆಯ ಪ್ರಸ್ತಾವ ಇಲ್ಲದೇ ಇರುವುದು ವಿಷಾದನೀಯ.

ಎರಡನೆಯ ತಿದ್ದುಪಡಿ ಈಗಿದೆ.

"ಆದರೆ ರಾಜ್ಯದಲ್ಲಿ ಅಂತರ್ಜಲ ನಿಯಂತ್ರಣ ನಿಯಮ ಹಾಗೂ ತೇವಾಂಶ ಸಂರಕ್ಷಣಾ ಕಾರ್ಯಕ್ರಮದ ಬಗ್ಗೆ ಒಂದು ವಿಧೇಯಕವನ್ನು ಈ ಅಧಿವೇಶನದಲ್ಲಿಯೇ ತರುವ ಬಗ್ಗೆ ಪ್ರಸ್ತಾವ ಇಲ್ಲದೇ ಇರುವುದು ವಿಷಾದನೀಯ.

ಎರಡೂ ಪ್ರಸ್ತಾವಗಳು ತಿರಸ್ಕರಿಸಲ್ಪಟ್ಟವು.

ಅಧ್ಯಕ್ಷರು: ಈಗ ಮಾನ್ಯ ಸದಸ್ಯರವರ ತಿದ್ದುಪಡಿ ಇದೆ..,...

ಶ್ರೀ ವಾಟಾಳ್ ನಾಗರಾಜ್: ಈಗ 3:15 ಗಂಟೆಯಾಗಿದೆ. ಇನ್ನು ಒಂದು ಗಂಟೆಯ ನಂತರ ಮತ್ತೆ ಸೇರೋಣ. ಇನ್ನೂ ಗ್ರಾನೈಟ್ ಬಗ್ಗೆ ನಿರ್ಣಯ ಇದೆ, ಅದರ ಬಗ್ಗೆ ಮಾತನಾಡುವುದು ಇದೆ.

ಅಧ್ಯಕ್ಷರು: ಈಗ ತಿದ್ದುಪಡಿ ಇದೆ. ಇದನ್ನು.....

ಶ್ರೀ ವಾಟಾಳ್ ನಾಗರಾಜ್: ಈಗ ಆಗುವುದಿಲ್ಲ,

ಶ್ರೀ ಪಿ.ಜಿ.ಆರ್ ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದಮೇಲೆ ನಾನು ಬಾಷಣ ಮಾಡತಕ್ಕ ಸಂದರ್ಭದಲ್ಲಿ ನಾನು ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ. ಮಾನ್ಯ ರಾಜ್ಯಪಾಲರ ಬಾಷಣದಲ್ಲಿ ವಿಶೇಷವಾಗಿ ಬರಗಾಲದ ಬಗ್ಗೆ ಮತ್ತು ನಿರುದ್ಯೋಗ ಸಮಸ್ಯೆಯಬಗ್ಗೆ ಅಂತಹ ಒತ್ತನ್ನು ಕೊಟ್ಟಿಲ್ಲವೆಂದು ಅದರಲ್ಲಿ ತಿಳಿಸಿದ್ದೇನೆ. ಈ ಬಗ್ಗೆ ಈಗ ಬಹಳಷ್ಟು ವಿಷಯಗಳು ಮಾತನಾಡುವುದಿದ್ದರೂ ಕೂಡ ಮಾನ್ಯ ಸದಸ್ಯರ ಭಾವನೆಯನ್ನು ಅರಿತುಕೊಂಡು ಬೇರೆ ಸಂದರ್ಭದಲ್ಲಿ ನಾನು ಇದರ ಬಗ್ಗೆ ಮಾತನಾಡುತ್ತೇನೆ.

ನನ್ನ ತಿದ್ದುಪಡಿ ಈರೀತಿ ಇದೆ,

At the end of the Motion of following be added:

"But regret that there is no mention in the address about Drought situation in the State and the rise in prices of essential commodities."

ನಾನು ಇದನ್ನು ವಾಪಸ್ ಪಡೆಯುತ್ತಿದ್ದೇನೆ

ಮಂತ್ರಿಗಳು ಹೋದರೆ ಪರವಾಗಿಲ್ಲ. ಹೋಗದಿದ್ದರೆ ಆ ಕೆಲಸವನ್ನು ಅಧಿಕಾರಿಗಳು ಮಾಡುತ್ತಾರೆ. ಇದರ ಬಗ್ಗೆ ಗಮನ ಕೊಡಬೇಕು ಮತ್ತು ಈ ವಿಧೇಯಕವನ್ನು ಸರ್ಕಾರದವರು ಇಷ್ಟೊಂದು ತೀವ್ರವಾಗಿ ತಿರುವುದಕ್ಕೆ ಮುಖ್ಯವಾದ ಕಾರಣ ಮಾನ್ಯ ವಾಟಾಳ್ ನಾಗರಾಜ್‌ರವರು. ಆದುದರಿಂದ ನಾನು ಕೂಡ

ನನ್ನ ವತಿಯಿಂದ ಮತ್ತು ಸದನದ ವತಿಯಿಂದ ಅವರಿಗೆ ಅಭಿನಂಧನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮಂತ್ರಿಗಳೂ ಕೂಡ ಇದನ್ನು ಬಹಳ ಸೂಕ್ಷ್ಮವಾಗಿ ಗಮನಕೊಟ್ಟು ತಂದಿದ್ದಾರೆ. ಅವರಿಗೂ ಕೂಡ ಅಭಿನಂದಿಸಿ ನಾನು ಇದನ್ನು ಪರಿಪೂರ್ಣವಾಗಿ ಸ್ವಾಗತಿಸುತ್ತೇನೆ. ಇದರ ಜೊತೆಯಲ್ಲಿ ನಾನು ಹೇಳಿದ್ದನ್ನು ಸಹ ಆಲೋಚನೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪಾಧ್ಯಕ್ಷಣಿಯವರೆ, ಸರ್ಕಾರದವರು ಇಲ್ಲಿ ತಂದಿರತಕ್ಕ ಈ ಮಸೂದೆಯನ್ನು ನಾನು ನಿಜವಾಗಿಯೂ ಬಹಳ ಹೆಮ್ಮೆಯಿಂದ ಸ್ವಾಗತಿಸುತ್ತಾ ಈ ಸರ್ಕಾದವರನ್ನು ಅಭಿನಂಧಿಸುತ್ತೇನೆ. ಬಹಳ ದಿವಸದಿಂದ ನೆನಗುದಿಗೆ ಬಂದಿದ್ದ ಒಂದು ಕಾಯಿದೆಯನ್ನು ಸರ್ಕಾರದವರು ಬಹಳ ದಿಟ್ಟತನದಿಂದ ಇಲ್ಲ ತಂದಿರುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳನ್ನೂ ಮತ್ತು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳನ್ನೂ ಎಚ್ಚು ಅಭಿನಂದಿಸಿದರೂ ಕಡಿಮೆ ಎಂತಲೇ ಹೇಳಬಹುದು.

"ಮಾರ್ಚಿ, 1,1991ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಬಾಷಣಕ್ಕಾಗಿ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭಾಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಅಧ್ಯಕ್ಷರು: ಖಾಸಗಿ ನಿರ್ಣಯಗಳನ್ನು ಸಾಧಾರಣವಾಗಿ ಶುಕ್ರವಾರ ದಿವಸ ತೆಗೆದುಕೊಳ್ಳತಕ್ಕಂಥ ಪದ್ಧತಿ ಇರುತ್ತದೆ. ಇವತ್ತಿನದಿವಸ ಮಾನ್ಯ ಸದಸ್ಯರು ಬಹಳ ಮಂದಿ ಭಾಷಣ ಮಾಡಬೇಕೆಂದು ಇಲ್ಲಿ ಹೇಳಿದ್ದರಿಂದ ಅವರ ಭಾಷಣಕ್ಕೆ ಅವಕಾಶವನ್ನು ಮಾಡಿಕ್ಕೊಟ್ಟು ಆನಂತರ ಮುಖ್ಯಮಂತ್ರಿಗಳ ಉತ್ತರಕ್ಕೂ ಅವಕಾಶ ಮಾಡಿಕೊಟ್ಟಿದ್ದು ಆಗಿದೆ. ಈಗ ವೇಳೆ 3.20 ನಿಮಿಷಗಳಾಗಿದೆ.

ಆದ್ದರಿಂದ ಈಗ ಸಭೆಯು ಮುಂದುವರಿದು ಮತ್ತೆ ಮುಂದಿನ ಖಾಸಗಿ ನಿರ್ಣಯದ ದಿವಸ ಈ ಖಾಸಗಿ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳೋಣ. ಅಲ್ಲಿಯವರೆಗೆ ಈ ನಿರ್ಣಯ ಜೀವಂತವಾಗಿರುತ್ತದೆ.

ಈಗ ಸದನವು ಮುಂದುವರಿದು ಸೋಮವಾರ ಅಂದರೆ ದಿನಾಂಕ 18-3-1991ರಂದು ಬೆಳ್ಳಿಗ್ಗೆ 11.00 ಗಂಟೆಗೆ ಮತ್ತೆ ಸೇರುತ್ತದೆ.

(ಸದನವು 3 ಗಂಟೆ 22 ನಿಮಿಷಗಳಿಗೆ ಮುಕ್ತಾಯವಾಗಿ, ಪುನಃ 18ನೇ ಮಾರ್ಚಿ ಮಾಹೆ 1991ರ ಸೋಮವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಬಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)